# ಅಪರಂಜಿ


ತಿಳಿನಗೆಯ ಕಾರಂಜಿ

ಫೆಬ್ರವರಿ 2026




ಬಿಡಿ ಪ್ರತಿ: ರೂ. 10/–

# ಬೀChi Prakashana



1. ರೇಡಿಯೋ ನಾಟಕಗಳು
2. ಮಾತ್ರೆಗಳು
3. ತಿಂಮನ ತಲೆ
4. ದಾಸಕೂಟ
5. ಹುಚ್ಚು ಹುರುಳು
6. ಹನ್ನೊಂದನೆ ಅವತಾರ
7. ಸತೀಸೂಳೆ
8. ಸರಸ್ವತಿ ಸಂಹಾರ
9. ಖಾದೀಸೀರೆ
10. ಬೆಂಗಳೂರು ಬಸ್ಸು
11. ಹೆಣ್ಣು ಕಾಣದ ಗಂಡು
12. ಸತ್ತವನು ಎದ್ದು ಬಂದಾಗ
13. ಚಿನ್ನದ ಕಸ
14. ಕಾಣದ ಸುಂದರಿ
15. ಕಲ್ಲು ಹೇಳಿತು
16. ತಿಮ್ಮ ರಸಾಯನ
17. ದೇವನ ಹೆಂಡ
18. ಏರದ ಬಳೆ
19. ಮೇಡಮ್ಮನ ಗಂಡ
20. ಆಟೋ !
21. ಎಲ್ಲಿರುವೆ ತಂದೆ ಬಾರೋ
22. ಬಂಗಾರದ ಕತ್ತೆ
23. ಎಲ್ಲರೂ ಸಂಪನ್ನರೇ
24. ಟೆಂಟ್ ಸಿನೇಮಾ
25. ಬ್ರಹ್ಮಚಾರಿಯ ಮಗ
26. ಬೆಳ್ಳಿ ತಿಂಮ ನೂರೆಂಟು ಹೇಳಿದ
27. ಮೂರು ಹೆಣ್ಣು ಐದು ಜಡೆ
28. ಮುರಿದ ಬೊಂಬೆ
29. ಹುಲಿಯ ಬೆನ್ನ ಮೇಲಿಂದ
30. ಸುನಂದೂಗೆ ಏನಂತೆ ?
31. ಕಮಲಮ್ಮನ ಕುಂಕುಮ ಬಲ
32. 6-7 ಸ್ತ್ರೀ ಸೌಖ್ಯ
33. ಆಗಿಷ್ಟು-ಈಗಿಷ್ಟು
34. ಸೀತೂ ಮದುವೆ
35. ಲೇವಡಿ ಟೈಪಿಸ್ಟ್
36. ಆರಿದ ಚಹಾ
37. ಸಕ್ಕರೆ ಮೂಟೆ
38. ಬೆಳ್ಳಿ ಪತ್ರಗಳು
39. ಮಹಾಯುದ್ಧ
40. ಲಕ್ಷ್ಮೀ ಪೂಜೆ
41. ದೇವರು ಕೊಟ್ಟಿದ್ದು
42. ಅಮ್ಮಾವ್ರ ಕಾಲ್ಗುಣ
43. ಸಾಹುಕಾರ ಸುಬ್ಬಮ್ಮ
44. ಸುಬ್ಬಿ !
45. ಕತ್ತಲಲ್ಲಿ ಬಂದವಳು
46. ಹೆಂಡತಿ ನಕ್ಕಾಗ
47. ಚಿತ್ತದ್ದೇ ಬೇವು
48. ಕಾಮಂಣ
49. ಕಾಮಲೋಕ
50. ಮಾತನಾಡುವ ದೇವರುಗಳು
51. ಅಂದನಾ ತಿಂಮ
52. ಸಂಪನ್ನರಿದ್ದಾರೆ ಎಚ್ಚರಿಕೆ
53. ಗರತಿಯ ಗುಟ್ಟು
54. ಕಮಲೆಯ ಓಲೆಗಳು
55. ನಂಬರ್ ಐವತ್ತೈದು
56. ದೇವರಿಲ್ಲದ ಗುಡಿ
57. ಮನೆತನದ ಗೌರವ
58. ಉತ್ತರ ಭೂಪ
59. ಕನ್ನಡ ಎಮ್ಮೆ
60. ಅಮ್ಮನವರ ಇಚ್ಛಾ
61. ನರಪ್ರಾಣಿ
62. ನನ್ನ ಭಯಾಗ್ರಫಿ
63. ದೇವರಿಗೇ ಪ್ರೀತಿ
64. ಬೀchi ಬುಲ್ಲೆಟಿನ್
65. ಬೀchi ತೋಚಿದ್ದು ಗೀಚಿದ್ದು
66. ಬೊಂಬಾಟ್ ಬೀchi
67. ವಾಗ್ಬಾಣಗಳು (ಗಂಗಾವತಿ ಪ್ರಾಣೇಶ್)
68. ನಗಿಸುವವನ ನೋವುಗಳು (ಗಂಗಾವತಿ ಪ್ರಾಣೇಶ್)
69. **Best of Best** ಬರಹಗಳು ಭಾಗ-1 (ಬಿ.ಎಸ್.ಕೆ)
70. **Best of Best** ಬರಹಗಳು ಭಾಗ-2 (ಬಿ.ಎಸ್.ಕೆ)
71. ಪೊಲೀಸ್ ಎನ್‌ಕೌಂಟರ್ (ಡಾ. ಡಿ.ವಿ. ಗುರುಪ್ರಸಾದ್)
72. ಪೊಲೀಸ್ ಜೀವನದಲ್ಲಿ ಹಾಸ್ಯ (ಡಾ. ಡಿ.ವಿ. ಗುರುಪ್ರಸಾದ್)
73. ವಿಶ್ವ ಪರ್ಯಟನೆ (ಡಾ. ಡಿ.ವಿ. ಗುರುಪ್ರಸಾದ್)
74. ರಾಜೀವ್ ಗಾಂಧಿ ಭೀಕರ ಹತ್ಯೆ
75. ಮರಣದಂಡನೆಗೀಡಾದ ಕುಖ್ಯಾತ ಕೈದಿಗಳು
76. ತ್ರಿಮುಖಿ
77. ರಕ್ಷ-ಖಾ-**NALINI GOWDA**
78. ಕವನ ಸಂಕಲನ-**ARUNDATHI JOSHI**
79. THE PANDEMIC PROSE -VINOD D GANGOLLI
80. AN ATOM OF KNOWLEDGE A RESOURCE OF CURIOUS MINDS -SUBRAY SHAMBHU AVADHANI

MEENA RAMAN BOOKS

81. ESSAYS & POEMS
82. EASY COOKING OF DELICIOUS RECIPES
83. BOOK OF POEMS
84. BIRDS AND OTHER POEMS
85. EASY COOKING OF DELICIOUS RECIPES PART-II
86. CHANDRAYAAN -3 MISSION AND OTHER POEMS (Space Craft)
87. ANECDOTES OF MY STUDENT LIFE
88. EXCERPTS FROM SRIMADH BHAGAVAD GEETA
89. EASY COOKING OF DELICIOUS RECIPES PART-III
90. RAIN AND OTHER POEMS
91. EASY COOKING OF DELICIOUS RECIPES PART-IV
92. SRIMADH BHAGAVAD GEETA
93. EASY COOKING OF DELICIOUS RECIPES- PART V
94. RAMAYANA ABRIDGED



ಬೀchi

TEMPLE OF KNOWLEDGE

Ph : 080-29731414, Mob : 9845264304.
Website : www.beechi.in

ಬೆಂಗಳೂರಿನ ರಸ್ತೆಗಳಲ್ಲಿ ಗಂಡನ ಜೊತೆ

ಓಡಾಡೋವಾಗ ಹೆಂಡತಿ ಹಾಡಬೇಕಾದ ಹಾಡು :

## ಮಾನವನಾಗಿ ಹುಟ್ಟಿದ ಮೇಲೆ ಏನೇನ್ ಕಂಡಿ

## ಸಾಯೋತನಕ ಸಂಸಾರ್ದೋಳಗೆ

# ಗಂಡ - ಗುಂಡಿ



Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457







MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

## ಸಂಪಾದಕ ಮಂಡಳಿ

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್



ಚಂದಾ ವಿವರ :

ಬಿಡಿ ಪ್ರತಿ : ರೂ. 10/-

ಹತ್ತು ವರ್ಷದ ಚಂದಾ: ರೂ. 1000/-

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣವನ್ನು ಆನ್‌ಲೈನ್ ಮೂಲಕ ಕಳುಹಿಸಿ. ಬ್ಯಾಂಕ್ ವಿವರಗಳನ್ನು ಕೆಳಗೆ ನೀಡಿದೆ. ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.




# ಅಪರಂಜಿ

ತಿಳಿನಗೆಯ ಕಾರಂಜಿ


**ಸಂಪುಟ 43**

**ಸಂಚಿಕೆ – 05**

**ಫೆಬ್ರವರಿ–2026**


## ಈ ಸಂಚಿಕೆಯಲ್ಲಿ...


| | | |
|---|---|---|
| ಕಿಡಿ | ಪ್ರಕಾಶ್ | 2 |
| ಅವಿಸ್ಮರಣೀಯ ನಗೆಗಾರರು – 7 | ಶಿವಕುಮಾರ್ | 3 |
| ಅಜ್ಜಿ ಮತ್ತು ಎಸ್.ಎಸ್.ಎಲ್ಸಿ... | ಇ.ಆರ್. ರಾಮಚಂದ್ರನ್ | 9 |
| ಕಣ ಕಣದಲ್ಲೂ ಲವಣ ಲಾವಣ್ಯ | ಕೆ.ಎಸ್.ಸೋಮೇಶ್ವರ | 12 |
| ನಾನಿನ್ನೂ ಕೆಲಸದಲ್ಲಿದ್ದೀನಲ್ಲ....! | ವಿ.ವಿಜಯೇಂದ್ರ ರಾವ್ | 14 |
| ಸೋಮುಗೆ ಆದ ಲವ್ವೋ ಲವ್ವು | ಬೇಲೂರುರಾಮಮೂರ್ತಿ | 15 |
| ತುಂತುರು | ದಂಠಳ | 19 |
| ಜಾಣ ಮರೆವು ! | ಗಣೇಶ ಹೆಗ್ಗಡೆ | 22 |
| ಮೌನಾಲಿಸ | ಸುಮಾವೀಣಾ | 26 |
| ಗೊಂದಲಪುರ | ಎಸ್. ಎನ್. ಗಣನಾಥ | 28 |
| ರಂಗ ರುಕ್ಮಿಣಿ.. ಕಪ್ಪೆ ಪ್ರಸಂಗ | ವಿಲಾಸ.ನಾ.ಹುದ್ದಾರ | 33 |
| ಅಪಥ್ಯ ಷಟ್ಪದಿ | ಅಣಕು ರಾಮನಾಥ್ | 35 |
| ಆಡಿಸಿದಳೆಶೋದೆ | ನಳಿನಿ ಸೂರ್ಯಪ್ರಕಾಶ್ | 37 |
| ನಮ್ಮ ಕಾಲದಲ್ಲಿ ಅಂಗಡಿ.... | ಸಹನಾ ಪ್ರಸಾದ್ | 39 |


**ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ ಬೆಳ್ಳೂರ್**
**ಒಳಪುಟಗಳು : ನಾಗನಾಥ್ ಗೌರಿಪುರ, ದತ್ತಾ3, ರಘುಪತಿ ಶೃಂಗೇರಿ, ರಾಂಕಿ ಬೆಳ್ಳೂರ್**


ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003,
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನಂ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು-560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

***ಮುದ್ರಣ : ರವಿ ಗ್ರಾಫಿಕ್ಸ್, ಇಂಡಸ್ಟ್ರಿಯಲ್ ಟೌನ್ ರಸ್ತೆ, ರಾಜಾಜಿನಗರ, ಬೆಂಗಳೂರು-560010***



# ಅಪರಂಜಿ ಕಿಡಿ

● ಪ್ರಕಾಶ್

ವಿದ್ಯಾರ್ಥಿಗಳಿಗೆ ಸಂಶೋಧನೆಯ ಸಲುವಾಗಿ
ಪೂರಕ ಪರಿಸರ ಅಗತ್ಯ

–ಹೇಳಿಕೆ.

ಕೃತಕ ಬುದ್ಧಿಮತ್ತೆ ಏಕೋ ನೆನಪಿಗೆ ಬರುತ್ತೆ. !!

* * *

ಗೊರಗುಂಟೆ ಪಾಳ್ಯದಲ್ಲಿ ಎತ್ತರದ ನಿಲ್ದಾಣ

– ಸುದ್ದಿ

ಹಿರಿಯ ನಾಗರಿಕರು ಎಚ್ಚರದಿಂದ ಇರಬೇಕು

* * *

ಗ್ರೇಟರ್ ಬೆಂಗಳೂರಿನಲ್ಲಿ ಪ್ರತಿ 200 ಅಡಿಗೆ
ಒಂದು ಜಾಹಿರಾತು.

– ದಿನಪತ್ರಿಕೆ

ಅಪಘಾತಗಳು ಹೆಚ್ಚುತ್ತೆ ಅಂತ ಅಪರಂಜಿ ಗಾಬರಿ ಪಟ್ಟಳಂತೆ

* * *

"ಭಾರತವೇ ಮುಖ್ಯ"

– ಗೋರ್, ಅಮೆರಿಕದ ರಾಯಭಾರಿ

ನಮ್ಮ ದೇಶದಲ್ಲಿರುವ ಶಾಂತಿ ಅನುಭವ ಅವರಿಗೆ
ಅಪ್ಯಾಯಮಾನವಾದದ್ದು ಅಚ್ಚರಿಯ ಮಾತಲ್ಲ.!!

* * *

ಸಂಧಾನಕ್ಕೆ ಇರಾನ್ ಸಿದ್ಧ.

– ಟ್ರಂಪ್

ಹಾಗಲಕಾಯಿಗೆ ಬೇವಿನ ಕಾಯಿ ಸಾಕ್ಷಿ !!!

* * *

ನೈಸ್‌ಗೆ ಪರ್ಯಾಯ ಯೋಜನೆ ರೂಪಿಸಿ.

– ಹೈ ಕೋರ್ಟ್

ಅರಣ್ಯರೋಧನ ಅಂದರೆ ಇದೇ. !!!

* * *

ಹೊಸವರ್ಷದ ಹುರುಪು ನನ್ನ ಮೂಲಕ ನಗೆಯಾಗಿ
"ಸರ್ವೇ ಜನಾಃ ಸುಖಿನೇ ಭವಂತು "
ಎಂದು ಅಪರಂಜಿ ಹಾರೈಸುತ್ತಾಳೆ.

* * *

ಅವಿಸ್ಮರಣೀಯ ನಗೆಗಾರರು-7

# ಡಾ॥ ಎ.ವಿ.ಕೇಶವಮೂರ್ತಿ (ಕೇಫ)

**ಶಿವಕುಮಾರ್**



ಕೊರವಂಜಿಯು ಹುಟ್ಟಿನಿಂದ ಅದರ ಚಟುವಟಿಕೆಗಳಲ್ಲಿ ಸಹಭಾಗಿಯಾಗಿದ್ದು ಬಹು ಕಾಲ ಕೊರವಂಜಿಯೊಂದಿಗೆ ನಂಟನ್ನು ಹೊಂದಿದ್ದವರೆಂದರೆ ಡಾ॥ ಎ.ವಿ.ಕೇಶವಮೂರ್ತಿ. ಒಮ್ಮೆ ಅವರು ಮನೆಯಲ್ಲಿ ಕೊರವಂಜಿಗಾಗಿ ಲೇಖನವೊಂದನ್ನು ಬರೆಯುತ್ತಿದ್ದಾಗ ಅವರ ಮೂರು ವರ್ಷದ ಕೊನೆಯ ತಮ್ಮ ಶ್ರೀನಿವಾಸ ತನ್ನ ತೊದಲು ಬಾಯಿಂದ ಕೇಶವಣ್ಣ ಅನ್ನುವುದಕ್ಕೆ ಬದಲು "ಕೇಫಣ್ಣ" ಎನ್ನುತ್ತಾ ಬಳಿಗೆ ಬಂದನಂತೆ. ಒಂದು ಕ್ಷಣ ಅವನ ಮುಖ ನೋಡಿ ಅವನು ಹೇಳಿದ್ದನ್ನೇ ನನ್ನ ಕಾವ್ಯನಾಮವನ್ನಾಗಿ ಬಳಸಿಕೊಂಡೆ ಎನ್ನುತ್ತಾರೆ ಕೇಫ. ಕೊರವಂಜಿಯ ಪ್ರಾರಂಭದ ದಿನಗಳನ್ನು ನೆನಪಿಸಿಕೊಳ್ಳುತ್ತಾ ಕೇಫ ಹೀಗೆನ್ನುತ್ತಾರೆ.

"ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಡಾಕ್ಟರ್ ಶಿವರಾಂ ನಮ್ಮ ಮನೆಯ ಡಾಕ್ಟರಾಗಿದ್ದರು. ಅನೇಕ ವೇಳೆ ಅವರಲ್ಲಿ ಚಿಕಿತ್ಸೆ ಪಡೆದಿದ್ದೆ. ನಾನು ವೈದ್ಯನಾದಮೇಲೆ ಅನೇಕ ವೇಳೆ ನನ್ನ ಸಂಶಯ ನಿವಾರಣೆಗೆಂದು ಅವರಲ್ಲಿಗೆ ಹೋಗುತ್ತಿದ್ದೆ. ಒಂದು ಬಾರಿ ನಾನು ಹೋದಾಗ ನನ್ನ ಕೈಗೆ ಕೊರವಂಜಿಯ ಪ್ರತಿಯೊಂದನ್ನು ಕೊಟ್ಟರು. "ಇದು ನಂದೇ ಅಪರಾಧ ಕಣೋ. ಓದು. ನೀನೂ ಪೇಷಂಟುಗಳನ್ನ ನೋಡ್ತೀಯಲ್ಲಾ. ಇಲ್ಲಿಗೆ ಬಂದು ಹರಟ್ತೀಯಲ್ಲ. ಬರೀ ಹಾಗೆ ಕೊರವಂಜೀಗೆ" ಅಂದರು ರಾಶಿ.

ನನ್ನ ತಾಯಿ ಬೆಂಗಳೂರಿಗೆ ಬಂದಾಗಲೆಲ್ಲಾ ಮಾಲೂರಿನಲ್ಲಿ ಮೇಷ್ಟರಾಗಿದ್ದ ನನ್ನ ತಂದೆ ಸ್ವಯಂ ಅಡಿಗೆ ಮಾಡಿಕೊಳ್ಳುತ್ತಿದ್ದುದನ್ನು ಜ್ಞಾಪಿಸಿಕೊಂಡು –"ಸ್ವಯಂಪಾಕ" ಅಂತಒಂದು ಹರಟೆ ಬರೆದುಕೊಟ್ಟೆ. ರಾಶಿ ಮೊದಲ ಪ್ಯಾರಾ ಓದಿದರು. "ಅನ್ನ– ಅಕ್ಕಿಯನ್ನು ಪಾತ್ರೆಯಲ್ಲಿ ಹಾಕಿ, ಮೇಲೆ ಮೂರು ಬೆರಳಿನಷ್ಟು ನೀರನ್ನು ಸುರಿದು ವಲೆಯ ಮೇಲೆ ಕಾಯಿಸಿದರೆ ಮಲ್ಲಿಗೆ ಹೂವಿನ ಹಾಗೆ ಅನ್ನವಾಗುತ್ತೆ" ಅಂತ ಬರೆದಿದ್ದೆ.

"ತಿಂದರೂ ಮಲ್ಲಿಗೆ ಹೂವಿನಂತಿರುತ್ತೆ" ಅಂತ ಸೇರಿಸು , ಅಂದರು.

ಮುಂದೆ ಒಬ್ಬಟ್ಟಿನ ವಿಷಯ ಬರೆದಿದ್ದೆ.

"ಒಬ್ಬಟ್ಟು – ಹೂರ್ಣವನ್ನು ಹಿಟ್ಟಿನೊಳಗಿಟ್ಟು ತಟ್ಟಿತವದ ಮೇಲೆ ಕಾಯಿಸಿ. ಹೂರಣ– ಒಬ್ಬಟ್ಟಿನೊಳಗೆ ಇರುವ ಪದಾರ್ಥ." ಅಂತ ಬರೆದಿದ್ದೆ.

"ಭೇಷ್ ಕಣೋ – ಯು ಹ್ಯಾವ್ ಎ ಸೆನ್ಸ್ ಆಫ್ ಹ್ಯೂಮರ್. ಬರೀ ನಿಲ್ಲಿಸಬೇಡ" ಅಂತಂದ್ರು ರಾಶಿ.

ನಾ. ಕಸ್ತೂರಿಯವರೂ ನಾನೂ ಕೇವಲ ಹತ್ತೊಂಭತ್ತು ವರ್ಷಗಳ ಅಂತರದ ಅವಳಿ ಮಕ್ಕಳು ಅನ್ನಬಹುದು. ಕಾರಣ ನಾನೂ ಅವರೂ ಇಬ್ಬರೂ ಜನ್ಮತಾಳಿದ್ದು ಡಿಸೆಂಬರ್ ಇಪ್ಪತ್ತೈದರಂದು ಕ್ರಿಸ್‌ಮಸ್ ಹಬ್ಬದ ದಿನ. ನಮ್ಮಿಬ್ಬರನ್ನೂ ಹತ್ತಿರಕ್ಕೆ ತಂದದ್ದು ರಾಶಿಯವರು. ಆ ದಿನಗಳಲ್ಲಿ ರಾಶಿಯವರು ಹೈಗ್ರೌಂಡ್ಸ್‌ನಲ್ಲಿ ನಡೆಸುತ್ತಿದ್ದ ಸಿಟಿ ನರ್ಸಿಂಗ್

ಹೋಮ್ ನಲ್ಲಿ ನಾನು ವೈದ್ಯನಾಗಿದ್ದೆ. ಆ ದಿನಗಳಲ್ಲಿ ಪ್ರತಿ ತಿಂಗಳೂ ಕೊರವಂಜಿ ಹೊರಬೀಳುವ ಸಮಯದಲ್ಲಿ ಪ್ರತಿದಿನ ಕಸ್ತೂರಿಯವರು ಕೊರವಂಜಿಗೆ ಬಂದ ಲೇಖನಗಳ ಹಸ್ತಪ್ರತಿಯನ್ನು ನರ್ಸಿಂಗ್ ಹೋಮ್‌ನಲ್ಲಿ ನನ್ನೊಟ್ಟಿಗೆ ಪರಿಶೀಲಿಸುತ್ತಿದ್ದರು."

ಕೇಫ ಅವರು ಕೊರವಂಜಿಗೆ ಬರೆಯುತ್ತಿದ್ದ ಅಂಕಣಗಳಲ್ಲಿ, ತುಂಬಾ ಜನಪ್ರಿಯವಾದ ಅಂಕಣವೆಂದರೆ "ಯಾತ್ರಿಕರ ಪತ್ರ" ಇದರಲ್ಲಿ ಲೇಖಕರು ತಮ್ಮ ಗೆಳೆಯ ಹಾಗೂ ಸಹ ಯಾತ್ರಿಗಳಾದ ರಾಜ ಮತ್ತು ಚಂದಿ ಇವರುಗಳೊಂದಿಗೆ ಸೈಕಲ್‌ಗಳಲ್ಲಿ ತಲಕಾಡಿಗೆ ಯಾತ್ರೆ ಹೊರಡುತ್ತಾರೆ. ದಾರಿಯಲ್ಲಿ ಸಿಕ್ಕ ಹಳ್ಳಿಗಳಲ್ಲೆಲ್ಲಾ ಠಿಕಾಣಿ. ಅಲ್ಲಿನ ರೀತಿ ರಿವಾಜು, ನಡೆ ನುಡಿ, ಆಚಾರ ವಿಚಾರ ಹೀಗೆ ಕಂಡದ್ದನ್ನೆಲ್ಲಾ ದಾಖಲಿಸುವುದು ಇವರ ಕೆಲಸ. 1946 ರಲ್ಲಿ ಶುರುವಾದ ಇವರ ವರದಿಗಳ ಸರಣಿ ಅಪರಂಜಿಯಲ್ಲೂ ಮುಂದುವರಿಯಿತು. ಕೊನೆಯ ಪತ್ರ ಅಚ್ಚಾದದ್ದು 1992ರ ಅಪರಂಜಿಯಲ್ಲಿ. ಈ ಯಾತ್ರೆಯ ವಿಶಾಲವಾದ ಹರಹಿನಲ್ಲಿ ಕೇಫ ವಿಶ್ಲೇಷಣೆ ಮಾಡದ ವಿಷಯವಿಲ್ಲ. ಚುನಾವಣಾ ರಾಜಕೀಯ, ವಿದ್ಯಾಇಲಾಖೆಯ ಕಾರ್ಯನೀತಿ, ಕೋಮು ಪೈಪೋಟಿ ಹೀಗೆ ಹತ್ತು ಹಲವಾರು ಸಂಗತಿಗಳ ಮೇಲೆ ಒಂದು ಅತ್ಯಂತ ಚೇತೋಹಾರಿಯಾಗ ವಾರೆ ನೋಟವನ್ನು ಬೀರಿದ್ದು ಕೇಫರ ಹೆಗ್ಗಳಿಕೆ. ಐವತ್ತರ ದಶಕದಲ್ಲಿ ಹದಿ ಹರಯದ ಹುಡುಗರಾಗಿದ್ದ ನಾನು ಮತ್ತು ನನ್ನ ತಮ್ಮ ಪ್ರತಿ ತಿಂಗಳೂ ಯಾತ್ರಿಕರ ಪತ್ರವನ್ನು ಓದಲೆಂದೇ ಕೊರವಂಜಿಗಾಗಿ ಕಾಯುತ್ತಿದ್ದೆವು. ಕೇಫರವರ ಈ ಯಾತ್ರಾ ವೃತ್ತಾಂತದ ಹಲವು ತುಣುಕುಗಳು.

"ಅಂದು ರಾತ್ರಿ ಬೈಲೂರು ಸೇರಿದೆವು. ನಾವು ಬೈಲೂರು ಸೇರಿದಾಗ ಆ ಊರಿನ ಬಲಿತವರಿಗೆ ಹಿಂದೀ ಶಿಕ್ಷಣ ನಡೆಯುತ್ತಿತ್ತು. ಶಾಲೆಯಲ್ಲಿ ನಾವೂ ಕೂತೆವು. ಹಿಂದೀ ವ್ಯಾಕರಣ ಬಹಳ ರಸವತ್ತಾಗಿ ಜರುಗುತ್ತಿತ್ತು. ಹಿಂದೀ ಓದಿದವರಿಗೇ ಗೊತ್ತು–ಹಿಂದೀ ವ್ಯಾಕರಣದ ಕಷ್ಟ! ಆ ವ್ಯಾಕರಣ ಬರೆದಾತ ಅದನ್ನು ರಚಿಸುವಾಗ ಯಾವ ಕಷ್ಟದಲ್ಲಿ ಸಿಕ್ಕಿದ್ದನೋ ನನಗೆ ತಿಳಿಯದು. ಪ್ರಾಯಶಃ ಆತನಿಗೂ ಆತನ ಮಡದಿಗೂ ರಾದ್ಧಾಂತ ನಡೆಯುತ್ತಿರಬಹುದು. ಅಥವಾ ಯಾವುದೋ ಮಾರ್ವಾಡಿ ಪಠಾಣನ ಕೈಗೆ ಸಿಕ್ಕಿ ನರಳುತ್ತಿರಬಹುದು. ಅಥವಾ ರಾಜಕೀಯದಲ್ಲಿ ನುಗ್ಗಿ ಠೇವಣಾತಿ ಕಳೆಗದುಕೊಂಡಿರಬಹುದು. ನನ್ನ ಮಟ್ಟಿಗೆ ಹೇಳುವುದಾದರೆ ಕನ್ನಡವೇ ಕಸ್ತೂರಿ. ಸಿರಿಗನ್ನಡಂ ಗೆಲ್ಗೆ !

ನಾನು, ರಾಜ, ಚಂದಿ, ಹಿಂದೆ ಹಿಂದಿ ಕಲಿಯುಕ್ಕೆ ಪ್ರಯತ್ನ ಮಾಡಿದ್ದೆವು. ಇದೇ ವ್ಯಾಕರಣದ ಗಲಾಟೆಯಲ್ಲಿ ನಮಗೂ ಹಿಂದೀ ಉಪಾಧ್ಯಾಯರಿಗೂ ಮನಸ್ತಾಪ ಬಂದು ನಮ್ಮ ಶಿಕ್ಷಣ ಬಂದ್ ಮಾಡಿದೆವು. ಮನಸ್ತಾಪಕ್ಕೆ ಕಾರಣವಿಷ್ಟೇ. "ಇ" ಕಾರಾಂತ ಶಬ್ದವೆಲ್ಲಾ ಸ್ತ್ರೀಲಿಂಗವೆಂದು ಒಮ್ಮೆ ಉಪಾಧ್ಯಾಯರು ಹೇಳಿದ್ದರು. ಆಗ ಚಂದಿಗೆ ಅಸಮಾಧಾನವಾಯ್ತು. ಒಂದು ದಿನ ಉಪಾಧ್ಯಾಯರು ಹಠಾತ್ತಾಗಿ ಚಂದಿನ "ಅಶೋಕ್ ಏಕ್ ರಾಜಾ ಥಾ" ಎಂಬುದಕ್ಕೆ ಕನ್ನಡದಲ್ಲಿ ಅರ್ಥ ಕೇಳಿದರು. ಅದಕ್ಕೆ ಚಂದಿ ರಾಜನ ಮುಖ ನೋಡುತ್ತಾ, "ರಾಜನಿಗೆ ಯಾವ ಶೋಕವೂ ಇಲ್ಲ" ಎಂದ. ಉಪಾಧ್ಯಾಯರಿಗೆ ಅಸಮಾಧಾನವಾಯಿತು.

ನಾವು ಹಿಂದಿಯನ್ನು ಪೂರ್ತಿಯಾಗಿ ಬಿಡುವುದಕ್ಕೆ ಕಾರಣ ಹೀಗಿತ್ತು,

ಒಮ್ಮೆ ಉಪಾಧ್ಯಾಯರು,

"ಸೀತಾ ಸೀತೀ ಹೈ" ಎಂಬ ವಾಕ್ಯಕ್ಕೆ ಅರ್ಥ ಕೇಳಿದರು.

ಚಂದಿ –"ಸೀತೆಯು ಸೀತೆಯೇ" ಅಂತ ಹೇಳಿದ. ರಾಜ ಎದ್ದು ನಿಂತು ಚಂದಿಯನ್ನು

ಹಂಗಿಸಿ " ಸೀತೆಯು ಸ್ತ್ರೀ ಆದ್ದರಿಂದ "ಸೀತಿ" ಅನ್ನಬೇಕು" ಅಂದ.

ನನ್ನ ಸರದಿ ಬಂತು. ಚಂದಿ ರಾಜ ಇಬ್ಬರೂ ಮನೆಪಾಠ ಮಾಡಿದವರಲ್ಲ. ಆದ್ದರಿಂದ ಅವರು ತಪ್ಪಾಗಿ ಹೇಳಿದ್ದು ನನಗೆ ಆಶ್ಚರ್ಯವಾಗಲಿಲ್ಲ. ನಾನು ಸರಿಯಾಗಿ ಯೋಚಿಸಿ,

"ಸೀತೆಗೆ ಶೀತವಾಗಿದೆ" ಅಂದೆ.

ಆಗ ಮಿಕ್ಕವರೆಲ್ಲಾ ನಕ್ಕರು. ಉಪಾಧ್ಯಾಯರು ತಲೆ ಚಚ್ಚಿಕೊಂಡರು. ಆಮೇಲೆ ತಿಳಿಯಿತು. – "ಸೀತಾ ಸೀತೀ ಹೈ "ಅಂದರೆ" ಸೀತೆಯು ಹೊಲಿಯುತ್ತಾಳೆ " ಅಂತ ಅರ್ಥವಂತೆ !

ಇನ್ನೊಂದು ತುಣುಕು.

"ಹರಕೆ ಹೊತ್ತರೆ ಹನ್ನೆರಡು ವರ್ಷವಂತೆ. ಹಾಗಾಗಿದೆ ನಮ್ಮ ಯಾತ್ರೆ. ! ನಾವು ತುಂತರ ಕಟ್ಟೆ ಬಿಟ್ಟು ಭೃಂಗೇರಿ ಸೇರುವ ಹೊತ್ತಿಗೆ ನಮ್ಮ ಮೈಮೇಲಿದ್ದ ಬಟ್ಟೆಗಳು ಒಣಗಿದವು. ನಾನು ಒಂದೇ ಮನಸ್ಸಿನಿಂದ ನನ್ನ ಸೈಕಲ್ ತುಳಿಯುತ್ತಿದ್ದೆ. ನನಗೂ ತಲಕಾಡಿಗೂ ಇದ್ದ ದೂರದಲ್ಲಿ ಪ್ರತಿಯೊಂದು ಅಡಿಯನ್ನೂ ಎಣಿಸುತ್ತಾ ತುಳಿದೆ. ಭೃಂಗೇರಿಯಲ್ಲಿ ಇಳಿಯೋಕೆ ನನಗಿಷ್ಟವಿಕಲಿಲ್ಲ. ಮಧ್ಯಾಹ್ನದ ಹೊತ್ತಿಗೆ ಊರು ಸೇರುವ ಆಸೆಯಿತ್ತು. ಅದೇ ಪ್ರಕಾರ ಭೃಂಗೇರಿ ಬಿಟ್ಟು 3427 ನೇ ಅಡಿ ತುಳಿಯುತ್ತಿರುವಾಗ, ಒಂದು ತರಹ ಘಾಬರಿಯಾಯ್ತು. ಏನೋ ಒಂದು ತರಬ ನಿಶ್ಯಬ್ಧ ! ಹಠಾತ್ತನೆ ವಾಹನದಿಂದಿಳಿದೆ. ಹಿಂತಿರುಗಿ ನೋಡಿದೆ. ನಿಶ್ಯಬ್ಧತೆಯ ಕಾರಣ ಅರಿವಾಯಿತು. ನನ್ನ ಸ್ನೇಹಿತರಿಬ್ಬರೂ ನನ್ನ ಜೊತೆಯಲ್ಲಿ ಇರಲಿಲ್ಲ. ವಾಹನವನ್ನು ತಿರುಗಿಸಿ ಪುನಃ 3426 ಅಡಿಗಳನ್ನು ತುಳಿದೆ. ಭೃಂಗೇರಿ ಚೌಕದಲ್ಲಿ ರಾಜ ಚಂದಿ ಸಿಕ್ಕಿದರು. ಇಬ್ಬರೂ ಯಾವುದೇ ಜಗಳದಲ್ಲಿ ಸೇರಿದ್ದರು.

ಅಲ್ಲಿ ನಡೆಯುತ್ತಿದ್ದ ಜಗಳ ಇಷ್ಟು. ಭೃಂಗೇರಿ ವಾಲೀಬಾಲ್ ಟೀಮಿಗೂ ಜೋಗುಂಬೆ ವಾಲೀಬಾಲ್ ಟೀಮಿಗೂ ಒಂದು ಸ್ಪರ್ಧೆ ಏರ್ಪಡಿಸಿದ್ದರಂತೆ. ಆದರೆ ಭೃಂಗೇರಿ ಆಕಾಶದಲ್ಲಿ ಮೋಡ ಕವಿದು ಗುಡುಗುವಂತೆ ತೋರಿದ್ದರಿಂದ ಆ ಊರಿನ ಆಟಗಾರರು ಹೆದರಿ ಆಟವನ್ನು ಮರುದಿನ ಆಡಬೇಕೆಂದು ಹೇಳಿದರಂತೆ. ಅದಕ್ಕೆ ಜೋಗುಂಬೆಯವರು ,"ಹಾಗಾಗದು. ಮಳೆ ಬಿದ್ದರೂ ಈಜಿಕೊಂಡಾದರೂ ನಾವು ವಾಲೀಬಾಲ್ ಆಡಿಯೇ ಹೋಗುತ್ತೇವೆ" ಅಂತ ಹಠ ಹಿಡಿದರಂತೆ. ಈ ಇಬ್ಬರ ನಡುವೆ ರಾಜ ಚಂದಿ ಪಂಚಾಯಿತಿಗೆ ನಿಂತಿದ್ದರು.

ಜಗಳದ ಬಿಸಿ ಏರಿತು. ಸ್ವಾರಸ್ಯವೂ ಹೆಚ್ಚಿತು. ಭೃಂಗೇರಿಯುವರು ಜೋಗುಂಬೆಯವರನ್ನು , "ಮೀನು ಜಾತಿ" ಯವರೆಂದು ಬೈದರು. ಪ್ರತಿಯಾಗಿ ಜೋಗುಂಬೆಯವರು ಭೃಂಗೇರಿಯವರನ್ನು "ಒಂಟೆ" ಗಳೆಂದು ಕರೆದರು. ಪ್ರತ್ಯುತ್ತರವಾಗಿ ಭೃ.ರು. ಜೋ.ನ್ನು "ತಿಮಿಂಗಿಲ" ಗಳೆಂದರು. ಜೋ.ರು. ರೇಗಿ ಭೃ.ನ್ನು "ಹುಚ್ಚು ನಾಯಿ" ಗಳೆಂದರು. ಆಮೇಲೆ–

ಭೃ.ರು. ಜೋ.ನ್ನು – "ಕಪ್ಪೆಗಳು !"

ಜೋ.ರು. ಭೃ.ನ್ನು – "ಹೆಂಟೆಗೊದ್ದಗಳು !"

ಭೃ.ರು. ಜೋ.ನ್ನು – "ಮೊಸಳೆಗಳು !"

ಜೋ.ರು. ಭೃ.ನ್ನು – "ಘೇಂಡಾಮೃಗಗಳು !"

ಭೃ.ರು. ಜೋ.ನ್ನು – " ... .... ..... ! "

ಜೋ.ರು. ಭೃ.ನ್ನು – " !?!?!?!? !"

ಒಟ್ಟಿನಲ್ಲಿ ಹೋಲಿಕೆಗಳ ಕಲ್ಪನೆಗಳೆಲ್ಲಾ ಚೆನ್ನಾಗಿದ್ದವು. ಸಂಸ್ಕೃತಿ ಪ್ರಸಾರದಿಂದ ಪ್ರಯೋಜನವಿಲ್ಲ ಅಂತ ದೂರುವವರಿಗೆ ಇದೇ ಪ್ರತ್ಯುತ್ತರ ಏಕೆಂದರೆ ಈ ವಾಲೀಬಾಲ್ ಗಲಾಟೆಯಲ್ಲಿ ಕೂಡಾ ದಶಾವತಾರಗಳು ಎದ್ದು ಬಂದು ಕುಣಿದಾಡಿದವು. ರಾಜ ಭೃಂಗೇರಿಯವರ ಪರವಾಗಿಯೂ ಚಂದಿ ಜೋಗುಂಬೆಯವರ ಪರವಾಗಿಯೂ ವಾದಿಸುತ್ತ ತಮ್ಮಿಬ್ಬರಲ್ಲೇ ಒಂದು ಚಿಕ್ಕ ಯುದ್ಧ ಹೂಡಿದ್ದರು. ಅವರಿಬ್ಬರ ಚರ್ಯೆ ನೋಡಿದರೆ ಇನ್ನೇನು, ಒಬ್ಬರನ್ನೊಬ್ಬರು ಹಿಂದಿಯಲ್ಲಿ ಬಯ್ಯುಕ್ಕೆ ಶುರುಮಾಡಬೇಕು ! ಅಷ್ಟರಲ್ಲಿ ಇಬ್ಬರನ್ನೂ ಬೇರೆ ಮಾಡಿದೆ."

ಕೇಫರವರು ಕೊರವಂಜಿಗೆ ಬರೆಯುತ್ತಿದ್ದ ಸಮಯದಲ್ಲಿ ಕೇಫರ ಚಿಕ್ಕಪ್ಪ ಎ.ನಾರಾಯಣ ಐಯ್ಯರ್. ಇವರಿಗೆ ಪಿ.ಜಿ.ವುಡ್‌ಹೌಸ್ ಬರೆದ "ದ ಡ್ಯಾಮ್ಸೆಲ್ ಇನ್ ಡಿಸ್ಟ್ರೆಸ್" ಪುಸ್ತಕವನ್ನು "ಓದೋ ಇದನ್ನ ಬ್ಲಾಗಾರ್ಡ್" ಎನ್ನುತ್ತಾ ಪ್ರೀತಿಯಿಂದ ಕೊಟ್ಟರಂತೆ. ಕನ್ನಡ ಹಾಸ್ಯ ಸಾಹಿತ್ಯಕ್ಕೆ ಅದೊಂದು ದಿವ್ಯಗಳಿಗೆ. ಅಂದಿನಿಂದ ಕೇಫರವರು, ಬರ್ಟಿ ವೂಸ್ಟರ್. ಜೀವ್ಸ್, ಮಿಸ್ಟರ್ ಮುಲಿನಿರ್ ಇವರುಗಳ ಲೋಕದಲ್ಲಿ ಮುಳುಗಿದರು. ಆ ತಪಸ್ಸಿನ ಫಲವೇ ಪಾಂಡು, ಶೌರಿ, ಮಲ್ಹಾರಿರಾಯರಾಗಿ ಉದಿಸಿ ಬಂದು ಕನ್ನಡ ರಸಿಕರನ್ನು ರಂಜಿಸಿದರು.

"ವಿರಾಟ ಭವನ" ದ ಪ್ರಸಂಗಗಳೂ ಬಹು ಸ್ವಾರಸ್ಯಕರ. ಹಿಂದೆ ಕೊರವಂಜಿಯಲ್ಲಿ ಬೀರಣ್ಣ ಬರೆಯುತ್ತಿದ್ದ ಬ್ರಹ್ಮೇಂದ್ರಭವನದ ತಿಂಡಿಪೋತರಂತೆ, ಇಲ್ಲಿಯೂ ಸಹ ಮದ್ದೂರೊಡೆ, ಬಾಳೇಕಾಯಿ ಬಜೆ, ಖಾರಾಬೂಂದಿ, ಓಂಪುಡಿ, ಚೌಚೌ, ಮೊದಲಾದ ಅಡ್ಡಹೆಸರುಗಳನ್ನುಳ್ಳ ದರ್ಬಾರಿಗರಿದ್ದಾರೆ. ಈ ದರ್ಬಾರಿನ ಚಕ್ರವರ್ತಿ ಮಲ್ಹಾರಿರಾಯರು.

ಈ ದರ್ಬಾರಿನಲ್ಲಿ ನಡೆದ "ಸಾಪೇಕ್ಷ ಸಿದ್ಧಾಂತ" ವೆಂಬ ಒಂದು ಘಟನೆಯ ತುಣುಕೊಂದನ್ನು ಪರಾಂಬರಿಸಿ.

"ಹಾಯಲ್ ನಾರ್ಲೀಕರ್ ಭಾಷಣಕ್ಕೆ ಹೋಗಿದ್ದಿರೇನ್ರೀ ?" ಅಂತ ಕೇಳಿದರು ಬಾಳೇಕಾಯಿ ಬಜೆ.

ಅವರು ಯಾರನ್ನೂ ಉದ್ದೇಶಿಸಿ ಮಾತನಾಡಲಿಲ್ಲವಾದರೂ ನಮ್ಮ ವಿರಾಟಭವನದಲ್ಲಿ ಇಂತಹ ಪ್ರಶ್ನೆಗಳು ಉತ್ತರವಿಲ್ಲದೆ ಹಾಳಾಗುವುದಿಲ್ಲ.

"ಹಾಯಲ್ ನಾರ್ಲೀಕರ್ ಅಂದರೆ ಯಾರ್‍ರೀ ? ಆತ ಒಬ್ಬನಲ್ಲ – ಇಬ್ಬರು ರೀ! ಪ್ರೊಫೆಸರ್ ಹಾಯಲ್ ಬೇರೆ. ಪ್ರೊಫೆಸರ್ ನಾರ್ಲೀಕರ್ ಬೇರೆ." ಅಂತ ತಿದ್ದಿದರು ಓಂಪುಡಿ.

"ನನ್ನ ತಮ್ಮನ ಸ್ನೇಹಿತನ ತಮ್ಮ–ಹಳೇ ಇಂಟರ್ ಫೇಲು–ಅವರ ಭಾಷಣಕ್ಕೆ ಹೋಗಿದ್ದನಂತೆ. ಮರುದಿನ ನಮ್ಮ ಮನೆಗೆ ಬಂದಿದ್ದ. ನನ್ನ ತಂಗಿ ಮಗನ ಬುಗುರಿ ತೆಗೆದುಕೊಂಡು ಅದನ್ನು ಆಡಿಸಿ, ನಾರ್ಲೀಕರ್ ಭಾಷಣದ ಪರಿಚಯ ಮಾಡಿಕೊಟ್ಟ" ಅಂದರು ಚೌಚೌ.

"ಅಂದರೇ,....ನಾರ್ಲೀಕರ್ ತಮ್ಮಭಾಷಣದಲ್ಲಿ ಬುಗುರಿ ಆಡಿಸಿದ್ದರೇನು?" ಖಾರಾಬೂಂದಿ ಕೇಳಿದರು.

"ಆಡೋದೇಕೆ ಬೇಕರಿ ? ಬುಗುರಿ ಆಡಿದಹಾಗೆ ಅಂತ ಹೋಲಿಸಿದರೆ ತಿಳಿಯುಲ್ವೇ? ನಾವೆಲ್ಲಾ ಬುಗುರಿ ಆಡಿಲ್ವೇ ?" ಚೌಚೌ ಕೇಳಿದರು.

"ಅದಿರಲ್ರೀ – ನಾರ್ಲೀಕರ್ ಬುಗುರಿ ವಿಷಯದಲ್ಲಿ ಏನು ಹೇಳಿದರು ?" ಮದ್ದೂರು ವಡೆ ಪ್ರಶ್ನಿಸಿದರು.

"ಅವರು ಬುಗುರಿ ಬಗ್ಗೆ ಏನೂ ಹೇಳಲಿಲ್ಲ. ಸಾಪೇಕ್ಷತೆ ಅಥವಾ ರಿಲೆಟಿವಿಟಿ ಬಗ್ಗೆ ಒಂದು ಹೊಸ ಸಿದ್ಧಾಂತವನ್ನು ವಿವರಿಸಿದರು" ಅಂದರು ಓಂಪುಡಿ.

"ಸಾಪೇಕ್ಷತೆ ಅಂದರೆ ಏನಂತೆ ?" ಅಂತ ಮೂಲಕ್ಕೇ ಗುರಿಯಿಟ್ಟು ಕೇಳಿದರು ಮದ್ದೂರು ವಡೆ. ವಿರಾಟಭವನವೆಲ್ಲಾ ನಿಃಶ್ಯಬ್ಧವಾಯ್ತು.

ತಮ್ಮ ಸ್ಟ್ರಾಂಗ್ ಕಾಫಿಯ ಕೊನೆಯ ಗುಟುಕು ಕುಡಿದು ನಮ್ಮ ಕಡೆ ತಲೆ ಎತ್ತಿದರು ಮಲ್ಹಾರಿರಾಯರು.

"ಇವತ್ತು ಅಪರೂಪಕ್ಕೆ ನಮ್ಮ ಸಭೆ ವಿಜ್ಞಾನದ ಕಡೆ ಗಮನ ಹೊರಳಿಸಿದ ಹಾಗಿದೆ?" ಅಂದರು.

"ಮೊನ್ನೆ ಪ್ರೊಫೆಸರ್ ನಾರ್ಲೀಕರ್ ಬಂದಿದ್ದರಲ್ಲಾ –ಅವರು ಮತ್ತು ಹಾಯಲ್ ಇಬ್ಬರೂ ಸೇರಿ ಗೆಲಿಲಿಯೋ, ನ್ಯೂಟನ್, ಐನ್ಸ್ಟೀನ್ ಇವರುಗಳ ಸಿದ್ಧಾಂತವನ್ನು ಮೀರಿಸಿ ತಮ್ಮದೇ ಆದ ಒಂದು ಹೊಸ ಸಿದ್ಧಾಂತವನ್ನು ಕಲ್ಪಿಸಿದ್ದಾರಂತಲ್ಲಾ – ಅದರ ಬಗ್ಗೆ ಮಾತನಾಡುತ್ತಿದ್ದೆವು" ಅಂದರು ಓಂಪುಡಿ.

ಸ್ವಲ್ಪ ಅಹಂ ಭಾವದ ವ್ಯಕ್ತಿಯಾದರೂ, ಸಮಯದಲ್ಲಿ ಉಚಿತವಾಗಿ ಮಾತನಾಡಬಲ್ಲವರು – ಓಂಪುಡಿ ಎಂದು ನಾವು ಒಪ್ಪಿಕೊಳ್ಳಲೇ ಬೇಕು.

"ಆದರೆ ಅದೇನೋ ಬುಗುರಿ ವಿಷಯ ಬಂದ ಹಾಗಿತ್ತಲ್ಲ !" ಅಂದರು ಮಲ್ಹಾರಿರಾಯರು.

"ನನ್ನ ತಮ್ಮನ ಸ್ನೇಹಿತನ ತಮ್ಮ . ಹಳೇ ಕಾಲದ ಇಂಟರ್ ಫೇಲು. – ನಾರ್ಲೀಕರ್ ಅವರ ಭಾಷಣ ಕೇಳಿ ನಮ್ಮಲ್ಲಿಗೆ ಮರುದಿನ ಬಂದಿದ್ದ. ನನ್ನ ತಂಗಿಯ ಮಗನ ಬುಗುರಿ ಆಡಿಸಿ ಸಾಪೇಕ್ಷತಾ ಸಿದ್ಧಾಂತವನ್ನು ವರ್ಣಿಸಿದ. ಆದರೆ ಅವನಿಗೆ ಬುಗುರಿ ಆಡಿಸಲಿಕ್ಕೂ ಬರಲಿಲ್ಲ. ನಮಗೆ ಸಾಪೇಕ್ಷತಾ ಸಿದ್ಧಾಂತ ಅರ್ಥವೂ ಆಗಲಿಲ್ಲ." ಅಂದರು ಚೌಚೌ

"ನನಗೇನೋ ಅಷ್ಟಾಗಿ ಈ ಸಾಪೇಕ್ಷತಾ ಸಿದ್ಧಾಂತ, ಕ್ವಾಂಟಂ ತಿಯರಿ–ಇಂಥಾದ್ದರಲ್ಲಿ ನಂಬಿಕೆ ಇಲ್ಲ, ಅಥವಾ ಇರಲಿಲ್ಲ. ಆದರೆ ನನ್ನ ಭಾವನ ಸೋದರಳಿಯ ರಾಧಾಕೃಷ್ಣ– ತಾನು ಕಾಲೇಜು ಹಾಸ್ಟೆಲಿನಲ್ಲಿ ಇದ್ದಾಗ ತಾನು ಕಣ್ಣಾರೆ ಕಂಡ ಅನುಭವ ಕೇಳಿದ ಮೇಲೆ ನನ್ನ ಅಪನಂಬಿಕೆಯನ್ನು ಸಡಿಲಿಸ ಬೇಕಾಯ್ತು." ಅಂದರು.

ಇದನ್ನು ಕೇಳಿ ನಮ್ಮೆಲ್ಲರ ಕುತೂಹಲವೂ ಕೆರಳಿತು. ಸಾಧಾರಣ ವಿಷಯಗಳೇ ಮಲ್ಹಾರಿರಾಯರ ಕಲ್ಪನೆಯಲ್ಲಿ ಅಸಾಧಾರಣವಾಗಬಲ್ಲವು. ಹಾಗಿರುವಾಗ ಸಾಪೇಕ್ಷತಾ ಸಿದ್ಧಾಂತದಂತಹ ಮಹತ್ತರವಾದ ವಿಷಯವನ್ನು ಮಲ್ಹಾರಿರಾಯರ ಬಾಯಿಂದ ಕೇಳಲು ನಾವೆಲ್ಲರೂ ಕುತೂಹಲ ಪಟ್ಟಿದ್ದು ಆಶ್ಚರ್ಯವೇನಿಲ್ಲ.

"ನಮ್ಮ ಭಾವನ ಸೋದರಳಿಯ ರಾಧಾಕೃಷ್ಣ (ಮಲ್ಹಾರಿರಾಯರು ಮುಂದುವರಿದರು)....."

ಕೇಫರ ಮೈಗಳ್ಳರ ಸಂಘದ ಎಲ್ಲ ಪ್ರಸಂಗಗಳೂ ಇಂತಹದೇ ಪೀಠಿಕೆಯಿಂದ ಪ್ರಾರಂಭವಾಗುತ್ತವೆ. ಅನಂತರ ಮಲ್ಹಾರಿರಾಯರ ರೋಚಕ ಅನುಭವಗಳ ಹೊನಲು ಅವರ ನೆನಪಿನ ಬುತ್ತಿಯಿಂದ ಹೊರಹೊಮ್ಮುತ್ತವೆ.

1996ರಲ್ಲಿ ನಾವೆಲ್ಲರೂ ಅಪರಂಜಿಯ ಹತ್ತು ವರ್ಷದ ಹಬ್ಬವನ್ನು ಭಾರತೀಯ. ವಿದ್ಯಾಭವನದಲ್ಲಿ ಆಚರಿಸಿದಾಗ, ಕೇಫರವರನ್ನು ಚೆನ್ನೈನಿಂದ ಕರೆಸಿ ಸನ್ಮಾನಿಸಿದ್ದೆವು. ಅವರು ತಮ್ಮ ಮಗ ಸೊಸೆಯರೊಂದಿಗೆ ಚೆನ್ನೈನ ಅಡ್ಯಾರಿನಲ್ಲಿ ವಾಸಿಸುತ್ತಿದ್ದಾಗ ನಾನು ಒಮ್ಮೆ ಅವರನ್ನು ಅಲ್ಲಿ ಭೇಟಿ ಮಾಡಿದ್ದೆ. ಕೇಫ ಅವರ ಹಾಸ್ಯವು ಬಹುಮಟ್ಟಿಗೆ ವುಡ್‌ಹೌಸ್‌ನ ತಿಳಿಹಾಸ್ಯ. ಅವರ ಪಾತ್ರಗಳು ಎಂದೆಂದಿಗೂ ನಮ್ಮ ಮನಗಳಲ್ಲಿ ನೆಲಸಿ ಮುದ ನೀಡುವ ಮಾತಂತೂ ಸುಳ್ಳಲ್ಲ. ■

**ತೀರಾ ಹಿಂದುಳಿದ ಗ್ರಾಮ ಸಾರ್.**
**ರಸ್ತೆ, ವಿದ್ಯುತ್ ಸಂಪರ್ಕ ಹಾಗಿರಲಿ, ಮೂಲಭೂತ**
**ಸೌಕರ್ಯಗಳಾದ ಮೊಬೈಲ್ ನೆಟ್ ವರ್ಕ್,**
**ಇಂಟರ್ನೆಟ್ ಸಂಪರ್ಕ ಕೂಡ ಇಲ್ಲ ಸಾರ್...**



# ಅಜ್ಜಿ ಮತ್ತು ಎಸ್.ಎಸ್.ಎಲ್ಸಿ. ಮಾರ್ಕ್ಸ್

ಇ.ಆರ್. ರಾಮಚಂದ್ರನ್

ಅಜ್ಜಿ ಅರ್ಧ ಕೋಪ ಅರ್ಧ ಸಿಡಿಮಿಡಿ ಮಾಡ್ತಾ ಮನೆಗೆ ಬಂದರು.

ಯಾರ ಜೊತೆ ಜಗಳವಾಡಿ ಹೊಡೆದಾಟಕ್ಕೆ ಇಳಿಯುವಷ್ಟರಲ್ಲಿ ಮನೆಗೆ ಓಡಿ ಬಂದಿದ್ದಾರೆ ಅಂತ ಅನ್ನಿಸ್ತು.

'ಅಜ್ಜಿ! ಕೂಲ್ ಡೌನ್.. ಈ ಕೋಪ ನಿನ್ನ ಬಿಪಿಗೆ ಒಳ್ಳೆದಲ್ಲ'.

'ನೀನೊಬ್ಬ ಬೇರೆ! ಸುಮ್ಮಿರೊ! ವಿದ್ಯಾಭ್ಯಾಸನ ಹಾಳು ಮಾಡ್ತಿದಾರೆ..'

ಮೂರ್ನೇ ಕಣ್ಣಿದ್ರೆ ಯಾರನ್ನು ಬಿಡದೆ ಸುಟ್ಹಾಕಿರೋವ್ರು.

'ಆ ತರಹ ಏನಾಯ್ತಜ್ಜಿ? ಕೂತ್ಕೊ..ಸ್ವಲ್ಪ ನೀರುಕುಡಿ. ಸುಧಾರಿಸ್ಕೊ..ಆಮೇಲೆ ಮಾತಾಡೋಣ'.

'ನನಗೇನಾಗಿದೆಯೋ ಧಾಡಿ! ನಾನು ಸರಿಯಾಗೇ ಇದೀನಿ..ನಮ್ಮ ಸರ್ಕಾರ ಎಲ್ಲಿಗೆ ಬಂತೊ....ವಾಕಿಂಗ್ ನಿಂದ ಬರ್ತಾ ಸೀತಮ್ಮ ಹೇಳಿದ್ರು.. ಬರೋ ವರ್ಷದಿಂದ ಎಸ್.ಎಸ್.ಎಲ್ಸಿ. ಪರೀಕ್ಷೆಲಿ ಪಾಸ್ ಆಗಕ್ಕೆ 35ರಿಂದ 33 ಕ್ಕೆ ಇಳಿಸಿದ್ದಾರಂತೆ! ಹೀಗೇ ಆದ್ರೆ ನಮ್ಮಕ್ಕಳ ವಿಧ್ಯಾಭ್ಯಾಸದ ಗುಣಮಟ್ಟ ಜರ‍್ರಂತ ಕೆಳಗೆ ಬೀಳುತ್ತೆ ನೋಡು'.

'ರಿಲಾಕ್ಸ್ ಅಜ್ಜಿ! ಈ ತರಹ ಕೆಲಸಗಳು ನಮ್ಮ ಸರ್ಕಾರದಲ್ಲಿ ಆಗಿಂದಾಗ್ಗೆ ನಡೀತಾ ಇರುತ್ತೆ. ಈ ಸರ್ತಿ ಯಾರೋ ಮಿನಿಸ್ಟರ್ ಅಥವ ಎಮ್ ಎಲ್ಲೆ /ಎಮ್ ಎಲ್ ಸಿ ಮಗ ಅಥವ ಮಗಳು ಪರೀಕ್ಷೆಗೆ ಕೂತಿರಬೇಕು. ಅದಕ್ಕೋಸ್ಕರ ಪಾಸ್ ಆಗ್ಲಿಅಂತ ಮಾಡಿರ್ತಾರೆ..ಮುಂದಿನ ವರ್ಷ ಮತ್ತೆ ಹಳೇ 35% ವಾಪಸ್ಸು ಬರ್ಬಹುದು..'

'ಇದೆಲ್ಲಾ ವಾಪಸ್ಸು ಬರಲ್ವೊ! ಇನ್ಯಾರೋ ಮಗನೊ ಮಗಳೊ ಬರ್ತಾರೆ.. ಅವರಿಗೆ ಮಾಡಿದರಲ್ಲಾ ನಮಗೂ ಮಾಡಿ ಅಂತ ಬರುತ್ತೆ..ಎರಡು ಮೂರು ಸರ್ತಿ ಡೆಲ್ಲಿಗೆ ಹೋಗಿಬಂದ್ಮೇಲೆ ಮತ್ತೆ 33 ಕ್ಕೆ ವಾಪಸ್ಸು ಬರುತ್ತೆ.. ಇದು ಅಷ್ಟೇ ಅಲ್ಲ..'

'ಇನ್ನೇನಜ್ಜಿ?'

'ಪ್ರತಿ ಸುಬ್ಜೆಕ್ಟ್ ನಲ್ಲಿ 35 ಇದ್ದಿದ್ದು ಈಗ 30 ಬಂದರೆ ಸಾಕಂತೆ.....ಒಟ್ಟನಲ್ಲಿ ಶೇಖಡ 33 % ಬಂದ್ರೆ ಅವ್ರು ಪಾಸಾಗಿ ಕಾಲೇಜಿಗೆ ಹೋಗಬಹುದಂತೆ ಕಣೋ!'

'ಅಯ್ಯೋ!'

'ನಮ್ಮ ಎಜುಕೇಷನ್ ಡಿಪಾರ್ಟಮೆಂಟು ಏನು ಮಾಡ್ತಿದೆ. ಹುಡುಗರಿಗೆ ಚೆನ್ನಾಗಿ ತರಪೇತಿ ಕೊಟ್ಟು ಅವ್ರ ಗುಣಮಟ್ಟನ ಏರಿಸೋದು ಬಿಟ್ಟು, ನಾಚಿಕೆ ಇಲ್ದೆ ತೆಗೆಯೋ ಮಾರ್ಕನ ಕಡಿಮೆ ಮಾಡ್ತಾರಲ್ಲ.. ಅವ್ರ ಬುದ್ಧಿಗೆ ಏನು ಹೇಳೋಣ?

'ಅಜ್ಜಿ.. ನಮ್ಮ ಸೆಂಟ್ರಲ್ ಗವರ್ನಮೆಂಟ್ಗೆ ಸೇರಿರೋ ಸ್ಕೂಲ್ನಲ್ಲಿ ಹೀಗೆ ಮಾಡೀದಾರಂತೆ! ಅದನ್ನು ಅನುಸರಿಸಿ ನಮ್ಮ ರಾಜ್ಯ ಸರ್ಕಾರವೂ ಹೀಗೆ ಮಾಡೀದಾರೋ ಏನು ಕಥೆಯೋ'?

'ಅವ್ರು ಮಾಡಿದ್ರೆ ಅದೂ ತಪ್ಪೇ! ಅದನ್ನು ಅನುಕರಣೆ ನಮ್ಮವರು ಮಾಡೀದಾರೇಂದ್ರೆ ಅದು ಘೋರ ತಪ್ಪು. ಮುಂಚೆ ಕ್ಲಾಸ್ನಲ್ಲಿ ಒಂದೇ ಸಮ ಗಲಾಟೆ ಮಾಡ್ತಿದ್ರೆ ಎರಡು ಕೆನ್ನೆಗೆ ಬಿಡೋವ್ರು. ಇಲ್ದಿದ್ರೆ ಮೂಲೇಲಿ ಕುರ್ಚಿ ಕೂಡ್ಸೋವ್ರು!'

'ನಾನು ಹಾಗೆ ಕೂತೀದೀನಿ ಅಜ್ಜಿ!'

'ಅದನ್ನು ಯಾರೋ ಪುಣ್ಯಾತ್ಮರು ಹುಡುಗರ್ನ ಹೊಡೀ ಬಾರ್ದು, ಮುಟ್ಲೂ ಬಾರ್ದು ಅಂತ ರಾಗ ತೆಗೆದ್ರು.... ಈಗ ಅವರಿಗೆ ಪರೀಕ್ಷೆ ಪ್ರೆಷರ್ ಆಗತ್ತೆ ..ಅದಕ್ಕೆ ಪಾಸ್ ಮಾಡಕ್ಕೆ ಮಾರ್ಕ್ಸ ಕಡಿಮೇ ಮಾಡೋಣ ಅಂತ ಮಾಡಿದಾರೆ. ಇದು ಇಲ್ಲಿಗೇ ನಿಲ್ಲಲ್ಲ... ಮುಂದೆ 25 ಸಂಖ್ಯೆ ಚೆನ್ನಾಗಿದೆ.. ಅಷ್ಟು ಬಂದ್ರೆ ಸಾಕು ಅಂತಾರೆ.... ಅದನ್ನೂ ಮಾಡ್ತಾರೆ ನೋಡ್ಕೊ'.

'ದೇವ್ರೇ ಗತಿ!'

'ಇದು ಇಲ್ಲಿಗೇ ನಿಲ್ಲುವ ಸಮಾಚಾರ ಅಲ್ಲ. ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜಿನಲ್ಲಿ ಕರ್ನಾಟಕದಲ್ಲಿ 30 ಮಾರ್ಕ್ಸ ಬಂದರೆ ಸಾಕು ಅಂತ ಅಲ್ಲಿಗೂ ಬರುತ್ತೆ..'

'ಹೌದು.'

'ಈ ತರಹ ಅಂಕಗಳನ್ನ ತೆಗೆದು ಪಾಸಾದ ಡಾಕ್ಟ್ರರ ಹತ್ರ ಹೋಗೋಕ್ಕೆ ಯಾರಿಗೆ ಧೈರ್ಯ ಇರುತ್ತೋ? ಧನ್ವಂತರಿ ಮತ್ತು ಯಮ ಇಬ್ಬರೂ ಒಬ್ಬನೇ ಆಗ್ತಾನೆ! ಥರ್ಮಮೀಟರ್ ಹೇಗೆ ಇಡಬೇಕು, ಎಲ್ಲಿ ಇಡಬೇಕು ಅಂತ ಗೊತಿಲ್ಲದವನು ಮುಂದೆ ಹಾರ್ಟ್ ಸರ್ಜನ್ ಆಗಿಬರ್ತಾನೆ.. ಸಿಮೆಂಟು ಮರಳಿಗೆ ವ್ಯತ್ಯಾಸ ಗೊತಿಲ್ಲದವನು 30 ಅಥವ 40 ಮಹಡಿ ಸರ್ಕಾರದ ಮಲ್ಟಿ ಸ್ಟೋರಿ ಬಿಲ್ಡಿಂಗ್ನ ಕಟ್ತಾನೆ! ಅಂಥ ಕಟ್ಟಡ ಉಳಿಯುತ್ತೇನೋ?'

'ಇದು ಸರಿಯಿಲ್ಲ ಅಜ್ಜಿ.'

'ಅಂಥವನು ಪೈಲಟ್ ಆಗಿ ಪ್ಲೇನ್ ಬಿಟ್ರೆ ಕೆಳಗಿದ್ದ ವಿಮಾನ ಮೇಲಕ್ಕೆ ಹತ್ತಲ್ಲಾ....ಮೇಲೆ ಹೋಗಿರೋ ವಿಮಾನ ಕೆಳಗೆ ಬರಲ್ಲಾ! ನಮ್ಮ ರಾಜ್ಯದಲ್ಲಿ ಸರ್ ಎಂ ವಿಶ್ವೇಶ್ವರಯ್ಯ, ಸರ್ ಸಿವಿ ರಾಮನ್ ಅಂಥ ಮೇಧಾವಿಗಳಿದ್ದು, ಕಳೆದ 30 ವರ್ಷಗಳಿಂದ ವಿಶ್ವದಲ್ಲಿ ಸಾಫ್ಟ್ವೇರ್‌ಗೆ ಹೆಸರುವಾಸಿಯಾಗಿದ್ದು ನಮ್ಮ ಎಜುಕೇಷನ್ನ ಕಳಪೆ ಮಾಡಕ್ಕೆ ಹೊರಟೀದಾರೆ. ಮುಂದೆ ಮಕ್ಕಳ ಭವಿಷ್ಯ ಹಾಳಾಗುತ್ತೆ'.

'ನಿಜ'.

'ಈ 35, 33 ಸಂಖ್ಯೆ ನೋಡಿದ್ರೆ ನನಗೆ ನಿನ್ನ ವಿದ್ಯಾಭ್ಯಾಸದ ನೆನಪು ಬರುತ್ತೆ'.

'ಹೇಗೆ ಅಜ್ಜಿ?'

'ನಿನ್ನ ಅಪ್ಪ, ಅಮ್ಮ ಯಾರದೋ ಮದುವೆಗೆ ಬೇರೆ ಊರಿಗೆ ಹೋಗುವಾಗ ನಿನ್ನನ್ನು ನನ್ನ ಹತ್ರ ಬಿಟ್ಟು ಹೋಗಿದ್ದರು.. ನಿನಗೆ ಮೂರರ ಮಗ್ಗಿ ಕಲಿಸು ಅಂತ ನಿನ್ನ ಅಪ್ಪ ನನಗೆ ಹೇಳಿದ್ದ'.

'ನಿನಗೆ ಇದೆಲ್ಲಾ ಬರುತ್ತಾ ಅಜ್ಜಿ'.

'ನಾನು ಹೇಳೊದು ಕೇಳೊ! ಮೂರೊಂದ್ಲು ಮೂರು, ಮೂರೆರಡ್ಲಿ ಆರು'.

'ಕರೆಕ್ಟ್ ಅಜ್ಜಿ'.

'ನೀನು ಮೂರೆರಡ್ಲಿ ಮೂವತ್ತು ಮೂರು ಬರೀತಿದ್ದೆ!' ಎರಡು ಸರ್ತಿ 3 ಬರೀತಿದ್ದೆ! 3 * 2=33 ಬರೀತಿದ್ದೆ!'

'ಅಜ್ಜಿ! ನೀನು ತಮಾಶೆ ಮಾಡ್ತಿದ್ಯಾ?'

'ಇಲ್ಲ. ಬೇರೆ ಎಲ್ಲಾ ಮುಂದೆ ಸರಿಯಾಗಿ ಬರೀತಿದ್ದೆ. ಬಾಯಲ್ಲೂ ಸರಿಯಾಗಿ ಹೇಳ್ತಿದ್ದೆ ಮಗ್ಗೀನಾ.. ಆದ್ರೆ ಮೂರೆರಡ್ಲಿ ಅಂದ್ರೆ ನಿನಗೆ ಏನೋ ರೋಗ ಬರ್‍ತಿತ್ತು! ನಿನ್ನ ತೊಡೆನ ಗಿಲ್ಲಿ ಗಿಲ್ಲಿ ನನ್ನ ಹೆಬ್ಬೆಟ್ಟು, ತೋರು ಬೆರಳು ಎರಡೂ ಹುಣ್ಣಾಗಿತ್ತು! ಆದು ಏನಾದ್ರೂ ಮೂರೆರಡ್ಲಿ ಆರು ಬದ್ಲು 33 ಬರೀತಿದ್ದೆ. ಅದೇ 33 ವಿಚಾರ ಮಾತಾಡ್ತಿದೀವಿ ಇವತ್ತು!

'ಅಜ್ಜಿ, ನಾನು ಬಹಳ ತೊಂದರೆ ಕೊಟ್ಟೆ ಅಲ್ವಾ?'

'ನಿಮ್ಮಪ್ಪನಿಗೆ ತೊಂದ್ರೆ ಕೊಟ್ಟೆ, ನೀನು ಚೆನ್ನಾಗಿ ಏಟೂ ತಿಂದಿದೀಯ ಅವನ ಹತ್ರ'.

'ಅಜ್ಜಿ. ನನ್ನ ತೊಡೇ ಮೇಲೆ ನಿನ್ನ ಹೆಬ್ಬೆಟ್ಟು, ತೋರು ಬೆರೆಳು ಗುರ್ತು ಈಗ್ಲೂ ಹೋಗಿಲ್ಲ, ನೋಡು'.

'ಅದು 33 ರ ಮಾರ್ಕ್ಸ್ ರ ಗುರ್ತು ಕಣೋ!' ■

## ಪ್ರಿಯ ಓದುಗರೇ,

ಮೊದಲಿಗೆ ಅಪರಂಜಿ ಪತ್ರಿಕೆಯನ್ನು ತಾವುಗಳು ಬಹು ವಿಶ್ವಾಸದಿಂದ ಮನೆಗೆ ಬರಮಾಡಿಕೊಳ್ಳುತ್ತಿರುವುದಕ್ಕೆ ನಮ್ಮೆಲ್ಲರ ಕೃತಜ್ಞತೆಗಳು. ಅಪರಂಜಿ ಒಂದು ವಾಣಿಜ್ಯ ಉದ್ಯಮವಲ್ಲ. ಹಲವು ಹವ್ಯಾಸಿ ಬರಹಗಾರರು ಒಟ್ಟುಗೂಡಿ, ನಾಡಿನಲ್ಲಿ ಹಾಸ್ಯಪ್ರಜ್ಞೆಯನ್ನು ಉಳಿಸಿ ಬೆಳೆಸುವ ಒಂದು ಲಾಭರಹಿತ ಪ್ರಯತ್ನ. ಪತ್ರಿಕೆಯು ಅಪರಂಜಿಯು ಈ ನಲವತ್ತಮೂರು ವರ್ಷಗಳು ಆರೋಗ್ಯವಾಗಿ ನಡೆದು ಬರುತ್ತಿರುವುದಕ್ಕೆ ಓದುಗರ ಒತ್ತಾಸೆಯೇ ಕಾರಣ ಎಂಬ ಅಂಶವನ್ನು ನಮ್ರತೆಯಿಂದ ತಿಳಿಸಬಯಸುತ್ತೇವೆ.

ಅಪರಂಜಿಯ ಆರೋಗ್ಯಕರ ಬೆಳವಣಿಗೆಯಲ್ಲಿ ಜಾಹಿರಾತು ಹಾಗೂ ದೇಣಿಗೆಗಳ ಪಾತ್ರವೂ ಹಿರಿದು.ಆ ನಿಟ್ಟಿನಲ್ಲಿ ಅಪರಂಜಿಯ ಒಳಪುಟಗಳ ಜಾಹಿರಾತುಗಳ ದರಗಳನ್ನು ಈಗ ನಿಗದಿಸುತ್ತಿದ್ದೇವೆ. ಅವು ಇಂತಿವೆ.

**ಜಾಹಿರಾತು** : ಒಳ ರಕ್ಷಾಪುಟ (ವರ್ಣಸಹಿತ) ರೂ. 20000/– (ಹನ್ನೆರಡು ಸಂಚಿಕೆಗಳು)

ಪೂರ್ಣ ಪುಟ (ವರ್ಣರಹಿತ) ರೂ. 10000/– (ಹನ್ನೆರಡು ಸಂಚಿಕೆಗಳು)

**ದೇಣಿಗೆ** : ಒಂದು ಸಾವಿರಕ್ಕೆ ಮೇಲ್ಪಟ್ಟ ಯಾವುದೇ ಮೊತ್ತಕ್ಕೆ ಸ್ವಾಗತ. ದೇಣಿಗೆ ನೀಡಿದ ಮಹನೀಯರ ಹೆಸರುಗಳನ್ನು ಆ ತಿಂಗಳ ದೇಣಿಗೆ ಫಲಕದಲ್ಲಿ ನಮೂದಿಸಲಾಗುವುದು.

ಓದುಗರೇ, ನೀವು ಅಥವಾ ನಿಮ್ಮ ಪರಿಚಿತರ ಪ್ರೋತ್ಸಾಹ ನಮಗೆ ದೊರಕುವಂತಾಗಲಿ. ಕನ್ನಡ ಭಾಷೆಯ ಬೆಳವಣಿಗೆಯ ಬಗ್ಗೆ ಆಸಕ್ತಿ ಇರುವ ಸಂಘ ಸಂಸ್ಥೆಗಳಿಂದ ಜಾಹಿರಾತುಗಳು ಸಿಗುವಂತಾದರೆ ನಿಜಕ್ಕೂ ಅದು ಅಪರಂಜಿಯ ಸೌಭಾಗ್ಯ.ಈ ನಿಟ್ಟಿನಲ್ಲಿ ನಿಮ್ಮ ಪ್ರಯತ್ನ ಅಪರಂಜಿಗೆ ಶ್ರೀರಕ್ಷೆ.

# ಕಣ ಕಣದಲ್ಲೂ ಲವಣ ಲಾವಣ್ಯ

ಕೆ.ಎಸ್.ಸೋಮೇಶ್ವರ

ಉಪ್ಪಿಗಿಂತ ರುಚಿ ಬೇರೆ ಇಲ್ಲಾ ಅಂತ ನಟ ಉಪ್ಪಿಯವರು ಹಾಡಿ ಬಿಟ್ಟಿದ್ದಾರೆ. ಇನ್ನು ನಮ್ಮಲ್ಲಿ ಯಾವುದೇ ಅಡುಗೆ ಇರಲಿ (ಸಿಹಿ ತಿನಿಸು ಉಳಿದಂತೆ) ಲವಣ ರುಚಿಗೆ ತಕ್ಕಷ್ಟು ಇರಲೇ ಬೇಕು., ಇದು ಲವಣ ಮಾತ್ರ ಕಡಿಮೆಯಾದರೂ ಅದು ರಸನಾದ ಮೇಲಿಂದ ಒಳ ಇಳಿಯುವುದೇ ಇಲ್ಲ. ಉಪ್ಪಿಟ್ಟಾಗಲಿ ಉಪ್ಪಿನಕಾಯಿಯಾಗಲಿ ಉಪ್ಪಿಲ್ಲದಿದ್ದರೆ ಅದು ಸಪ್ಪೆಯೇ ಸರಿ.

ಇನ್ನು ಈ ಉಪ್ಪಿಗಾಗಿ ನಮ್ಮಲ್ಲಿ ಶಾಂತಿದೂತ ಮಾಡಿದ ಉಪ್ಪಿನ ಸತ್ಯಾಗ್ರಹ ದೇಶದೆಲ್ಲೆಡೆ ಸತ್ಯವಾಗಿ ಈಗ ಚರಿತ್ರೆಯ ಭಾಗವಾಗಿದೆ. ಅದೊಂದು ಕಾಲದಲ್ಲಿ ಅನೇಕ ದೇಶಗಳಲ್ಲಿ ಅಂದರೆ, ರೋಮ್, ಈಜಿಪ್ಟ್, ಇಥಿಯೋಪಿಯಾ, ಆಫ್ರಿಕ ಖಂಡದ ಹಲ ಪ್ರದೇಶಗಳಲ್ಲಿ ಉಪ್ಪಿನ ದೊಡ್ಡ ಅಚ್ಚುಗಳು ಹಣದ ರೂಪದಲ್ಲಿ ಸಾಮಗ್ರಿಗಳು ಕೊಡು ಕೊಳ್ಳುವಿಕೆಗೆ ಋಣ ಋಣವೆನ್ನುತ್ತಿದ್ದವಂತೆ. ಇದನ್ನೇ ಅಪರಾಧಿಗಳು ಜುಲ್ಮಾನೆಯಾಗಿ ಕಟ್ಟಿದರೆ ಅವರ ಶಿಕ್ಷೆಯಲ್ಲಿ ಕಡಿತ ಮಾಡುತ್ತಿದ್ದರಂತೆ. ಲ್ಯಾಟಿನ್‌ನ salt ಎಂಬ ಪದ soldier ಮತ್ತು salary ಪದಗಳಿಗೆ ಸಾಮ್ಯತೆ ಇದೆಯೆನ್ನುತ್ತಾರೆ.

ಈ ಉಪ್ಪಿಗೆ ಇತ್ತೀಚಿನ ದಿನಗಳಲ್ಲಿ ಹೊಸತೊಂದು ಆಯಾಮ ಬಂದಿದೆ. ನಮ್ಮ ಟಿವಿ ಧಾರಾವಾಹಿಗಳಲ್ಲಿ ಮನೆಯ ಕುಹಕಿಯರು (ಅದು ಹೆಣ್ಣು ಮಾತ್ರ ಎಂಬುದು ಅವರ ಅಭಿಪ್ರಾಯ) ಕಾಫಿಗೆ ಸಕ್ಕರೆಯ ಬದಲಿಗೆ ಉಪ್ಪು ಬೆರೆಸುತ್ತಾರೆ. ಆ ಆಲೋಚನೆ ಮಾಡಿದ ಧಾರಾವಾಹಿ ಕಥೆಗಾರರಿಗೆ ಕಾಫಿ ಯನ್ನು ಕಾಪಿ ಮಾಡೇ ತಿಳಿದಿಲ್ಲ. ಏಕೆಂದರೆ, ಸಕ್ಕರೆಯ ಬದಲು ಲವಣ ಮಾತ್ರ ಉಪ್ಪು ಬಿದ್ದರೂ ಆ ಕಾಫಿ ಒಡೆದು ನುಚ್ಚು ನೂರಾಗುತ್ತದೆ.

ಕೆಲವು ವರ್ಷಗಳಿಂದ ನಮ್ಮ ಟೂತ್ ಪೇಸ್ಟಿಗೆ ಉಪ್ಪಿನ ಕಡಿತ ಶುರುವಾಗಿದೆ. ಮೊದಲೆಲ್ಲ ಅದ್ಯಾವುದೋ ಹಲ್ಲು ಪುಡಿಗಳು,ಕರಿ ಇದ್ದಲಿನ ಪುಡಿ ಒಂದೆರಡು ಪೇಸ್ಟ್ ಗಳು ನಮ್ಮ ಹಲ್ಲನ್ನು ತಿಕ್ಕಿ ಕಣ್ಣು ಕೋರೈಸುವಂತೆ ಮಾಡುತ್ತಿದ್ದವು. ಅದಾದ ಮೇಲೆ ಫ್ಲೋರೈಡ್ ಅದರಲ್ಲಿ ಸೇರಿತು. ಈಗಂತೂ ಅವುಗಳ ಜಾಹೀರಾತಿನ ಪತಾಕೆಯಲ್ಲಿ ಅದೊಬ್ಬ ಆಹ್ ಎಂದು ಹಲ್ಲು ಹಿಡಿದರೆ ಸಾಕು ಅದೆಲ್ಲಿಂದಲೋ ಬ್ರೇಕಿಂಗ್ ನ್ಯೂಸ್ ಗೆ ಕಾದಿರುವ ಲಲನಾ ಮಣಿ ನಿಮ್ಮ ಟೂತ್ ಪೇಸ್ಟಿನಲ್ಲಿ ಉಪ್ಪು ಇದೆಯೇ ಅಂತ ಪ್ರತ್ಯಕ್ಷಳಾಗುತ್ತಾಳೆ. ಅಂತಹ ಬ್ರೇಕಿಂಗ್ ನ್ಯೂಸ್ ಚಿತ್ರಿಸಲು ಗಂಡು ಹೈಕಳಿಗೆ ಅವಕಾಶವಿಲ್ಲ. ಇದರ ಮುಂದುವರಿದ ಭಾಗವಾಗಿ "ನಿಮ್ಮ ಉಪ್ಪಿನಲ್ಲಿ ಐಯೋಡಿನ್ ಇದೆಯೇ" ಪ್ರಶ್ನೆ ಹುಟ್ಟಿಕೊಂಡಿದೆ. ಇನ್ನು ಕೆಲವು ಆಕ್ಟಿವ್ ಸಾಲ್ಟ್ ಹೊಂದಿದೆಯಂತೆ. ಮೊದಲೆಲ್ಲ ನಾವು ಉಪಯೋಗಿಸುವ ಉಪ್ಪಿನಲ್ಲಿ ಹರಳುಪ್ಪು ಪುಡಿ ಉಪ್ಪು ಎರಡೇ ಇದ್ದವು. ಅದೇ ನಮ್ಮಗಳ ಅಡುಗೆ ಕೋಣೆಯ ಘನತೆವೆತ್ತ ಲವಣವಾಗಿತ್ತು. ಈಗಂತೂ ಕಪ್ಪು, ಕೆಂಪು ಬಣ್ಣದವೂ ಸಿಗುತ್ತವೆ. ಹೆಸರಿನಲ್ಲಿ ಮಾತ್ರ. ಈಗ ಅದಕ್ಕೆ ಇಷ್ಟೊಂದು ವ್ಯಂಜನಗಳು. ಇನ್ನು ಉಪ್ಪೇರಿ ಅಂದರೆ ಸ್ಟೈಲಾಗಿ ಚಿಪ್ಸ್ ಎನ್ನುತ್ತಾರೆ. ಇದರ ಹೆಸರಲ್ಲೇ ಉಪ್ಪು ಇದೆ. ಆದರೆ, ಅದು ಚಿಪ್ಸ್ ತಯಾರಕರಿಗೆ ತಿಳಿದಿಲ್ಲ. ಅಂಗಡಿಗಳಲ್ಲಿ ಹೋಗಿ ಉಪ್ಪೇರಿ ಕೊಡಿ ಎಂದರೆ ಹುಬ್ಬೇರಿಸುತ್ತಾರೆ.

ಅದೊಬ್ಬ ಮುದುಕಪ್ಪ (ಗೌರವವಾಗಿ ಹಿರಿಯ ನಾಗರೀಕ ಎಂಬೋಣವೇ) ಹಿಮಾಲಯವನ್ನು ಭಾಷಣದ ಅಂಕಣವನ್ನು ಹತ್ತಿದಷ್ಟೇ ಸುಲಭವಾಗಿ ಏರಿ ಹಿಮಾಲಯದಲ್ಲಿ

ಉಪ್ಪು ಇದೆಯೇ.....ಯೇ....ಇದೆಯೇ ಎಂದು  ಏರು ದನಿಯಲ್ಲಿ  ಕೇಳುತ್ತಾನೆ. ಅದಕ್ಕೆ ಆ ಹಿಮವಂತ ಇದೇ..... ಇದೇ...... ಎಂದು ಮಾರ್ದನಿಸುತ್ತಾನೆ. ಇನ್ನು ಶಾಖಾಯ ಲವಣಾಯ ಎನ್ನುವಂತೆ ಹದವಾಗಿ ಬಾಣಲೆಯಲ್ಲಿ ಬಿಸಿ ಮಾಡಿದ ಹರಳು ಉಪ್ಪನ್ನು ಒಂದು ಹತ್ತಿ ಬಟ್ಟೆಯಲ್ಲಿ ತುಂಬಿ ಕಟ್ಟಿ ದೇಹದ  ಹಲ  ಭಾಗಗಳ ನೋವು ಶಮನ ಮಾಡಲು  ಕೂಡ ಬಳಸುತ್ತಾರೆ.  ಈಗ ಬಿಡಿ ಅದನ್ನೆಲ್ಲಾ ಮೂವ್ ಮಾಡಲು ಕ್ರೀಂ ಗಳೇ ಪ್ರತ್ಯಕ್ಷವಾಗುತ್ತವೆ.

ಅದೊಂದು ಉಪ್ಪಿನ ತಯಾರಕರ ಜಾಹೀರಾತಿನಲ್ಲಿ 'ಕ್ರಿಸ್ಟಲ್ ಸಾಲ್ಟ್' ಕನ್ನಡೀಕರಿಸಿ "ಕಲ್ ಉಪ್ಪು" ಮಾಡಿದ್ದಾರೆ. ಇದೇಕೆ ತಿಳಿಯಲಿಲ್ಲ. ಬಹುಶಃ ಇದರ  ರುಚಿ ನಮಗೆ ತಿಳಿಯಬೇಕಾದರೆ  ನಿನ್ನೆಯೇ (ಕಲ್) ಸುರಿಯಬೇಕು.  ಆಗ  ನಾಳೆ (ಕಲ್)  ಇದು ನಾಲಿಗೆಗೆ ಚಪ್ಪರಿಸಲು ಸಿಗಬಹುದೇನೋ!!

ಇಷ್ಟೆಲ್ಲ ಲವಣ ಪುರಾಣ ಕೇಳಿದ ಮೇಲೆ ನಾವುಗಳು ಉಪ್ಪಾ ತಿಂದ ಮೇಲೆ ನೀರನು ಕುಡಿಯಲೆ ಬೇಕು ಅಥವಾ ಉಪ್ಪು ತಿಂದ ಮನೆಗೆ ಎರಡು ಬಗೆಯಬಾರದು. ಅವೆರಡೂ ಆದ ಮೇಲೆ ಉಪ್ಪಿನ ಋಣ  ತೀರಿಸಲೇ ಬೇಕು ಎಂದಾದಲ್ಲಿ  ತಿನ್ನಬೇಕಾದ ಉಪ್ಪು  ಯಾವುದು ಎಂಬ ಪ್ರಶ್ನೆ  (?) ಯಾಗಿಯೇ ಉಳಿದು ಬಿಟ್ಟಿದೆ. . ಅವೆಲ್ಲ ಕರಗಿ ಮರಳಿ ಮನೆಗೆ ಎಂಬಂತೆ ಸಮುದ್ರವನ್ನು ಸೇರಿಬಿಟ್ಟರೆ   ಲವಣದ ಲವಲೇಶವೂ ಇಲ್ಲದಂತೆ  ಆಗಿಬಿಟ್ಟಿರುತ್ತದೆ. ■



# ನಾನಿನ್ನೂ ಕೆಲಸದಲ್ಲಿದ್ದೀನಲ್ಲ....!

**ವಿ.ವಿಜಯೇಂದ್ರ ರಾವ್**

ಕೋದಂಡರಾಯರು ಒಂದು ಕಂಪನಿಯಲ್ಲಿ ದೊಡ್ಡ ಹುದ್ದೆಯಲ್ಲಿದ್ದರು. ಅವರಿಗೆ ಕಾರು, ಮನೆ ಎಲ್ಲಾ ಕಂಪನಿಯು ನೀಡಿತ್ತು. ರಾಯರು ಅನೇಕ ಕಾರಣಗಳಿಂದ ಮದುವೆಯಾಗದೆ ಯಾಕೊ ಒಂಟಿಯಾಗೇ ಇದ್ದರು. ಆದರೆ, ಅವರಿಗೆ ಬಾಯಿ ಚಪಲ ಜಾಸ್ತಿಯಾಗಿಯೇ ಇದ್ದದ್ದರಿಂದ ಅವರು ಒಬ್ಬ ನುರಿತ ಅಡಿಗೆಯವರಾದ ರಾಮ್ ಭಟ್ಟರನ್ನು ರುಚಿ ರುಚಿಯಾದ ಅಡುಗೆ ಮಾಡಲು ಇಟ್ಟುಕೊಂಡಿದ್ದರು. ದಿನಾಲೂ ಅವರಿಗೆ ಚಪಾತಿ, ಎರಡು ಬಗೆಯ ಪಲ್ಯ, ಅನ್ನ, ಹುಳಿ, ಸಾರು, ಹಪ್ಪಳ, ಸಂಡಿಗೆ, ಮೊಸರು, ಉಪ್ಪಿನಕಾಯಿ ಇತ್ಯಾದಿ ಊಟದಲ್ಲಿ ಎರಡು ಹೊತ್ತು ಕಡ್ಡಾಯವಾಗಿ ಇರಲೇ ಬೇಕಿತ್ತು. ಹೀಗೆ ಅವರ ಜೀವನ ಸಾಗುತ್ತಿತ್ತು....

ಆದರೆ, ಕಾಲವು ಅದರ ಪಾಡಿಗೆ ಹೋಗ್ತಾನೆ ಇರತ್ತಲ್ಲ, ಅದರ ಸಲುವಾಗಿ, ಅವರಿಗೂ ಅರವತ್ತು ವರ್ಷಗಳು ತುಂಬಿದಾಗ, ಅವರ ಕಂಪನಿಯು ಅವರಿಗೆ ಸನ್ಮಾನ ಮಾಡಿ ನಿವೃತ್ತಿ ಗೊಳಿಸಿದರು. ಆ ಕಂಪನಿಯ ರೂಲ್ಸಿನಂತೆ ಯಾವುದೇ ರೀತಿಯ ಪಿಂಚಣಿ, ಗಿಂಚಣಿ ಸಿಗುವುದಿಲ್ಲ ಎಂದು ಅವರಿಗೆ ಗೊತ್ತಾಗಿದ್ದರಿಂದ, ಅವರು ಇನ್ಮೇಲೆ ಸ್ವಲ್ಪ, ಸ್ವಲ್ಪ ಉಳಿತಾಯ ಮಾಡೋದನ್ನು ಕಲೀಬೇಕು ಅಂದ್ಕೊಂಡು, ಅದರ ಮೊದಲ ಹಂತವಾಗಿ, ಅವರು ರಾಮಭಟ್ಟರನ್ನು ಕರೆದು–ಭಟ್ರೇ, ನನಗೀಗ ರಿಟೈರ್ ಆಗಿದೆ. ಮುಂಚಿನಂತೆ ನಾನು ಹಣ ಯದ್ವಾತದ್ವಾ ಖರ್ಚು ಮಾಡಲಾಗುವುದಿಲ್ಲ, ಆದ್ದರಿಂದ ನೀವು ಇನ್ಮೇಲೆ ಊಟಕ್ಕೆ ಬಗೆ ಬಗೆಯ ಪದಾರ್ಥಗಳನ್ನು ಮಾಡುವ ಬದಲಿಗೆ, ಬರೀ ಅನ್ನ, ಸಾರು, ಮಜ್ಜಿಗೆ ಮಾಡಿ ಸಾಕು.ಅದನ್ನೇ ನಾನು ಅಭ್ಯಾಸ ಮಾಡ್ಕೋತೀನಿ ಎಂದು ಹೇಳಿದರು.

ನಿವೃತ್ತಿಯ ನಂತರ, ಬೇರೆ ಬೇರೆ ಸಣ್ಣ ಪುಟ್ಟ ಕೆಲಸಗಳಿದ್ದರಿಂದ, ಅವನ್ನೆಲ್ಲಾ ಮೊದಲ ಹತ್ತು ಹದಿನೈದು ದಿನದಲ್ಲಿ ಮುಗಿಸುವ ಧಾವಂತದಲ್ಲಿ ಊಟದ ಕಡೆಗೆ ಹೆಚ್ಚಿನ ಗಮನ ಕೊಡದೆ, ಆ ಸಾಮಾನ್ಯ ಊಟಕ್ಕೆ ಪಳಗಿಕೊಂಡಿದ್ದರು. ಒಂದು ದಿನ, ಅವರು ಊಟದ ನಂತರ, ಸ್ವಲ್ಪ ನೀರು ಕುಡಿಯಬೇಕೆನಿಸಿ ಅಡಿಗೆ ಮನೆಗೆ ಹೋದಾಗ, ಅಲ್ಲಿ ಕಂಡದ್ದು....ಭಟ್ಟರು ತಟ್ಟೆಯ ಮುಂದೆ ಬಗೆ ಬಗೆಯ ಅಡಿಗೆಗಳಾದ ಪೂರಿ, ಸಾಗು, ಪುಳಿಯೋಗರೆ, ಪಾಯಸ, ಅನ್ನ, ಹುಳಿ, ಸಾರು, ಮೊಸರು, ಹಪ್ಪಳ, ಸಂಡಿಗೆ, ಉಪ್ಪಿನಕಾಯಿ ಇಟ್ಟುಕೊಂಡು ಊಟವನ್ನು ಮಾಡುತ್ತಿದ್ದ ಅಪೂರ್ವ ದೃಶ್ಯ....! ಇದನ್ನು ಕಂಡು ರಾಯರು ದಂಗಾಗಿ, ನೀರನ್ನು ಕುಡಿದು ಆಚೆ ಬಂದು ಕುಳಿತು, ಭಟ್ಟರು ಊಟ ಮುಗಿಸುವುದನ್ನೇ ಕಾಯುತ್ತಿದ್ದರು.

ಊಟ ಮುಗಿಸಿಕೊಂಡು ಹೊರಬಂದ ಭಟ್ಟರಿಗೆ, ರಾಯರು–ಏನು ಭಟ್ಟರೇ ಊಟ ಆಯಿತಾ ? ಊಟ ಭರ್ಜರಿಯಾಗಿ ಬಾರಿಸುತ್ತಿದ್ರಿ...! ಆದರೆ, ನಾನು ಹೇಳಿದ್ದೆನ್ನೆಲ್ಲಾ..ನನಗೆ ನಿವೃತ್ತಿಯಾಗಿದೆ, ಇನ್ಮೇಲೆ ಸರಳವಾಗಿ ಅನ್ನ, ಸಾರು, ಮಜ್ಜಿಗೆ ಮಾತ್ರ ಇರಲಿ ಅಂತ ಎಂದು ಕೇಳಿದಾಗ, ಭಟ್ಟರು–ಹೌದು ರಾಯರೇ, ನಿಮಗೆ ಹಾಗೆ ಮಾಡಿ ಬಡಿಸ್ತಾ ಇದ್ದೀನಲ್ಲ ಎಂದರು. ಆಗ ರಾಯರು–ಅದೇನೋ ಸರಿ, ಆದರೆ, ನೀವು ಮಾತ್ರ.... ನೋಡಿದ್ರೆ.. ಅಂದಾಗ, ಭಟ್ಟರು– ಓಹ್, ಅದಾ..ಹೌದು ಸರ್, ನೀವು ನಿವೃತ್ತಿ ಹೊಂದಿದ್ದೀರಾ. ಆದರೆ, ನಾನು ಇನ್ನೂ ಕೆಲಸದಲ್ಲಿ ಇದ್ದೀನಲ್ಲ...ಅದಕ್ಕೆ ಎಂದಾಗ, ರಾಯರು ಕಕ್ಕಾಬಿಕ್ಕಿಯಾಗಿ ಪೆದ್ದನಗೆ ಬೀರಿದರು...! ■

# ಸೋಮುಗೆ ಆದ ಲವ್ವೋ ಲವ್ವು

ಬೇಲೂರುರಾಮಮೂರ್ತಿ

ಇದು ಸೋಮು ಬದುಕಿನ ಸುಮಾರುಇಪ್ಪತ್ತು ವರ್ಷಗಳ ಹಿಂದಿನ ಕತೆ. ಅವನು ಮನೆಯಲ್ಲಿಯಾವುದೋಕಡತ ನೋಡುವಾಗ ಒಂದು ಹಾಳೆ ಸಿಕ್ಕಿತು. ಅದನ್ನು ಕಂಡು ಅವನಿಗೆ ಒಳಗೊಳಗೇ ನಗು. ಆ ದಿನಗಳಲ್ಲಿ ಸೋಮುಗೆ ಪ್ರೀತಿ, ಪ್ರೇಮ, ಲವ್ ಅಟ್ ಫಸ್ಟ್ ಸೈಟ್ ಮುಂತಾದುವುಗಳ ಬಗೆಗೆ ಅಷ್ಟು ಗಮನ ಇರಲಿಲ್ಲ. ಸುಂದರವಾದ ಹುಡುಗಿಯರನ್ನು ಕಂಡಾಗಲೂ ಅವನಿಗೆ ಏನೂ ಅನಿಸುತ್ತಿರಲಿಲ್ಲ. ಸೋಮು ಸ್ನೇಹಿತ ಎವರಿಡಾಗ್ ಹ್ಯಾಸ್‌ಇಟ್ಸ್‌ಡೇ, ಡೋಂಟ್ ವರಿ ಸೋಮು ನೀನೂ ಪ್ರೀತಿಯಲ್ಲಿ ಬೀಳೋದನ್ನು ನಾವೂ ನೋಡ್ತೀವಿ ಅಂದಿದ್ದ. ಎಷ್ಟೋ ದಿನ ಸೋಮು ನನ್ನ ಹಣೇಲಿ ಲವ್ ಮ್ಯಾರೇಜ್ ಬರೆದಿಲ್ಲ ಓನ್ಲೀ ಅರೇಂಜ್ಡ್ ಮ್ಯಾರೇಜ್ ಇರಬೇಕು ಅಂದುಕೊಂಡಿದ್ದ ಎಲ್ಲೀವರೆಗೆ ಅಂದರೆ ಆಫೀಸಿಗೆ ಒಂದು ಸುಂದರವಾದ ಹುಡುಗಿ ಬರುವವರೆಗೂ. ಮೈಸೂರಿನ ಕಛೇರಿಗೆ ನೇಮಕವಾದ ಹುಡುಗಿಯನ್ನು ಅವಳ ತಂದೆ ತಾಯಿಯರ ಕೋರಿಕೆಯ ಮೇರೆಗೆ ಬೆಂಗಳೂರಿನ ಕಛೇರಿಗೆ ಕಳಿಸಿದ್ದರು. ಹೆಸರು ಗೌರಿ. ತುಂಬಾ ಚುರುಕಾದ ಹುಡುಗಿ. ಅವಳು ಸೋಮು ಪಕ್ಕದಲ್ಲೇ ಕೂರುತ್ತಿದ್ದಳು. ಸೋಮು ಸ್ವಲ್ಪ ಸೀನಿಯರ್ ಆದ್ದರಿಂದ ಗೌರಿ ಸೋಮುನ ಸರ್ ಸರ್ ಅಂದು ಅವಳ ಅನುಮಾನಗಳನ್ನು ಕೇಳಿ ಬಗೆಹರಿಸಿಕೊಳ್ಳುತ್ತಿದ್ದಳು. ಹುಡುಗಿಯ ಮನದಲ್ಲಿ ಏನೂ ಇಲ್ಲ. ಊಟ ಮಾಡುವಾಗ ಸರ್ ನಮ್ಮನೇಲಿ ನಮ್ಮಮ್ಮ ಇವತ್ತು ಬದನೇಕಾಯಿ ಬಾತ್ ಮಾಡಿದ್ದಾರೆ ಸ್ವಲ್ಪ ಕೊಡ್ಲಾ ಅಂತ ಕೇಳೋಳು. ಸೋಮು ಹೊರಗಡೆ ಕಾಫಿಗೆ ಹೋದಾಗ ಸರ್ ಮಿತ್ರ ಕೆಫೆಲಿ ಅಂಬೊಡೆ ತುಂಬಾ ಚನ್ನಾಗಿರುತ್ತಂತೆ ನನಗೆ ಎರಡು ಆಂಬೊಡೆ ಕಟ್ಟಿಸಿಕೊಂಡು ಬನ್ನಿ ಸರ್ ಅಂತ ದುಡ್ಡು ಕೊಡೋಳು. ಬಹಳ ಸರಳವಾಗಿ, ಸಹಜವಾಗಿ, ಸ್ನೇಹ ಪೂರ್ವಕವಾಗಿ ಕೆಲಸ ಮಾಡಿಕೊಂಡು ಎಲ್ಲರ ಮೆಚ್ಚುಗೆಗೆ ಪಾತ್ರವಾದಳು. ಸೋಮು ತುಂಬಾ ಕೆಲಸ ಹಚ್ಚಿಕೊಂಡು ತಲೆಕೆಡಿಸಿಕೊಂಡು ಇದ್ದರೆ ಗೌರಿ ಸರ್ ನಾನು ನಿಮಗೆ ಸ್ವಲ್ಪ ಹೆಲ್ಪ್ ಮಾಡ್ಲಾಅಂತ ಕೇಳೋಳು.

ನೋಡ್ತಾ ನೋಡ್ತಾ ಆಗೋಗೈತೆ ಶಾನೆ ಪಿರೂತಿ, ತುಂಬಾ ನೋಡ್ಬೇಡಿ ಲವ್ವು ಆಯ್ತದೆ, ಅನ್ನೋ ಹಾಗೆ ಒಂದೊಂದು ಸಾರಿ ಸೋಮುಗೆ ಗೌರಿ ಮೇಲೆ ಪ್ರೀತಿ ಉಂಟಾಗೋ ಛಾಯೆ ಕಾಣಿಸಿತು. ಯಾವ್ಯಾವುದೋ ಸಿನಿಮಾ ಹಾಡನ್ನು ಗೌರಿ ನನಗೇ ಹೇಳುತ್ತಿದ್ದಾಳೆ ಅನಿಸೋದು. ಅವುಗಳಲ್ಲಿ ಆಣೆ ಮಾಡಿ ಹೇಳುತೀನಿ ನಾನು ನಿನ್ನವಳು ಎನ್ನೋದು ಸೋಮುಗೆ ಪದೇ ಪದೇ ನೆನಪಿಗೆ ಬರೋದು. ಪಕ್ಕದಲ್ಲೇ ಕೂತಿರುವ ಗೌರಿಯನ್ನು ಯಾವ್ಯಾವ ಕೋನಗಳಿಂದ ನೋಡಬಹುದೋ ಅಷ್ಟೂ ಕೋನಗಳಿಂದ ನೋಡುತ್ತಿದ್ದ. ಕಡೆಗೊಂದು ದಿನ ಇವಳು ನನಗೆ ಖಂಡಿತಾ ಜೀವನ ಸಂಗಾತಿಯಾಗಬಹುದು ಅನಿಸಿತು. ಆದರೆ ಪ್ರಪೋಸಲ್ ಹೇಗೆ ಎನ್ನುವುದು ತಿಳಿದಿರಲಿಲ್ಲ. ಅವಳಿಗೆ ಕೆಲಸದಲ್ಲಿ ಹತ್ತಿರವಾಗುತ್ತಾ ಆಗುತ್ತಾ ನಂತರ ತನ್ನ ಲವ್ ಅವಳ ಮುಂದೆ ಹೇಳಬೇಕು ಅಂದುಕೊಂಡ. ಆಫೀಸಿನ ಇತರರಿಗೂ ಇದು ತಿಳಿಯದೇ ಹೋಗಲಿಲ್ಲ. ಕೆಲವರು ಸೋಮುನ ಉತ್ತೇಜನ ಮಾಡಿದರೆ ಇನ್ನು ಕೆಲವರು ಸುಮ್ಮನೆ ಕನಸು ಕಾಣುವುದು ಒಳ್ಳೆಯದಲ್ಲ ಮೊದಲು ಸೂಕ್ಷ್ಮವಾಗಿ ಅವಳ ಪೂರ್ವಾಪರ ವಿಚಾರಿಸು ಅಂತ ಸಲಹೆ ಕೊಟ್ಟರು. ಅದು ಸೋಮುಗೆ ಸರಿ ಅನಿಸಿತು.

ಒಂದೊಂದು ದಿನ ಹಾಗೇ ಮಾತಾಡುವಾಗ ಮನೇಲಿ ಯಾರ್‍ಯಾರಿದ್ದೀರ, ನೀವು

ಓದಿದ್ದೆಲ್ಲಾ ಎಲ್ಲಿ, ನಿಮ್ಮ ತಂದೆ ಎಲ್ಲಿ ಕೆಲಸ ಮಾಡುತ್ತಾರೆ ಅಂತೆಲ್ಲ ವಿಚಾರಿಸಿಕೊಂಡ. ಇಂಥಾ ದಿನಗಳಲ್ಲೇ ಗೌರಿ ಸೋಮು ಬಳಿ ಸರ್ ನಾನು ನಿಮ್ಮತ್ರ ಒಂದಿಷ್ಟು ವೈಯಕ್ತಿಕ ವಿಚಾರಗಳನ್ನು ಹಂಚಿಕೊಂಡು ನಿಮ್ಮ ಸಲಹೆ ಕೇಳಬೇಕು ಅಂದುಕೊಂಡಿದ್ದೀನಿ, ನೀವು ಏನೂ ಅಂದ್ಕೊಳಲ್ವಾ ಸರ್ ಅಂತ ಕೇಳಿದಳು. ಸೋಮು ರೊಟ್ಟಿಜಾರಿ ತುಪ್ಪದಲ್ಲಿ ಬಿತ್ತು ಅಂದುಕೊಂಡು ಅಯ್ಯೋ ಅದಕ್ಕೇನಂತೆ ಕೇಳಿ, ನನಗೆ ಏನು ತಿಳಿದಿದೆಯೋ ಎಷ್ಟು ತಿಳಿದಿದೆಯೋ ಹೇಳ್ತೀನಿ ಅಂದ.ಆದರೆಗೌರಿ ಸೋಮು ಬಳಿ ಯಾವ ವಿಚಾರವನ್ನೂ ಹೇಳಲೇ ಇಲ್ಲ. ಸೋಮುನೇ ಪದೇ ಪದೇ ಕೇಳಿದಾಗ ಹೇಳ್ತೀನಿ ಸರ್, ಎಲ್ಲಕ್ಕೂ ಒಂದು ಸಮಯ ಅಂತ ಇರುತ್ತಲ್ಲ ಅಂದಳು. ಅವಳು ಏನೂ ಹೇಳದೇ ಸೋಮುಗೆ ಗೌರಿ ಮನೇಲಿ ಯಾರ್‍ಯಾರಿದಾರೆ, ಅವರ ಕುಟುಂಬದ ಶಕ್ತಿ, ಮತ್ತು ಬಲಹೀನತೆಗಳೇನು, ಅವರು ಬಡವರಾ ಶ್ರೀಮಂತರಾ, ಗೌರಿ ಒಬ್ಬಳೇ ಮಗಳಾ ಅಥವಾ ಇವಳೇ ಸಂಸಾರ ತೂಗಿಸಬೇಕಾ ಎನ್ನುವುದೆಲ್ಲಾ ಗೊತ್ತಾಗಲಿಲ್ಲ.

ಅವತ್ತು ಸೋಮು ಒಂದು ದಿನ ರಜ. ಮರುದಿನ ಬಂದಾಗಗೌರಿ ಬಹಳ ತುರ್ತು ಕೆಲಸದಲ್ಲಿದ್ದಳು. ಸೋಮುನ ಅವಳು ಮಾತಾಡಿಸಲೂ ಇಲ್ಲ. ಊಟದ ಸಮಯದಲ್ಲಿ ಗೌರಿನೇ ಸೋಮು ಸರ್, ಬಾಸು ನೆನ್ನೆ ಒಂದು ಫೈಲ್ ಕೊಟ್ಟಿದಾರೆ ಅದು ನೂರಿಪ್ಪತ್ತು ಪೇಜಿದೆ. ಇನ್ನೆರಡು ದಿನಗಳಲ್ಲಿ ಅದನ್ನು ರೆಡಿ ಮಾಡಿಕೊಡಬೇಕಂತೆ. ಸುಮ್ಮನೇ ಟೈಪ್ ಮಾಡುವುದಲ್ಲ, ಅನಲೈಸ್ ಮಾಡಬೇಕು. ನನಗೇನೋ ಇದುಕಷ್ಟದ ಕೆಲಸ ಅನಿಸ್ತಿದೆ ಅಂದಳು. ಮೇಡಂ ನಾನಿರುವಾಗ ನಿಮಗೆ ಏನು ಕಷ್ಟ ಹೇಳಿ. ನಾನು ನಿಮಗೆ ಸಹಾಯ ಮಾಡ್ತೀನಿ, ನೀವು ಹೇಳಿ ಅಂದು ಅವಳಿಗೆ ಸಹಾಯ ಮಾಡಲಾರಂಭಿಸಿದ. ಅದರಿಂದ ಅವಳ ಹೊರೆ ಇಳಿಯಿತು. ಮರುದಿನ ಗೌರಿ ರಜ ಹೋಗಬೇಕು. ಬಾಸು ರಜ ಕೊಡೋಕೆ ಆಗೋಲ್ಲ ಅಂತಿದ್ರು. ಇಲ್ಲ ಸರ್ ಹೇಗಾದರೂ ಮಾಡಿ ನೀವು ಹೇಳಿರುವ ಸಮಯಕ್ಕೆ ಆ ಫೈಲ್ ರೆಡಿ ಮಾಡ್ತೀನಿ ಅಂದುರಜತಗೊಂಡು ಹೋದಳು. ಹೋಗುವ ಮೊದಲು ಸೋಮುಗೆ ಕೈ ಕುಲುಕಿ ಸೋಮು ಸರ್ ಈ ಫೈಲಲ್ಲಿರೋದನ್ನು ನಿಮ್ಮ ಕೈಲಿ ಎಷ್ಟು ಸಾಧ್ಯವೋ ಅಷ್ಟನ್ನು ಟೈಪ್ ಮಾಡಿರಿ ಮಿಕ್ಕಿದ್ದನ್ನು ನಾಳೆ ನಾನು ಬಂದು ನೋಡ್ತೀನಿ ಅಂದಳು. ಗೌರಿ ಮರುದಿನ ಬರುವ ಹೊತ್ತಿಗೆ ಐದಾರು ಪುಟಗಳನ್ನು ನೀಟಾಗಿ ಟೈಪ್ ಮಾಡಿದ್ದ. ಅದನ್ನು ಕಂಡು ಗೌರಿ ಬಹಳ ಸಂತೋಷಪಟ್ಟಳು. ಮನೆಯಿಂದ ಮಾಡಿಕೊಂಡು ಬಂದಿದ್ದ ಕೊಬ್ಬರಿ ಮಿಠಾಯಿ ಕೊಟ್ಟಳು, ಇದನ್ನು ತಿಂದ ಮೇಲೆ ಖಾರ ಬೇಕು ಅನಿಸುತ್ತೆ ಬನ್ನಿ ಮಿತ್ರ ಕೆಫೆಗೆ ಹೋಗಿಬರೋಣ ಅಂದ.

ಅವತ್ತು ಸೋಮು ಗೌರಿ ಬಳಿ ಬಂದು ನನಗೆ ಈಗ ಹೆಚ್ಚಿನ ಕೆಲಸ ಇಲ್ಲ. ನಿಮ್ಮ ಫೈಲ್ ಕಂಪ್ಯೂಟರಿಗೆ ಹಾಕಿ ಕೊಡ್ತೀನಿ ಕೊಡಿ ಅಂತತಗೊಂಡು ಹೋದ. ಸಂಜೆ ಗೌರಿ ಮನೆಗೆ ಹೋಗುವಾಗ ಮೇಡಂ ನಾನು ಮಾಡಿರುವಷ್ಟನ್ನು ನಿಮ್ಮ ಮೈಲ್ಐಡಿಗೆ ಹಾಕ್ತೀನಿ ಮನೇಲೇ ನೀವು ನೋಡಿ ಎಡಿಟ್ ಮಾಡಿಕೊಂಡು ಬರಬಹುದು ಅಂದ. ಆಗಲಿ ಅಂದು ಗೌರಿ ಹೊರಟಳು.

ಇದೇ ಛಾನ್ಸು ಅಂತ ಸೋಮು ಅವತ್ತು ಗೌರಿಗೆ ಬಹಳ ಆಕರ್ಷಕವಾದ ಪದಗಳಿಂದ ಒಂದು ಲವ್ ಲೆಟರ್‌ಟೈಪ್ ಮಾಡಿದ. ಆಫೀಸ್ ಕಾಗದಗಳನ್ನು ಟೈಪ್ ಮಾಡದೇ ಬರೀ ಲವ್ ಲೆಟರನ್ನು ಮಾತ್ರ ಟೈಪ್ ಮಾಡಿಸರಿಯಾಗಿದೆಯಾ ಅಂತ ಒಂದು ಹತ್ತು ಸಾರಿ ಓದಿ, ಅದನ್ನು ಅಲ್ಲಲ್ಲಿ ಎಡಿಟ್ ಮಾಡಿ ಶೃಂಗಾರ ಚಿಮ್ಮಿಸುವಂತಹ ಪದಗಳನ್ನು ಉಪಯೋಗಿಸಿ ಬರೆದ. ಅದನ್ನು ಧೈರ್ಯದಿಂದ ಗೌರಿಗೆ ಮೈಲ್ ಮಾಡಿ ಮನೆಗೆ ಹೋದ. ರಾತ್ರಿಯೆಲ್ಲಾ ಕನಸಿದೋ ನನಸಿದೋ ಎನ್ನುವಂಥ ಭಾವ.

ಮರುದಿನ ಆಫೀಸಿಗೆ ಬಂದವಳೇ ಗೌರಿ ಬಹಳ ಸಿಟ್ಟಿನಿಂದ ಸೋಮು ಬಳಿ ಬಂದು ವಾಟ್ ನಾನ್ ಸೆನ್ಸ್ ಇದು ಅಂದು ಅವನು ಮೈಲ್ ಮಾಡಿದ್ದ ಲವ್ ಲೆಟರ್ ತೋರಿಸಿದಳು. ಸೋಮು ಅದೂ ಅದೂ ಅಂತ ತೊದಲುವಾಗ ಗೌರಿ ಕೈ ಛಟೀರ್ ಎನ್ನುವ ಶಬ್ದದೊಡನೆ ಸೋಮು ಕೆನ್ನೆ ತಗುಲಿತು. ಕಲೀಗ್ಸ್ ಅಂದ್ರೆ ಏನಂದ್ಕೊಂಡಿದೀರ. ಫೈಲ್‌ಟೈಪ್ ಮಾಡ್ತೀನಿ ಅಂತ ಇದನ್ನಾ ಮಾಡೋದು. ನಾನು ಬಾಸ್‌ಗೆ ಹೇಳ್ತೀನಿ. ನಿಮ್ಮ ಮರ್ಯಾದೆತೆಗೀತೀನಿ ಅಂತಗೌರಿ ಬಾಸ್ ಕೋಣೆಗೆ ಹೋಗ್ತಿದ್ದಾಗರೀ ಗೌರಿ ಮೇಡಂ ಬೇಡಕಣ್ರೀ ಬೇಡಕಣ್ರೀ ಐ ಆಮ್ ಸಾರಿ ಅಂತ ಜೋರಾಗಿ ಕೂಗ್ತಿದ್ದಾಗ ಎಚ್ಚರವಾಯಿತು. ಕೋಣೆಯಲ್ಲಿ ಒಬ್ಬನೇ ಇದ್ದ. ಅವನು ಇದ್ದುದೂ ಒಬ್ಬನೇ. ಯಾರಾದರೂ ಕೇಳಿಸಿಕೊಂಡರೋ ಎನ್ನುವ ಭಯ ಇರಲಿಲ್ಲ.

ಆದರೆ ಈಗ ಆಫೀಸಿಗೆ ಹೇಗೆ ಹೋಗೋದು. ಗೌರಿ ನಾನು ಮೈಲ್ ಮಾಡಿರುವ ಲವ್ ಲೆಟರ್ ಓದಿರ್‍ತಾಳೆ. ಎಲ್ಲರ ಮುಂದೆ ಅವಮಾನವಾಗೋದು ನಿಜ ಅನಿಸಿ ಬೆವರಿದ. ಇವತ್ತು ಆಫೀಸಿಗೆ ಚಕ್ಕರ್ ಹಾಕಲೇ ಅಂತ ಯೋಚಿಸಿದ. ಒಂದು ಹುಡುಗಿ ಇಷ್ಟ ಆದರೆ ಲವ್ ಲೆಟರ್ ಬರೆಯೋದು ಹುಡುಗರ ಆಜನ್ಮಸಿದ್ಧವಾದ ಹಕ್ಕು. ಅಷ್ಟಕ್ಕೂ ಅದರಲ್ಲಿ ಕೆಟ್ಟ ಪದಗಳನ್ನೇನೂ ಉಪಯೋಗಿಸಿಲ್ಲ. ಆದಷ್ಟೂ ಗೌರವವಾಗೇ ಬರೆದಿದೀನಿ. ಇಷ್ಟರ ಮೇಲೆ ಏನಾಗುತ್ತೋ ನೋಡೋಣ ಅಂತ ಧೈರ್ಯದಿಂದಲೇ ಆಫೀಸಿಗೆ ಹೋದ.

ಗೌರಿ ಆಫೀಸಿಗೆ ಬಂದಾಗ ಬಹಳ ತುರ್ತಿನ ಕೆಲಸದಲ್ಲಿ ಇದ್ದಂತೆ ಕತ್ತು ಬಗ್ಗಿಸಿ ಕೂತಿದ್ದ. ಗೌರಿಗುಡ್ ಮಾರ್ನಿಂಗ್ ಸರ್ ಅಂದಳು. ಗುಡ್ ಮಾರ್ನಿಂಗ್ ಅಂದು ಸುಮ್ಮನೆಕೂತ. ಗೌರಿ ತನ್ನ ಕೆಲಸದಲ್ಲಿ ನಿರತಳಾದಳು. ಎಷ್ಟೊತ್ತಾದರೂ ಗೌರಿಯ ರೌದ್ರಾವತಾರ ಕಾಣದೇ ಹೋದಾಗ ಬಹುಶ: ಅವಳು ನನ್ನ ಮೈಲ್ ನೋಡಿಲ್ಲ ಅನಿಸಿತು. ಇಡೀ ಫೈಲ್‌ಪೂರ್ತಿ ಕಂಪ್ಯೂಟರಿಗೆ ಹಾಕಿ ಅವಳಿಗೆ ಕೊಟ್ಟು ಮೇಡಂ ನಿಮ್ಮ ಕೆಲಸ ಪೂರ್ತಿ ಆಗಿದೆ ಅಂದ. ಗೌರಿ ಕೈ ಮುಂದೆ ಚಾಚಿ ಥ್ಯಾಂಕ್ಯೂ ಸರ್. ಆಫೀಸಿನ ಕೆಲಸದಲ್ಲಿ ಇದು ನನ್ನ ಕೆಲಸ ಇದು ಅವರ ಕೆಲಸ ಅಂತ ನೀವು ಬೇರೆ ಮಾಡೋದಿಲ್ಲ. ಆದರೆ ಕೆಲವು ವಿಚಾರಗಳಲ್ಲಿ ನೀವು ಸ್ಲೋ ಅಂದಳು. ಯಾವ ವಿಚಾರ ಮೇಡಂ ಅಂತ ಕೇಳಿದ. ಗೌರಿ ನಕ್ಕು ಕೆಲಸ ಮುಂದವರಿಸಿದಳು.

ಊಟದ ಸಮಯದಲ್ಲಿ ಗೌರಿ ಡಬ್ಬಿಯ ಮುಚ್ಚಳದಲ್ಲಿ ಎರಡು ಸಬ್ಬಸಿಗೆ ಸೊಪ್ಪಿನ ಆಂಬೊಡೆ ಇಟ್ಟು ಸೋಮುಗೆ ಕೊಟ್ಟಳು. ಸೋಮು ಆಂಬೊಡೆ ತಿನ್ನುತ್ತಾ ಇದ್ದಾಗ ಆಂಬೊಡೆ ಇಟ್ಟಿದ್ದ ಕಾಗದ ಅವನನ್ನು ಸೆಳೆಯಿತು. ಅದರಲ್ಲಿ ನೆನ್ನೆರಾತ್ರಿ ಮನೇಲಿ ನಿಮ್ಮ ಮೈಲ್ ನೋಡಿದೆ. ಫೀಮೆಲ್ ವಿಚಾರದಲ್ಲಿ ಈ ಮೇಲ್ ತುಂಬಾ ನಿಧಾನ ಅನಿಸಿತು. ವಾಸ್ತವವಾಗಿ ನನ್ನ ಮನದಲ್ಲೂ ನೀವಿದ್ರಿ. ಆದರೆ ನನಗೆ ನಿಮ್ಮ ಮನದಾಸೆ ತಿಳಿದಿರಲಿಲ್ಲ. ಆದರೆ ಮೊನ್ನೆ ದಿಢೀರ್ ಅಂತ ನನ್ನ ಅಮ್ಮನ ಕಡೆಯ ಸಂಬಂಧಿ ಬಂದು ನನ್ನನ್ನು ಒಪ್ಪಿಕೊಂಡು ಹೋದರು. ನನಗೂ ಆ ಸಂಬಂದ ಇಷ್ಟ ಆಯಿತು. ಇನ್ನು ಮೇಲೆ ಹೀಗೆ ತಡ ಮಾಡಬೇಡಿ. ಯಾವುದಾದರೂ ಹುಡುಗಿ ಇಷ್ಟ ಆದರೆ ಥಟ್ಟಂತ ಹೇಳಿಬಿಡಿ. ಬೆಸ್ಟ್‌ಆಫ್ ಲಕ್ ಅಂತ ಬರೆದಿದ್ದಳು.

ಸೋಮು ಗೌರಿಕಡೆ ನೋಡಿದಾಗ ಅವಳು ಕತ್ತು ಬಗ್ಗಿಸಿ ಊಟ ಮಾಡುತ್ತಿದ್ದಳು. ಯಾಕೋಗೌರಿ ಮುಖ ನೋಡಬೇಕು ಅನಿಸಲಿಲ್ಲ. ಊಟ ಮುಗಿಸಿದ ಗೌರಿ ಸೋಮು ಹತ್ತಿರ ಬಂದು ಬನ್ನಿ ಮಿತ್ರಕೆಫೆಲಿ ಒಂದರ್ದ ಕಾಫಿ ಹಾಕ್ಕೊಂಡು ಬರೋಣ ಅಂತ ಕರೆದಾಗ ಸಧ್ಯ ನನ್ನ ಮೈಲ್ ಅವಳಿಗೆ ರೀಚ್ ಆದ್ರೂ ನನ್ನ ಕೆನ್ನೆ ಬಚಾವ್ ಅಂದುಕೊಂಡು

ಅವಳ ಜೊತೆ ಕಾಫಿಗೆ ಹೋದ. ಆ ವಿಚಾರ ಏನಾದರೂ ಮಾತಾಡಬೇಕು ಅಂತ ಇಬ್ಬರಿಗೂ ಅನಿಸಲಿಲ್ಲ. ಏನೂ ನಡೆದೇ ಇಲ್ಲ ಅನ್ನುವಂತೆ ಇಬ್ಬರೂ ಕಾಫಿ ಕುಡಿದು ಹಿಂದಿರುಗುವಾಗ ಗೌರಿ ಇನ್ನು ಮೇಲಾದರೂ ಅನಿಸಿದ್ದನ್ನು ಥಟ್ಟಂತ ಹೇಳೋದನ್ನು ಅಭ್ಯಾಸ ಮಾಡಿಕೊಳ್ಳಿ. ಅದರಿಂದ ಅನಾಹುತವೇನೂ ಆಗೋದಿಲ್ಲ. ನಮ್ಮ ಕಡೆಗಾದೆ ಹೇಳ್ತಾರಲ್ಲ ಆದರೆ ಒಂದು ಅಡಿಕೆ ಮರ ಹೋದರೆ ಒಂದು ಗೋಟಡಿಕೆ ಅಂತ ಹಾಗೆ ಅಂದಳು. ಸೋಮು ಗೌರಿಕಡೆ ನೋಡಿ ಪೆಚ್ಚಾಗಿ ನಕ್ಕ.

ಇದೆಲ್ಲಾ ನಡೆದು ಒಂದು ವರ್ಷದಲ್ಲಿ ಸೋಮಿ ಸೋಮು ಬಾಳಿಗೆ ಬಂದಳು. ಮದುವೆಯಾಗಿ ಎಷ್ಟೋ ದಿನಗಳ ನಂತರ ಸೋಮಿ ಅದೇನ್ರೀ ಒಳ್ಳೆ ಬರಗೆಟ್ಟೋರ ಹಾಗೆ ನನ್ನನ್ನು ನೋಡಿದ ಎರಡನೇ ದಿನವೇ ನನ್ನನ್ನು ಮದುವೆಯಾಗ್ತೀರ ಅಂತ ಕೇಳಿಬಿಟ್ರಿ. ಏನಷ್ಟು ಅರ್ಜಂಟಾಗಿತ್ತು ಅಂತ ಕೇಳಿದಾಗ ಸೋಮಿಗೆ ಗೌರಿ ವಿಚಾರ ಹೇಳಬೇಕು ಅನಿಸಿದರೂ ಈಗ ಬೇಡ ಅಂದುಕೊಂಡು ಅದು ಋಣಾನು ಬಂಧ ರೂಪೇಣ ಪಶು ಪತ್ನಿ ಸುತಾಲಯ ಅಲ್ವಾ, ಅದು ಹಾಗೆ ನನ್ನ ಬಾಯಲ್ಲಿ ಹೇಳಿಸಿಬಿಡ್ತು ಅಂತತಲೆ ಕೊಡವಿ ನಕ್ಕಿದ್ದ. ಗೌರಿ ಜೊತೆ ಆದ ಮೊದಲನೇ ಲವ್ವೋ ಲವ್ವು ವಿಚಾರಇನ್ನೂ ಸೋಮು ಮನಸಿನಲ್ಲೇ ಇದೆ, ಸೋಮಿ ತನಕ ಹೋಗಿಲ್ಲ. ■

**ತೆಪ್ಪಗೆ ಮನೆಯಲ್ಲಿದ್ರೆ ಒಳ್ಳೇದು: ರೌಡಿಗಳಿಗೆ ವಾರ್ನಿಂಗ್ ಕೊಟ್ಟ ಸಿಸಿಬಿ ಪೊಲೀಸ್** ಸುದ್ದಿ





## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

ದಂಡಲಳ

- ✓ ಹೆಂಡತಿಯ ಅತಿ ದೊಡ್ಡ ಸುಳ್ಳು; ಅವರನ್ನು ಕೇಳಿ ಹೇಳುತ್ತೇನೆ. ಗಂಡನ ಅತಿ ದುಡ್ಡ ಸುಳ್ಳು: ಅವಳನ್ನೇನು ಕೇಳಿ ಹೇಳುವುದು?
- ✓ ಇಫ್ ಎ ಬುಕ್ ಅಬೌಟ್ ಫೈಲ್ಯೂರ್ಸ್ ಡಸ್ ನಾಟ್ ಸೆಲ್, ಈಸ್ ಇಟ್ ಎ ಸಕ್ಸೆಸ್?
- ✓ ರೈತನಂತೆ ಯೋಚಿಸಿ: ಅವನು ಬೆಳೆಯತ್ತ ಕಿರಿಚುವುದಿಲ್ಲ; ಬೇಗನೆ ಫಸಲು ಕೊಡುವುದಿಲ್ಲವೆಂದು ಬೆಳೆಗಳನ್ನು ದೂಷಿಸುವುದಿಲ್ಲ; ಮಣ್ಣಿಗೆ ತಕ್ಕಂತಹ ಫಸಲನ್ನೇ ಆಯ್ಕೆ ಮಾಡುತ್ತಾನೆ; ನೀರು ಹರಿಸಿ, ಗೊಬ್ಬರ ಕೊಟ್ಟು ಕಳೆ ಕೀಳುತ್ತಾನೆ; ಋತುಗಳನ್ನು ನಿಯಂತ್ರಿಸಲು ಸಾಧ್ಯವಿಲ್ಲ, ಅದಕ್ಕೆ ತಯಾರಿರಬೇಕೆಂದು ತಿಳಿದಿರುತ್ತಾನೆ.
- ✓ ಎಲ್ಲ ಇದೆ ಎಂದು ದುರಹಂಕಾರ ಪಡಬೇಡ. ರಾತ್ರಿ ಅರಳುವ ಹೂವಿಗೂ ಗೊತ್ತಿರುವುದಿಲ್ಲ ನಾಳೆ ದೇವಸ್ಥಾನಕ್ಕೊ ಅಥವಾ ಸ್ಮಶಾನಕ್ಕೋ ಎಂದು.
- ✓ ರಿಚ್‌ನೆಸ್ ಈಸ್ ನಾಟ್ ಅರ್ನಿಂಗ್ ಮೋರ್, ಸ್ಪೆಂಡಿಂಗ್ ಮೋರ್ ಆರ್ ಸೇವಿಂಗ್ ಮೋರ್. ರಿಚ್‌ನೆಸ್ ಈಸ್ ವೆನ್ ಯು ನೀಡ್ ನೊ ಮೋರ್.
- ✓ ನಿಮ್ಮನ್ನು ಕಾಡುತ್ತಿರುವ ಸಂಗತಿ/ವಸ್ತುಗಳಿಂದ ದೂರವಿರಲು ಬಯಸಿದರೆ ನೀವು ಜಾಗ ಬದಲಿಸಬೇಕಿಲ್ಲ, ನೀವು ಬದಲಾಗಬೇಕು.
- ✓ ಇಮ್ಮಾರ್ಟಾಲಿಟಿ ಶುಡ್ ನಾಟ್ ಬಿ ಮೆಶರ್ಡ್ ಇನ್ ಈಯರ್ಸ್ ಬಟ್ ಇನ್ ವಾಟ್ ಯು ಡು ವಿತ್ ದೆಮ್.
- ✓ ನಮ್ಮಲ್ಲಿ ಎರಡು ಬಗೆಯ ಜನಪ್ರಿಯ ಅಗರಬತ್ತಿಗಳಿವೆ. ಒಂದು ದೇವರಿಗೆ. ಇನ್ನೊಂದು ಸೊಳ್ಳೆಗಳಿಗೆ. ಆದರೆ ದೇವರು ಕಾಣಿಸಿಕೊಳ್ಳುವುದಿಲ್ಲ ಮತ್ತು ಸೊಳ್ಳೆಗಳು ಕಣ್ಮರೆಯಾಗುವುದಿಲ್ಲ.
- ✓ ಲಿವ್ ವೆಲ್, ಲೀವ್ ವೆಲ್.
- ✓ ವಿವೇಕಿಯಾದವನು ಬೇರೆಯವರ ತಪ್ಪನ್ನು ಕಂಡು ತನ್ನಲ್ಲಿರುವ ತಪ್ಪನ್ನು ತಿದ್ದಿಕೊಳ್ಳುತ್ತಾನೆ.
- ✓ ಸ್ನೇಹ ದೊಡ್ಡದಲ್ಲ ಅದನ್ನು ಉಳಿಸಿಕೊಳ್ಳುವವನೇ ದೊಡ್ಡವನು.
- ✓ ಮೇಕ್ ಯುವರಸೆಲ್ಫ್ ಲೈಕ್ ಸಾಲ್ಟ್. ನೊ ಒನ್ ಕೆನ್ ಯೂಸ್ ಟೂ ಮಚ್ ಅಂಡ್ ನೊ ಕೆನ್ ಡು ವಿಥೌಟ್ ಯು.
- ✓ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಕೆನಾಟ್ ಟೇಕ್ ಯುವರ್ ಜಾಬ್ ಇಫ್ ಯುವರ್ ಜಾಬ್ ಹ್ಯಾಸ್ ನೆವರ್ ನೀಡೆಡ್ ಇಂಟೆಲಿಜೆನ್ಸ್.
- ✓ ಪರವಶನಾಗು. ಪರರ ವಶವಾಗಬೇಡ.

■


ಒಂದಾನೊಂದು ಕಾಲದಲ್ಲಿ....
( ಒಂದು ಗ್ರೀಕ್ ಜಾನಪದ ಕಥೆ)
ರಾಜಾ ವಿಕ್ರಮ ಸಿಂಹ ಯುದ್ಧದಿಂದ ಹಿಂತಿರುಗುತ್ತಿದ್ದಾಗ ಭೋರ್ಗರೆವ ಪ್ರವಾಹದಲ್ಲಿ ಸಿಲುಕಿದ. ಮಳೆಯೋ ಜೋರು....
ನಾನೇ ಹೇಳ್ತೀನಿ ಬಿಡಿ.ಪ್ರವಾಹದಲ್ಲಿ ನಾನೂ , ನನ್ನ ಕುದುರೇನೂ ಮುಳುಗ್ತಾ ಇದ್ದಾಗ " ದೇವ್ರೇ ರಕ್ಸಿಸು ಅಂತ ಕೂಗ್ದೆ."
ಮರುಕ್ಷಣವೇ ರಾಜ ದಡದಮೇಲಿದ್ದ. ನುಂಗಿದ ನೀರನ್ನೆಲ್ಲಾ ಕಕ್ಕಾ.
ಅರೆ, ಶಾಸ್ತ್ರಕ್ಕೆ ಕೂಗ್ದೆ. ರಕ್ಸಿನೇ ಬಿಟ್ನಲ್ಲಾ !!
ಕುದ್ರೇನೂ ರಕ್ಸಿಸ್ತಾ ಇದಾನಲ್ಲಾ, ಯಾರಿವ್ನು ಭೂಪ ?
ಮಾತು ಬರೋಲ್ವೆ? ಸರೀ, ಮೂಗ ಅಂತ್ಲೇ ಕರೀತೀನಿ, ನೀನು ನನ್ನ ಪ್ರಾಣ ಉಳಿಸ್ದೇ. ನೀನೇ ನನ್ನ ಸೇವಕ.
ನನ್ನ ಜೊತೇನೇ ಇರು
ರಾಜ,ಸೇವಕ ಅರಮನೇಗೆ ಬರೋ ಹೊತ್ಗೆ ಕೆಟ್ಟ ಸುದ್ದಿ ಕಾದಿತ್ತು.
ಮಹಾರಾಣಿಯವರ್ಗೆ ಸಕ್ಕತ್ ಕಾಯಿಲೆ ಸಿಂಹದ ಹಾಲು ಕೊಟ್ರೆ ಮಾತ್ರ ಗುಣವಾಗತ್ತೆ


ಮೂಗ ಕಾಡಿಗೆ ಓಡಿದ
ನಿಜವಾಗ಼್ೂ ಹಾಲು ಕರದ್ಲೋ ಇಲ್ವೋ.....
ಅವನು ತಂದ ಬಿಳೀ ದ್ರವ ರಾಣಿ ಕಾಯಿಲೇನ ವಾಸಿ ಮಾಡಿಬಿಡ್ತು.
ಈಗ ಎಷ್ಟೋ ವಾಸಿ
ಸಿಂಹದ ಹಾಲಂತೆ ಮಾಟಗಾರ ಅವ್ನು. ಒದ್ದೋಡಿಸಿ
ಮೂಗ ಮಾಟಗಾರ ಅನ್ನೋ ಸುದ್ದಿ ಅರಮನೇಲೆಲ್ಲಾ ಹರಡಿತು.
ನಿಜ ಹೇಳ್ಬಿಡು ! ನೀನು ಮಾಟಗಾರ ತಾನೆ?
ಮಾಟಗಾರಾನೇ ಇವ್ನು. ಓಡಿಸ್ಲೇ ಬೇಕು
ನೀನ್ಯಾರು ? ನಿಜ ಹೇಳು
ಮರದಿಂದ ಬೀಳ್ತಾ ಇದ್ದ ರಾಜಕುಮಾರನ್ನ ಮೂಗ ರಕ್ಷಿಸ್ದ.
ಈಗ ನಿಜ ಹೇಳ್ತೀನಿ. ನಾನೊಬ್ಬ ಯಕ್ಷ. ಶಾಪದಿಂದ ಈ ಜನ್ಮ. ಮಾತಾಡ್ದೆ ಮೂರು ಮನುಷ್ಯರು ಒಂದು ಕುದುರೆನ ಬದುಕ್ಸಿದ್ರೆ ಶಾಪ ವಿಮೋಚನೆ.
ಈಗ ಶಾಪ ಮುಗೀತು.......
ನೀವೇನೂ ಕಳಿಸ್ಬೇಕಾಗಿಲ್ಲ ನಾನೇ ಹೋಗ್ತೇನೆ. ಬೈ ಬೈ
ಯಕ್ಷಾ ಹೋಗ್ಬೇಡಾ !
ನೀತಿ : ಕೆಲಸ್ದೋರನ್ನ ಉಳಿಸಿಕೊಳ್ಳೋದು ಎಂದಿಗೂ ಕಷ್ಟಾನೇ !!

# ಜಾಣ ಮರೆವು !

**ಗಣೇಶ ಹೆಗ್ಗಡೆ**

'ಮರೆವು' ಎಂಬುದು ಮಾನವ ಜೀವಿಗೆ ದೈವವಿತ್ತ ಒಂದು ವರದಾನ ಎಂಬ ನಂಬಿಕೆಯಿದೆ. ಆದರೆ ಇದು ಸರ್ವ ಕಾಲಕ್ಕೂ ಅನ್ವಯವಾಗದು ಎಂಬುದು ನನ್ನ ಜೀವನದ ಕಟು ಅನುಭವ. ನಮ್ಮ ಸುಖ ಸಂಸಾರಗಳಲ್ಲಿ ಈ 'ಮರೆವು' ಸೃಷ್ಟಿಸಿರುವ ಗೊಂದಲಗಳು, ಅನಾಹುತಗಳು ಅಷ್ಟಿಷ್ಟಲ್ಲ.

ನನಗೆ ಇದರ ಬಗ್ಗೆ ಅರಿವಾದದ್ದೆ ಬಾಲ್ಯದಲ್ಲಿ. ತಾತ, ಮೊಮ್ಮಕ್ಕಳನ್ನೆಲ್ಲಾ ಹತ್ತಿರ ಕುಳ್ಳಿರಿಸಿಕೊಂಡು ಹೇಳಿದ ದುಶ್ಯಂತ–ಶಕುಂತಲೆಯ ಕಥೆಯಿಂದ. ದುಶ್ಯಂತ ಮಹಾರಾಜನ ಹಾಳು ಮರೆವಿನ ಬಗ್ಗೆ ಸಿಕ್ಕಾಪಟ್ಟೆ ಶಪಿಸಿದ ತಾತ, ಥಟ್ಟನೆ ಏನೊ ನೆನಪಿಸಿಕೊಂಡು 'ಅಯ್ಯೋ, ನನ್ನ ನಶ್ಯದ ಡಬ್ಬಿಯೆ ಕಾಣಿಸುತ್ತಿಲ್ಲ'ಎಂದು ತನ್ನ ಮರೆವಿನ ಬಗ್ಗೆಯೇ ಪೇಚಾಡಿಕೊಂಡಿದ್ದು ಒಂದು ಮರೆಯಲಾಗದ ಪ್ರಸಂಗ.

ಇಂದಿನ ಪ್ರಚಲಿತ ವಿದ್ಯಮಾನದಲ್ಲೂ ಸಹಾ ಅನೇಕ ದುಶ್ಯಂತ ಮಹಾರಾಜರುಗಳು ಅಲ್ಲಲ್ಲಿ ಹುಟ್ಟಿಕೊಂಡು ತಾವು ಕೊಟ್ಟ ಮಾತನ್ನೇ ಮರೆತು 'ಶಿವಪ್ಪ ಕಾಯೋ ತಂದೆ' ಎಂದು ಹಾಡುತ್ತಾ ಬೆನ್ನು ತಿರುಗಿಸಿಕೊಂಡು ಓಡಾಡುತ್ತಿರುವುದು ನಿಜಕ್ಕೂ ಒಂದು ದುರ್ದೈವ ಎಂದರೆ ಅತಿಶಯೋಕ್ತಿಯಲ್ಲ.

ಸಾಮಾನ್ಯವಾಗಿ 'ಮರೆವು' ಯಾವ ಸಮಯದಲ್ಲಾದರೂ ಮಾನವನನ್ನು ಅಟಕಾಯಿಸಿಕೊಳ್ಳಬಹುದು. ಆದರೆ ಇಲ್ಲೊಬ್ಬ ಭೂಪ ! ಈ ಮರೆವನ್ನೇ ದಾಳವನ್ನಾಗಿರಿಸಿ, ತನ್ನ ನಿವೃತ್ತಿ ಜೀವನವನ್ನು ಸುಖ–ಶಾಂತಿಯಿಂದ ಕಳೆಯುವ ಹುಚ್ಚು ಇರಾದೆಯಿಂದ ತಾನೇ ಬಲಿಯಾಗಿ, ತೀರಾ ಸಂಕಷ್ಟಗೊಳಗಾದ ಸತ್ಯ ಘಟನೆಯನ್ನು ತಮ್ಮೆಲ್ಲರ ಮುಂದೆ ಬಿಚ್ಚಿಡುವುದೆ ಈ ಲೇಖನದ ಮುಖ್ಯ ಉದ್ದಿಶ್ಯ. ಆ ಭೂಪ ಬೇರ್‍ಯಾರೂ ಅಲ್ಲ, ನಾನೇ ಮಹಾಸ್ವಾಮಿ, ಆದರೆ ! ಈಗ ಹೇಳ ಹೊರಟಿರುವ ವಿಚಾರ ಮಾತ್ರ ನನ್ನ ಹಿತದೃಷ್ಟಿಯಿಂದ ಗುಟ್ಟಾಗಿರಲಿ.

ಸರ್ಕಾರಿ ಸೇವೆಯಿಂದ ನಿವೃತ್ತಿಗೊಂಡ ದಿನ, ಎಲ್ಲರಂತೆ ಕೊಂಚ ವಿಚಲಿತನಾದರೂ, ಒಳಗೊಳಗೆ ತುಂಬಾ ಖುಷಿಪಟ್ಟ ಏಕೈಕ ವ್ಯಕ್ತಿಯೆಂದರೆ ನಾನು. ಈ ಮನಸ್ಥಿತಿಗೆ ಮುಖ್ಯ ಕಾರಣ ನನ್ನ ಮುದ್ದಿನ ಮಡದಿ 'ಪದ್ದಿಯೆಂದರೆ' ತಪ್ಪಾಗಲಾರದು.

'ನೋಡಿ, ನಾಳೆಯಿಂದ ಆರಾಮವಾಗಿರಿ. ನಿಧಾನಕ್ಕೆ ಏಳಿ, ಯಾವ ಟೆನ್ಷನ್ನೂ ಬ್ಯಾಡ. ಅದಕೆಂದೇ ನಾನು, ನಿಮ್ಮ ಮುಖಕ್ಕೆ ಸೂರ್ಯನ ರಶ್ಮಿ ತಾಕದಂತೆ ರೂಮಿನ ಕಿಟಕಿಗಳಿಗೆ ಕರ್ಟನ್ನು ಹಾಕಿದ್ದೇನೆ. ವಾಲ್‌ಕ್ಲಾಕನ್ನು ಹಾಲಿಗೆ ಶಿಫ್ಟ್ ಮಾಡಿದ್ದೇನೆ. ಇಷ್ಟು ದಿನ ದುಡಿದಿದ್ದು ಸಾಕು' ಎಂಬ, ಮುದ್ದು ಮಡದಿಯ ಸಾಂತ್ವನದ ನುಡಿಗಳನ್ನು ಕೇಳಿ ಆನಂದ ತುದಿಲಿತನಾದೆ. ಆದರೆ ಇದೊಂದು ಹುಸಿ ಭರವಸೆಯೆಂದು ಮಾರನೆಯ ಬೆಳಗ್ಗೆಯೇ ನನಗೆ ಅರಿವಾಗಿ ಹೋಗಿತ್ತು. ಮೆಲ್ಲನೆ ಭುಜತಟ್ಟಿ ನಿದ್ರಾಭಂಗಗೊಳಿಸಿದ 'ಪದ್ದಿ'.

"ರ್‍ರೀ ಇಲ್ಲೇ ಹತ್ತಿರವಿರುವ ನಂದಿನಿ ಬೂತಿನಿಂದ ಹಾಲು ತಂದು ಕೊಡ್ರಿ, ನಿನ್ನೆಯ ಹಾಲು ಯಾಕೊ ಒಡೆದು ಹೋಗಿದೆ. ಕೆಲಸದವಳು ಬರುವ ಹೊತ್ತು. ನಾನು ಹೊರಗೆ ಹೋಗುವ ಹಾಗಿಲ್ಲ" ಎಂದು ರಿಕ್ವೆಸ್ಟ್ ಮಾಡಿದಾಗ, ಯಾವ ಗಂಡನಿಗೆ ತಾನೆ

ಕನಿಕರ ಮೂಡಲ್ಲ ನೀವೇ ಹೇಳಿ. 'ಇವತ್ತೊಂದು ದಿವಸ ತಾನೆ' ಎಂಬ ಆತ್ಮವಿಶ್ವಾಸದಿಂದ ಹೊರಡುವ ತಯಾರಿಯಲ್ಲಿದ್ದಾಗ, 'ರ್‍ರೀ...ಹಾಗೇ ಬರ್‍ತಾ ಕಾಕನಂಗಡಿಯಿಂದ ಅರ್ಧ ಕೆ ಜಿ ಮೈದಾ, ಆಲೂಗೆಡ್ಡೆ ತನ್ರಿ. ಇವತ್ತು ತಿಂಡಿಯ ಮೆನು' ಪೂರಿ ಪಲ್ಯ' ಎಂದಾಮಿಷ ಒಡ್ಡಿದಾಗ ಪೂರಿಯಂತೆಯೇ ಉಬ್ಬಿ ಹೋದೆ. ಗಡದ್ದಾಗಿ ಪೂರಿ ಪಲ್ಯ ಹೊಡೆದು ಹಾಸಿಗೆಯ ಮೇಲೆ ಅಡ್ಡಾದಾಗ ರೂಮಿಗೆ ಅಚಾನಕ್ ಬಂದ ಪದ್ದಿ, "ರ್‍ರೀ...ಇದೇನ್ರೀ? ನಿಮ್ಮವತಾರ. ಬೆಳ್ಳಂಬೆಳಗ್ಗೆ ಹೀಗೆ ಯಾರಾದ್ರೂ ಗಂಡಸ್ರು ಮಲಗ್ತಾರೇನ್ರಿ. ಮೊದಲೇ ಶುಗರ್‍ರು ಬಾರ್ಡರಿನಲ್ಲಿ ಬಂದು ನಿಂತಿದೆ. ಆಲೂಗೆಡ್ಡೆ ಬ್ಯಾರೆ ತಿಂದಿದ್ದೀರಿ. ಕೊಂಚ ಆ್ಯಕ್ಟೀವ್ ಆಗಿರಿ, ಎದ್ದು ಅಡುಗೆ ಮನೆಗೆ ಬನ್ನಿ"  ಎಂದೆಚ್ಚರಿಸಿದಳು.



"ಯಾಕೆ?"

"ಇನ್ಯಾಕೆ? ತರಕಾರಿ ಹೆಚ್ಚು ಕೊಡೋಕೆ. ಆಮೇಲೆ ವಾಷಿಂಗ್ ಮೆಷೀನಿನಲ್ಲಿ ಬಟ್ಟೆ ಡ್ರೈ ಆಗಿದೆ. ಮಹಡಿ ಮೇಲೆ ವಣಗಿ ಹಾಕಿ ಬನ್ನಿ. ಪ್ರತಿದಿನ ಒಂದು ಹದಿನೈದು ಮೆಟ್ಟಿಲು ಹತ್ತಿ ಇಳಿದರೆ ಮೈಗೊಳ್ಳೆ ವ್ಯಾಯಾಮ ಆಗುತ್ತೆ. ಶುಗರ್‍ರೂ ಇಳಿಯತ್ತೆ" ಇದು ನಿಮ್ಮ ಡೈಲಿ ರೋಟೀನು. ಇನ್ಮುಂದೆ ಬ್ಯಾರೆ ಬ್ಯಾರೆ ಕೆಲಸಗಳೂ ಇದಕ್ಕೆ ಆ್ಯಡ್ ಆಗುತ್ತೆ"

ಇದು ಖಂಡಿತಾ 'ಪದ್ದಿ'ಯ ಆಲೋಚನೆಯಲ್ಲ. ಇವಳಿಗಿಂತ ಎರಡು ವರ್ಷ ಸೀನಿಯರ್ ಹಾಗೂ ಇವಳ ಮಾನಸ ಗುರುಗಳಾದ ಪಕ್ಕದ್ಮನೆ ಸುಂದ್ರಮ್ಮನ ಹಾಳು ಚಿತಾವಣೆ ಎಂದೆನಿಸಿ, ಮೈನಖ–ಶಿಖಾಂತ ಉರಿದುಹೋಯಿತು. ಹಿತ್ತಲಿನಲ್ಲಿ ಒಂದು ದಿನ, ವದ್ದೆ ಸೀರೆ ಹಿಂಡುವಾಗ, ಸುಂದ್ರಮ್ಮನ ಗಂಡ ಭುಜಂಗಯ್ಯ ರೆಡ್‌ಹ್ಯಾಂಡ್ ಆಗಿ ನನ್ನ ಕೈಲಿ ಸಿಕ್ಕಿಹಾಕಿಕೊಂಡಿದ್ದ. ಮತ್ತೊಂದು ದಿನ ಬೆಳಗಿನ ಚುಮು ಚುಮು ಚಳಿಯಲ್ಲಿ, ತಲೆಯ ಮೇಲೆ ಮುಸುಕು ಹೊದ್ದು ಮನೆಯ ಮುಂದೆ ರಂಗೋಲಿ ಬಿಡಿಸುತ್ತಿದ್ದ. ನಾನಾಗಲೇ ಎಚ್ಚೆತ್ತ್ಕೊಬೇಕಿತ್ತು, ಎಂತಹ ಅಚಾತುರ್ಯವಾಯಿತು ಎಂದು ಕೈ...ಕೈ.. ಹಿಸುಕಿಕೊಂಡೆ. ರಾತ್ರಿ ಯಾಕೊ ಸರಿಯಾಗಿ ನಿದ್ರೆಯೆ ಬರಲೊಲ್ಲದು. ಭವಿಷ್ಯದ ಕನಸಿಗೆ ಯಾರೊ ಕೊಳ್ಳಿಯಿಟ್ಟ ಹಾಗೆ. ಯಾವಾಗ ನಿದ್ರೆ ಹತ್ತಿತೊ ಕಾಣೆ. ಬೆಳಗಿನ ಝಾವದ ಕನಸಿನಲ್ಲಿ ಆಪತ್ಬಾಂಧವ ಗೆಳೆಯ ಕಿಟ್ಟಿಯ ದರ್ಶನ ಪ್ರಾಪ್ತಿಯಾಯಿತು. ಬೆಳಿಗ್ಗೆ ಏಳು ಘಂಟೆಗೆ ಮೈಲಾರಿ ಹೊಟೇಲು ಬಳಿ ಕಾದಿರಲು ನನಗೆ ಆಜ್ಞಾಪಿಸಿದಂತಾಯ್ತು. ತಡ ಮಾಡದೆ ಹಾಲು ತರುವ ನೆಪದಲ್ಲಿ ಹೊರ ಹೊರಟು, 'ಕಿಟ್ಟಿಗೆ' ಫೋನು ಹಚ್ಚಿದೆ. ಓವರ್ ಟು ಪ್ಲೇಟ್ಸ್ ಆಫ್ ಸಟ್ ಮಸಾಲೆಯಲ್ಲಿ ನಮ್ಮಿಬ್ಬರ ನಡುವೆ ದೀರ್ಘ ವಿಚಾರ ವಿನಿಮಯವಾಯ್ತು. ಮುಂದಿನ ನನ್ನ ನಡವಳಿಕೆ ಬಗ್ಗೆ 'ಕಿಟ್ಟಿ' ಯಿತ್ತ ಸಲಹೆಗಳನ್ನು ಕೇಳಿ ಮೈಯಲ್ಲಿ ಸಣ್ಣಗೆ ಕಂಪನ ಉಂಟಾದುದನ್ನು ಸೂಕ್ಷ್ಮವಾಗಿ ಗ್ರಹಿಸಿದ ಕಿಟ್ಟಿ.

" ಯು ಹ್ಯಾವ್ ನೊ ಅದರೆ ವೆ" ಎಂದು ಕೈ ಚೆಲ್ಲಿದ. ಮುಂದಿನ ದಿನಗಳಲ್ಲಿ ನೀನು ತುಂಬಾ ಕೇರ್‌ಫುಲ್ ಆಗಿರ್ಬೇಕು. ಯಾರಿಗೂ ಸಾಸಿವೆ ಕಾಳಷ್ಟೂ ಅನುಮಾನ ಬರಬಾರದು. ಆರು ತಿಂಗಳ ನಂತರ, ನಿನ್ನನ್ನು ಮತ್ತೆ ಭೆಟ್ಟಿಯಾಗ್ತೀನಿ. ಈಗ ಮಗಳ ಹೆರಿಗೆಗಾಗಿ ಅಮೇರಿಕಾಗೆ ಹೋಗುತ್ತಿದ್ದೇನೆ" ಎಂದ.

"ಥ್ಯಾಂಕ್ಸ್ ಕಿಟ್ಟಿ" ಎಂದೆ.

* * *

"ರ್‍ರೀ ನಾನು ಕೇಳಿದ ವಿಚಾರ ನಿಜವೆ?"

"ಯಾವ ವಿಚಾರವೆ?"

"ನಿನ್ನೆ ಬೂತಿನಿಂದ ಹಾಲು ತರುವಾಗ ನೀವು "ನನಗೆ ಮನೆಯ ದಾರಿಯೆ ಮರೆತು ಹೋಗಿದೆ, ಕೊಂಚ ಹೆಲ್ಪ್ ಮಾಡಿ ಅಂತ ಬೇಡಿಕೊಂಡರಂತೆ"

ಯಾರನ್ನ?

"ಇನ್ಯಾರನ್ನ? ಪಕ್ಕದ್ಮನೆ ಭುಜಂಗಯ್ಯನನ್ನ. ಅಷ್ಟೇ ಸಾಲದು ಅಂತ, ಅವರನ್ನೇ ತಾವ್ಯಾರು? ಎಲ್ಲೋ ನೋಡಿದ ಹಾಗಿದೆ" ಎಂದು ಕೇಳಿದ್ರಂತೆ"

"ಹೌದೆ?"

"ಹೋಗ್ಲಿ ಬಿಡಿ, ಇವತ್ತು ಸಂಕಷ್ಟಿ. ನಾನು ನಿಟ್ಟುಪವಾಸ. ಪಕ್ಕದ್ಮನೆ ಸುಂದ್ರಮ್ಮನ ಮನೆಗೆ ಹೋಗಿ ಬರ್ತೀನಿ. ದೋಸೆ – ಚಟ್ನಿ ಮಾಡಿದ್ದೀನಿ. ಹಾಕಿಕೊಂಡು ತಿನ್ನಿ ಎಂದವಳೆ ಮಾರುತ್ತರಕ್ಕೂ ಕಾಯಲಿಲ್ಲ. ಎಷ್ಟೋ ಹೊತ್ತಿನ ನಂತರ ಮರಳಿ ಬಂದ ಪದ್ದಿ, ಹ್ಯಾಗಿತ್ತು 'ದೋಸೆ–ಚಟ್ನಿ?" ಎಂದು ಕೇಳಿದಳು.

ಯಾಕೊ ಚಟ್ನಿಗೆ ಉಪ್ಪೇ ಹಾಕಿಲ್ಲ. ಸಪ್ಪೆ ಸಪ್ಪೆ' ಎಂದೆ. ಅನುಮಾನಗೊಂಡ ಪದ್ದಿ ಸೀದಾ ಅಡುಗೆ ಕೋಣೆಗೆ ಹೋಗಿ ಅಯ್ಯೋ...ಎಂದು ಕಿರುಚಿಕೊಂಡಳು.

"ರ್‍ರೀ ಎಂಥಾ ಯಡವಟ್ರೆ? ಮಿಕ್ಸಿಜಾರಿನಲ್ಲಿ ಗೊಜ್ಜಿಗೆ ತಿರುವಿಟ್ಟಿದ್ದನ್ನು ಚಟ್ನಿಯೆಂದು ಭಾವಿಸಿ ದೋಸೆಗೆ ಹಾಕಿ ಕೊಂಡಿದ್ದೀರ? ಚಟ್ನಿ ಅಲ್ಲೇ ಸ್ಟೀಲ್ ಡಬ್ಬಿಯಲ್ಲಿತ್ತು. ಮುಂದೆ ನಿಮ್ಮನ್ನು ಕಟ್ಕೊಂಡು ಹ್ಯಾಗ್ರಿ ಏಗ್ಲಿ?" ಎಂದು ಅಲವತ್ತುಕೊಂಡಳು.

ಮತ್ತೊಂದು ದಿನ, ಕಾಫಿ ಕುಡಿಯುವಾಗ, ನನ್ನ ಬಲಗೈ ಸಣ್ಣಗೆ ಕಂಪಿಸುತ್ತಿದ್ದುದನ್ನು ಗಮನಿಸಿದ ಪದ್ದಿ, "ರ್‍ರಿ, ನಿಮ್ಗೆ ಈ ಏಜಿನಲ್ಲೇ ಪಾರ್ಕಿನ್ಸನ್ನು ರೋಗದ ಚಿಹ್ನೆ ಕಾಣಿಸಿಕೊಳ್ಳುತ್ತಿದೆ. ಮುಂದೆ ಆಲ್ಜಿಮರ್ಸ್ ರೋಗಕ್ಕೆ ಇದು ನಾಂದಿ," ಎಂದೆನ್ನುತ್ತಾ ಸೀರೆಯ ತುದಿಯಲ್ಲಿ ಬೆವರನ್ನೊರಸಿಕೊಂಡಳು. ಯಾವ ಅನುಮಾನವೂ ಬಾರದೆ 'ಕಿಟ್ಟಿ'ಯ ಪ್ಲಾನು ಹೀಗೆ ವರ್ಕೌಟು ಆಗುತ್ತಿರುವುದಕ್ಕೆ ಒಳಗೊಳಗೇ ನನಗೆ ಸಂತೋಷವಾಯಿತು.

ನನ್ನ ಜಾಣ ಮರೆವಿನಿಂದ ಹೀಗೆ, ಆಗಾಗ್ಗೆ ಮನೆಯಲ್ಲಿ ಸಣ್ಣ ಪುಟ್ಟ ಗೊಂದಲಗಳು, ಪೇಚುಗಳು ಅನಾಹುತಗಳು ಮುಂದುವರೆಯುತ್ತಲೇ ಹೋಯಿತು. ವಿಚಾರ ಕೇಳಿ ತೀವ್ರ ಆತಂಕಗೊಂಡ 'ಪದ್ದಿ'ಯ ತಂದೆ, ತಾಯಿ ನನ್ನ ಯೋಗಕ್ಷೇಮ ವಿಚಾರಿಸಲು ದೂರದೂರಿನಿಂದ ಧಾವಿಸಿ ಬಂದರು. ವೆರಾಂಡದ ಬಾಗಿಲಿನಲ್ಲೇ ನಿಂತಿದ್ದ ನಾನು,

"ಹೋ...ತಾವು ಪದ್ದಿಯ ಕಡೆಯ ನೆಂಟರೋ? ಅಂದ್ಹಾಗೆ ಹ್ಯಾಗೆ ಸಂಬಂಧ?"

ಎಂದು ಕೇಳಿದಾಗ ಬೆಚ್ಚಿ ಬೀಳುವ ಸರದಿ ಅವರದಾಯಿತು.

"ಮಗು, ಇನ್ಮೇಲೆ ನೀನು ಕಣ್ಣೇ ಕಾವಲಾಗಿರಬೇಕು. ಯಾವ ಕಾರಣಕ್ಕೂ ಅಳಿಯಂದಿರನ್ನು ಒಂಟಿಯಾಗಿ ಹೊರಗೆ ಕಳುಹಿಸ ಬ್ಯಾಡ. ಕಾಲ ಕಾಲಕ್ಕೆ ಅಳಿಯಂದಿರಿಗೆ ಊಟ–ತಿಂಡಿಯ ವ್ಯವಸ್ಥೆಯಾಗಬೇಕು. ಹೊರಗಿನ ಗೇಟಿಗೆ ಸದಾ ಬೀಗ ಹಾಕಿಕೊಂಡಿರು. ಯಾವ ಸಮಯದಲ್ಲೂ ಇವರ ಬ್ರೈನು ಇರ್ರಿಟೇಟು ಆಗಬಾರದು. ಸಾಕಷ್ಟು ರೆಸ್ಟು ಕೊಡು. ಈ ಖಾಯಿಲೆಗೆ ಮದ್ದೇ ಇಲ್ಲಾ," ಎಂದು ಪದ್ದಿಯನ್ನುದ್ದೇಶಿಸಿ ಹೇಳಿದ ಮಾವ, ಪಂಚೆ ತುದಿಯಿಂದ ಕಣ್ಣೊರೆಸಿಕೊಂಡರು.

ಕ್ಲೈಮ್ಯಾಕ್ಸು ಸೀನು ಏನೂ ಅಂದಿರಾ?

ನಾನೀಗ ಎರಡು ತಿಂಗಳಿನಿಂದ ಗೃಹಬಂಧಿ. ವಿಚಾರ ತಿಳಿದು ಮನೆಗೆ ಬರುವ ನೆಂಟರಿಷ್ಟರು, ಮೃಗಾಲಯದಲ್ಲಿ ಪ್ರಾಣಿಯನ್ನು ವೀಕ್ಷಿಸುವಂತೆ ದೂರದಿಂದಲೇ ನನ್ನನ್ನು ನೋಡಿ ತಕ್ಷಣವೇ ಗಾಯಬ್ ಆಗಿ ಬಿಡುತ್ತಿದ್ದಾರೆ. ಎಲ್ಲಿ ಆಭಾಸಕ್ಕೆಡೆ ಮಾಡಿ ಬಿಡುವುವನೆಂಬ ಭಯದಿಂದ ಯಾವ ಸಮಾರಂಭಗಳಿಗೂ ನನ್ನನ್ನು ಕರೆದೊಯ್ಯುತ್ತಿಲ್ಲ.

ಈ ಮಧ್ಯೆ ಒಂದು ಅಚಾತುರ್ಯ ಸಂಭವಿಸಿದೆ. ಅತ್ತೆ–ಮಾವ ತಮ್ಮೂರಿನ ಖಾಸಗಿ ವ್ಯವರಹಾಗಳನ್ನೆಲ್ಲಾ ಬಂದ್ ಮಾಡಿ 'ಪದ್ದಿ'ಗೆ ಸಾಥ್ ಕೊಡಲು ಇಲ್ಲೇ ಬಂದು ಠಿಕಾಣಿ ಹೂಡಿದ್ದಾರೆ.

ಏತನ್ಮಧ್ಯೆ, ಮಾವ ಮತ್ತು "ಪದ್ದಿ" ನನ್ನನ್ನು ನಗರದ ಖ್ಯಾತ ನರರೋಗ ತಜ್ಞ ಡಾ. ತೋಲಾಂಡರಾಯರ ಕ್ಲಿನಿಕ್‌ಗೆ ಕರೆದುಕೊಂಡು ಹೋದಾಗ, ಬ್ಲಡ್ ಟೆಸ್ಟ್, ಮಿದುಳಿನ ಎಕ್ಸ್‌ರೇ, ಸಿ ಟಿ ಸ್ಕ್ಯಾನ್ ಮತ್ತು ಎಂಆರ್‌ಐ...ಇತ್ಯಾದಿ ಪರಿಶೀಲಿಸಿ, ಓ ಗಾಡ್! ಎಂದು ತಲೆಯ ಮೇಲೆ ಕೈ ಹೊತ್ತುಕೊಂಡರು ಡಾಕ್ಟರು.

"ರಿಪೋರ್ಟ್ ಏನು ಹೇಳುತ್ತೆ ಡಾಕ್ಟರ್" ಎಂದು ನಡಗುವ ದನಿಯಲ್ಲಿ "ಪದ್ದಿ" ಕೇಳಿದಳು.

"ಆಲ್ ಪ್ಯಾರಾ ಮೀಟರ್ಸ್ ಅಪಿಯರ್ ಟು ಬಿ ನಾರ್ಮಲ್, ಹಿ ಈಸ್ ಆ್ಯಬ್ಸಲ್ಯೂಟ್ಲಿ ಫೈನ್, ಅಂಡ್ ರಿಕ್ವೈರ್ಸ್ ನೊ ಮೆಡಿಸಿನ್"

"ಮತ್ತೆ ಇದ್ಯಾವ ರೋಗ ಡಾಕ್ಟರ್?" ಎಂದು ಖುಷಿ ಮತ್ತು ಆತಂಕದಿಂದ "ಪದ್ದಿ" ಕೇಳಿದಾಗ,

"ನೀವೆಲ್ಲಾ ಆತಂಕ ಪಟ್ಟ ಹಾಗೆ ಇದು ನರ ರೋಗದ ಕೇಸಲ್ಲ" ನಿವೃತ್ತಿಯ ಹೊಸತರಲ್ಲಿ ಎಲ್ಲಾ ಗಂಡಸರಿಗೂ ಅಟ್ಯಾಕ್ ಆಗುವ "ನರಿರೋಗ" ! ಅರ್ಥಾತ್ ಮಿದುಳಿನಲ್ಲಿ ರಕ್ತ ಸಂಚಾರದ ಜತೆಗೆ ಉಪಾಯಗಳೂ ಸಂಚರಿಸಿ ಓವರ್ ಫ್ಲೋ ಆದಾಗ ಬಿಹೇವಿಯರ್‌ನಲ್ಲಿ ಒಮ್ಮೊಮ್ಮೆ ಹೀಗಾಗುತ್ತೆ" ಎಂದರು ಡಾಕ್ಟರು.

"ಮತ್ತೆ ಇದಕ್ಕೆ ಮೆಡಿಸನ್ನು?"

"ತಮ್ಮ ಕೈಲೇ ಇದೆ ತಾಯಿ"

* * *

■

# ಮೌನಾಲಿಸ

ಸುಮಾವೀಣಾ

ಮೌನಾಲಿಸ ಅಂದ್ರೆ ನಮ್ ಹೀರೋಯಿನ್ ಸುಬ್ಬಮ್ಮ! ಕೆಲಸದಾಕೆ!. ಕೆಲಸ ಎಲ್ಲಾ ನೀಟಾಗೆ ಮಾಡ್ತಾಳೆ. ಇಟ್ಟಿದ್ದು ಬಿಟ್ಟಿದ್ದು ಏನೂ ಮುಟ್ಟಲ್ಲ ಕ್ಲೀನ್ ಹ್ಯಾಂಡು! ಅವರ ಮನೆಸುದ್ದಿ ಇವರ ಮನೆಸುದ್ದಿ ಏನೇನೂ ಮಾತನಾಡಲ್ಲ. ಆದರೆ ಆಯಮ್ಮನ ಎಡವಟ್ ಗಳು ಚೂರು ಜಾಸ್ತಿ. ಎಡವಟ್ ಮಾಡಿ ಮೌನವಾಗ್ಬಿಡ್ತಾಳೆ ನೋಡೊಕು ಸುಂದ್ರಿ ಅದಕ್ಕೆ ಮೌನಾಲೀಸ...! ಅಂತ ಕರೆಯೋದು. ಎಡವಟ್ ಮಾಡೋದ್ ಮಾಡಿ ಮೌನವಾಗೆ ತನ್ ತಪ್ಪುಗಳ್ನ ಎತ್ತಿ ಹೇಳೋದನ್ನ ಸುಮ್ನೆ ಕೇಳ್ಕೋತಾಳೆ ಅದಕ್ಕೂ ಮೌನಾಲೀಸ ಹೆಸರು ಸರಿ ಹೊಂದುತ್ತೆ ಅಲ್ವ!

ನಮ್ ಸುಂದ್ರಿ ಸುಬ್ಬಮ್ಮ ಅದೊಂದೆ ದಿನ ಮಾಡಿದ್ ಎಡವಟ್ಗಳು ಸಾಮಾನ್ಯದವಲ್ಲ. ಬೆಳಗ್ಗೆ ಆರಕ್ಕೆ ಜಯವ್ವರ ಮನೆಗೆ ಕೆಲಸಕ್ಕೆ ಹೋಗಿ 'ಜಯವ್ವ ಜಯವ್ವ' ಎಂದು ಬಾಯ್ತುಂಬಾ ಕರೀತಾ ಹೇಳಿದ್ ಕೆಲ್ಸ ಮಾಡಿ ಕೊನೆಗೊಂದು ಮಹಾ ಎಡವಟ್ ಮಾಡಿದ್ಲು. ಜಯವ್ವರ ಮನೆಯಲ್ಲಿ ಬೀದಿಗೆ ಹಂಚಿ ಉಳಿಯುವಷ್ಟು ಹೂವಿನ್ ಗಿಡಗಳಿದ್ವು ಅರಳಿದ್ ಹೂಗಳೂ ಇದ್ವು ಅದಕ್ಕೆ ದಿನಾ ನೀರ್ ಹಾಕಿ ಮಕ್ಳ್ ಸಾಕ್ದಂಗೆ ಸಾಕಿದ್ಲು ಪಾಪ. ಜಯವ್ವ ಸುಬ್ಬಮ್ಮ ಇದ್ದಾಳಲ್ಲ ಅಂತ ಪೂರ್ತಿ ಅರಳಿರೋ ನಾಕೇ ನಾಕು ಹೂ ತಗೊಂಡು ದೇವಸ್ಥಾನಕ್ಕೆ ಹೋದ್ರು. ಅಚಾನಕ್ಕಾಗಿ ರಸ್ತೆಲಿ ಹೋಗೋ ದನಗಳು ಹೂವಿನ ಗಿಡಗಳಿಗೆ ಬಾಯಿ ಹಾಕಿದ್ವು. ಸುಬ್ಬಮ್ಮ ಗಾಂಡ್ ಗಾಬರಿಯಾಗಿ 'ಜಯವ್ವ ಜಯವ್ವ ಹಾಳದ್ ದನಗೊಳು ಎಲ್ಲಾ ಹೂವಿನ್ ಗಿಡುಕ್ಕೆ ಬಾಯ್ ಹಾಕವೆ' ಅಂತ ಅಳೋ ದನಿಲಿ ಫೋನ್ ಮಾಡಿದ್ಲು. ಜಯವ್ವ ಆ ಕಡೆಯಿಂದ 'ಸರಿ ನೀ ಏನ್ ಮಾಡ್ತ ಇದ್ದೀಯ?' ಅಂದ್ರೆ ನಿಮ್ಮ ಹತ್ರ ಮಾತಾಡ್ತಾ ಇದ್ದೀನಿ' ಅಂತ ಅಳೊಕೆ ಶುರು ಮಾಡಿದ್ಲು. 'ಇದ್ಯಾಕೊ ಸರಿ ಹೋಗ್ಲಿಲ್ಲ' ಅಂತ ಅಂದ್ಕೊಂಡು ಬೇಗ ದೇವಸ್ಥಾನದಿಂದ ಜಯಮ್ಮ ಬಂದು 'ಅಲ್ವೆ ಸುಬ್ಬಿ ದನ ಗಿಡ್ಗಳಿಗೆ ಬಾಯ್ ಹಾಕಿದ್ರೆ ಓಡ್ಸೋದು ತಾನೆ ಆಮೇಲ್ ಫೋನ್ ಮಾಡಬೋದಾಗಿತ್ತಲ್ಲ. ನಾನೊಬ್ಳು ಹಾಳಾದೋಳು ನನ್ಗೆ ಹಿಂಗೆ ಅಂತ ಗೊತ್ತಿದ್ರೆ ಕೈ ತುಂಬಾ ಹೂವಾದ್ರೂ ತಗೊಂಡ್ ಹೋಗ್ತಿದ್ದೆ ದೇವ್ರಿಗೆ' ಅಂತಿದ್ರೆ ಸುಬ್ಬಮ್ಮ 'ನೋಡ್ತಾ ನೋಡ್ತಾ ಗಿಡ್ಗಳ್ನೆಲ್ಲಾ ತಿನ್ನಿಸ್ ಬುಟ್ನಲ್ಲ ಅಂತ ಮೌನಾಲಿಸ ಆದ್ಲು.

ಬೇಜಾರ ಮಾಡ್ಕಂಡೆ ಜಯವ್ವರ ಮನೆಯಿಂದ ಕಮಲಮ್ಮನ ಮನೆಗೆ ಸುಬ್ಬಮ್ಮ ಕೆಲಸಕ್ಕೆ ಹೆಜ್ಜೆ ಹಾಕಿದ್ಲು. ಶುಕ್ರವಾರದ ಪಾತ್ರೆ ಜಾಸ್ತಿ ಇದ್ವು. ಇವಳ ಮಾಡೋ ನೀರಿನ ಖರ್ಚಿಗೆ ನೀರ್ ಖಾಲಿ ಆಗಿತ್ತು. ಸುಬ್ಬಮ್ಮ ಮೋಟರ್ ಹಾಕಿ ಬಂದು ಮೊಬೈಲಲ್ಲಿ ಹಾಡ್ ಕೇಳ್ತಾ ಮೋಟರ್ ಹಾಕಿದ್ನು ಮರೆತು ಪಾತ್ರೆ ತೊಳಿತಿದ್ಲು. ಓವರ್ ಹೆಡ್ ಟ್ಯಾಂಕ್ ತುಂಬಿ ನೀರು ರಸ್ತೆಗೆ ಹರಿತು ಎದ್ರು ಮನೆಯವರು 'ಏನ್ರೀ ಕಮಲಮ್ಮ ನೀರ್ ವೇಸ್ಟ್ ಮಾಡ್ ಬಾರ್ದು ಹಾಗೆ.. ಹೀಗೆ... ಅಂತ ವೇದಿಕೆಲಿ ಭಾಷಣ ಬಿಗಿತಿರ ನೋಡಿ ನಿಮ್ ಮನೆ ನೀರು ನಮ್ಮನೆ ರಸ್ತೆ ದಾಟಿ ಪಕ್ಕದ ರಸ್ತೆಯನ್ನು ದಾಟೊ ಹಾಗಿದೆ' ಅಂತ ಕರೆ ಮಾಡಿ ಹೇಳಿದ್ರು. ಕಮಲಮ್ಮ 'ಯಾರ್ ಮೋಟರ್ ಹಾಕಿದ್ದು ? ಸುಬ್ಬಮ್ಮ ಹಾಕಿರಬೇಕು' ಅಂದ್ಕೊಂಡು ಮೋಟರ್ ಆಫ್ ಮಾಡಿ ಸುಬ್ಬಮ್ಮ ಪಾತ್ರೆ ತೊಳಿಯೋ ಹತ್ರ ಬಂದ್ರೆ ಸುಬ್ಬಮ್ಮ ಮುಸುರೆ ಪಾತ್ರೆ ಒಡತಿಯಾಗಿ ಹಾಡಿಗೆ ತಕ್ಕಂತೆ ನೆಕ್ ಡಾನ್ಸ್ ಮಾಡ್ತಾ ಇದ್ಲು. 'ಸುಬ್ಬಮ್ಮಾ ..ಮೋಟ್ರು

ಹಾಕಿ ಮರೆತಿದ್ದೀಯ ಇಲ್ಲ ನನಗೆ ಹೇಳಿದ್ರೆ ಆಫ್ ಮಾಡ್ತಾ ಇರಲಿಲ್ವೆ? ಯಾಕ್ ಹೀಗ್ ಮಾಡಿದ್ರಿ? ಸುಖಾಸುಮ್ನೆ ಎದುರು ಮನೆ ನಂಜ್ ಮಂಜುಳಮ್ಮನ ಮಾತ್ ಕೇಳೋಹಾಗಾಯ್ತ್' ಅಂತಿದ್ರೆ ಸುಬ್ಬಮ್ಮ ಮತ್ತೆ ಮೌನಾಲೀಸ ಆದ್ಲು.

ಬೇಜಾರ್ ಮಾಡ್ಕೊಂಡೆ ಸುಬ್ಬಮ್ಮನ ಸವಾರಿ ಮುಂದೆ ಮಧುರಾ ಮೇಡಮ್ ಮನೆಕಡೆಗೆ ಹೋಯ್ತು. ಸುಬ್ಬಮ್ಮ ಗೇಟ್ಗೆ ಕೈ ಹಾಕ್ತಿದ್ದಂತೆ 'ಸುಬ್ಬಮ್ಮೋರೇ ನಾಳೆ ಆಫಿಸ್ನಲ್ಲಿ ಫಂಕ್ಷನ್ ಕಾಟನ್ ಸ್ಯಾರಿ ವೇರ್ ಮಾಡೋಣ ಅಂತ. ಸ್ಯಾರಿ ಇಟ್ಟಿದ್ದೀನಿ ಒಂಚೂರು ಪ್ರೆಸ್ ಮಾಡ್ ಕೊಡ್ತೀರ' ಅಂತ ಮಧುರ ಮೇಡಮ್ ಕೇಳ್ಕೊಂಡ್ರು. ಸುಬ್ಬಮ್ಮ 'ಹೂ ಮೇಡಮ್ಮ ಮಾಡ್ತೀನಿ ಅಯ್ಯೋ ! ಚೂರ್ ಯಾಕೆ ಚನ್ನಾಗೆ ಪ್ರೆಸ್ ಮಾಡ್ತಿನಿ' ಎಂದು ಒರೆಸಿ ಗುಡಿಸಿ ಪಾತ್ರೆತೊಳ್ದು 'ಏನೊ ಮರೆತೆ' ಅಂತ ಮೊಬೈಲಲ್ಲಿ ರೀಲ್ಸ್ ನೋಡ್ತಾ ಸೀರೆ ಐರನ್ ಮಾಡ್ತಾ ಅದ್ಯಾವುದೋ ಪಿಚ್ಚರ್ ಹಾಡಬಂತು ಅಂತ ಅದನ್ನೆ



ಬಿಟ್ಕಣ್ ಬಿಟ್ ಹಾಗೆ ನೋಡ್ತಾ ಐರನ್ ಬಾಕ್ಸನ ಸೀರೆ ಮೇಲೆ ಇಟ್ಬಿಟ್ಟಿದ್ಲು. ಮಧುರಾ ಮೇಡಮ್ 'ಇದೇನೊ ವಾಸನೆ' ಅಂದ್ಕೊಂಡು ಬಂದು ನೋಡಿದ್ರೆ ಸುಬ್ಬಮ್ಮ ಸುಬ್ಬಮ್ಮಾ ಅಲ್ಲ ರೀಲಮ್ಮಾ ಆಗಿದ್ಲು. ಆ ಫೋನನ್ನ ಆಫ್ ಮಾಡಿ 'ಏನ್ ಸುಬ್ಬಮ್ಮ ನೀವ್ ಹೊಸಾ ಸೀರೆ ಹೀಗ್ ಮಾಡ್ ಬಿಟ್ರಲ್ಲಾ! ಅಲ್ಲಾ ಸೀರೆ ಹೋದ್ರೆ ಹೋಯ್ತು ಕರೆಂಟಿಂದ ಇನ್ನೇನಾದ್ರು ಅನಾಹುತ ಆಗಿದಿದ್ರೆ ಯಾರ್ ಹೊಣೆ? ನೀವ್ ಬರ್ತೀದ್ರ ಇನ್ನೊಂದ್ ಮನೆ ಕೆಲಸ ಹುಡ್ಕೊಂಡು ಹೋಗ್ತಿದ್ರಿ ಎಂದಾಗ ಸುಬ್ಬಮ್ಮ ಮುಖ ಇಳೆಬಿಟ್ಟು ಮತ್ತೆ ಮೌನಾಲಿಸ ಆದ್ಲು.

ಹೋಗಲಿ ಇನ್ ಈ ತಪ್ಗೊಳ್ನ ಮಾಡ್ಬಾರ್ದು ಅಂತ ದಿನದ ಕಡೆಕೆಲಸದ ಮನೆ ಮೀನಾಕ್ಷಮ್ಮನ ಮನೆಗೆ ಹೋದ್ಲು. ಅವರು ಎಲ್ಲೋ ಹೋಗ್ ಬೇಕಾಗಿತ್ತು 'ಸುಬ್ಬಮ್ಮ ಇನ್ನೇನ್ ಸ್ವಲ್ಪ ಹೊತ್ತಿಗ್ ಮಗಳು ಬರ್ತಾಳೆ ಒಂಚೂರು ಬಿಸಿ ಅನ್ನ ಮಾಡಿ ಕೊಡ್ತೀಯ ನಾನೂ ಬೇಗ ಬರ್ತೀನಿ' ಅಂತಿದ್ದಂಗೆ ಸುಬ್ಬಮ್ಮ ಆಯ್ತು ಎನ್ನುವಂತೆ ತಲೆ ಅಡಿಸಿ ಅಡುಗೆ ಮನೆಗೆ ಹೋಗಿ ಪಾತ್ರೆಲಿ ಸ್ವಲ್ಪ ಅನ್ನ ಇತ್ತು ಅಂತ ಅದನ್ನೆ ಬಿಸಿಮಾಡಿ ಮೀನಾಕ್ಷಮ್ಮಂಗೆ ಕಾಲ್ ಮಾಡಿ 'ಆಯ್ತು...! ಅದೆ ಬಿಸಿ ಮಾಡಿದ್ದು' ಅಂದ್ಲು ಮೀನಾಕ್ಷಮ್ಮ 'ಬಿಸಿ ಅನ್ನ ಮಾಡಿದ್ಯೋ ?ಅನ್ನ ಬಿಸಿ ಮಾಡಿದ್ಯೋ?' ಎಂದಾಗ ಹೌದ.....! ಹೊಸದಾಗಿ ಅನ್ನ ಮಾಡಕೆ ಹೇಳಿದ್ರಾ.....? ಸರಿಗೆ ಕೇಳ್ಕೊಳ್ಳಿಲ್ಲ ಅಂತ ತಿರುಗಿ ಮೌನಾಲೀಸ ಆದ್ಲು.

■

# ಗೊಂದಲಪುರ

**ಮೂಲ ಕಥೆ: ಜೇಮ್ಸ್ ಥರ್ಬರ್ (The Night the Bed Fell)**

**ಕನ್ನಡ ರೂಪಾಂತರ: ಎಸ್. ಎನ್. ಗಣನಾಥ**

ನನ್ನ ಯೌವನದ ದಿನಗಳಲ್ಲಿ ನಾನು ಕೆಲಕಾಲ ಮಲೆನಾಡಿನ ಕೊಪ್ಪದಲ್ಲಿ ವಾಸವಿದ್ದೆ. ಆ ದಿನಗಳಲ್ಲಿ ನಡೆದ ಅನೇಕ ಘಟನೆಗಳಲ್ಲಿ ಒಂದಂತೂ ತುಂಬ ಚೆನ್ನಾಗಿ ನೆನಪಿದೆ. ಗೊಂದಲದ ಗೂಡಾದ ಅಂದಿನ ಘಟನೆಯನ್ನು ನೆನೆದರೆ ಈಗಲೂ ನಗು ಬರುತ್ತದೆ. ಆ ರಾತ್ರಿ ಮೇಲ್ಮಹಡಿಯಲ್ಲಿದ್ದ ತುಂಬ ಹಳೆಯ ಮರದ ಮಂಚ ನಮ್ಮ ತಂದೆಯ ಮೇಲೆ ಕುಸಿದು ಬಿದ್ದ ಘಟನೆ ಮರೆಯುವುದೇ ಸಾಧ್ಯವಿಲ್ಲ. ಇದನ್ನು ಬರಹ ಎಂದಾದರೂ ಅನ್ನಿ, ಒಂದು ಬಾಯ್ದೆರೆ ಹೇಳುವ ಘಟನೆ ಎಂದಾದರೂ ಅನ್ನಿ. ಒಟ್ಟಿನಲ್ಲಿ ನಿಮಗೆ ಬೇಕಾದ ರೀತಿಯಲ್ಲಿ ಓದಿಕೊಳ್ಳಿ. ಈ ಕಥೆಯನ್ನು ಓದುವಾಗ ಅಥವಾ ಹೇಳುವಾಗ ರಸಾನುಭೂತಿಗಾಗಿ ಕುರ್ಚಿ–ಮೇಜುಗಳನ್ನು ಸ್ವಲ್ಪ ಸರಿಸುವುದು, ಬಾಗಿಲುಗಳನ್ನು ಅಲುಗಾಡಿಸುವುದು, ಕೆಲವೊಮ್ಮೆ ಗಾಬರಿಯಿಂದ ಕೂಗುವುದು ಸಹ ತಪ್ಪೇನಲ್ಲ. ಏನಾದರಾಗಲಿ, ಇದು ನಡೆದದ್ದು ನಿಜಕ್ಕೂ ನಿಜವೆಂದು ನಂಬಿದರೆ ಸಾಕು.

ಅದೇ ಸಮಯದಲ್ಲಿ ನನ್ನ ಚಿಕ್ಕಪ್ಪನ ಮಗ ರಾಮಣ್ಣ ನಮ್ಮ ಮನೆಗೆ ಬಂದು ಒಂದೆರಡು ದಿನ ತಂಗಿದ್ದ. ಅವನದು ಬಹಳ ಸೂಕ್ಷ್ಮ ಪ್ರವೃತ್ತಿ. ಅದೇಕೋ ಗೊತ್ತಿಲ್ಲ; ತಾನು ನಿದ್ರಿಸುತ್ತಿರುವಾಗಲೇ ತನ್ನ ಉಸಿರು ಹೋಗಿಬಿಡುತ್ತದೆಂಬ ದೊಡ್ಡದೊಂದು ಭ್ರಮೆಯಲ್ಲಿ ಬದುಕುತ್ತಿದ್ದ. ರಾತ್ರಿಯಿಡೀ ಪ್ರತಿ ಗಂಟೆಗೊಮ್ಮೆ ಎಚ್ಚರವಾಗದಿದ್ದರೆ, ತಾನು ಉಸಿರುಕಟ್ಟಿ ಸಾಯಬಹುದು ಎಂದು ಬಲವಾಗಿ ನಂಬಿದ್ದ. ಹಾಗಾಗಿ ರಾತ್ರಿ ಮಲಗುವಾಗ ಪ್ರತಿ ಗಂಟೆಗೂ ಹೊಡೆಯುವಂತೆ ಅಲಾರಾಂ ಇಡುತ್ತಿದ್ದ. ನಾನು ಅವನೊಂದಿಗೆ ಮಾತನಾಡಿ ಈ ಅಭ್ಯಾಸವನ್ನು ಬಿಡಲು ಅವನ ಮನವೊಲಿಸಿದೆ. "ನನ್ನದು ಕೋಳಿ ನಿದ್ರೆ. ನನ್ನೊಂದಿಗೆ ಅದೇ ಕೋಣೆಯಲ್ಲಿ ಮಲಗಿದ್ದ ಯಾರಾದರೂ ಉಸಿರಾಟ ನಿಲ್ಲಿಸಿದರೂ, ನನಗೆ ಕೂಡಲೇ ಎಚ್ಚರವಾಗುತ್ತದೆ" ಎಂದೆಲ್ಲಾ ಹೇಳಿ ಅವನನ್ನು ಹೇಗೋ ಒಪ್ಪಿಸಿದೆ. ಅವನು ನನ್ನ ಕೋಣೆಯಲ್ಲಿ ಮಲಗಿದ. ಮಲಗಿದ ನಂತರ, ನನ್ನ ಸಾಮಾನ್ಯ ಉಸಿರಾಟ ಗಮನಿಸಿ ನನಗೆ ನಿದ್ದೆ ಬಂದಿದೆಯೆಂದು ಅವನಿಗೆ ಖಚಿತವಾದ ನಂತರ, ತನ್ನ ಉಸಿರನ್ನು ಬಿಗಿಹಿಡಿದು ನನ್ನನ್ನು ಪರೀಕ್ಷಿಸಲು ಅನುವಾದ.

ಅವನು ಹೀಗೆ ಮಾಡಬಹುದು ಎಂದು ನನಗೆ ಮೊದಲೇ ಒಂದು ಅಂದಾಜಿತ್ತು. ಅದಕ್ಕೆ ಬ್ರಹ್ಮಜ್ಞಾನವೇನೂ ಬೇಕಿರಲಿಲ್ಲ. ಹಾಗಾಗಿ, ನಾನು ನಿದ್ರಿಸಿರಲೇ ಇಲ್ಲ. ಅವನ ಜೊತೆ ಗಟ್ಟಿಯಾಗಿ ಮಾತನಾಡಿದೆ. ಇದು ಅವನ ಭಯವನ್ನು ಸ್ವಲ್ಪ ಕಡಿಮೆ ಮಾಡಿದಂತೆ ತೋರಿತು. ಆದರೂ ಆತ ಭಯಂಕರ ಮುನ್ನೆಚ್ಚರಿಕೆಯ ಸೂಚನೆಯಾಗಿ ತನ್ನ ತಲೆಯ ಬಳಿ ಇದ್ದ ಚಿಕ್ಕ ಮೇಜಿನ ಮೇಲೆ ಒಂದು ಲೋಟವನ್ನು ಇಟ್ಟುಕೊಂಡ. ನೋಡಿದರೆ ಅದರಲ್ಲಿ ಕರ್ಪೂರದ ದ್ರಾವಣ ತುಂಬಿದೆ! ನಾನು ಅವನಿಗೆ ಎಚ್ಚರಿಕೆ ಕೊಡುವುದರೊಳಗೇನಾದರೂ ಅವನ ಉಸಿರು ನಿಲ್ಲುವ ಹಂತಕ್ಕೆ ಬಂದಿದ್ದರೆ, ಅವನು ತಕ್ಷಣವೇ ಆ ಅಪೂರ್ವ "ಪ್ರಾಣಸಂಜೀವಿನಿ"ಯನ್ನು ಮೂಸಲು ಸಿದ್ಧನಾಗಿದ್ದನಂತೆ!

ಅವರ ಕುಟುಂಬದಲ್ಲಿ ಇಂಥ ವಿಚಿತ್ರ ಹಟಮಾರಿ ಸ್ವಭಾವ ಇದ್ದದ್ದು ರಾಮಣ್ಣನಿಗೆ ಮಾತ್ರವಲ್ಲ. ಮಾಲತಿ ಅತ್ತೆಯದು (ಅವರಿಗೆ ಎರಡು ಬೆರಳುಗಳನ್ನು ಬಾಯಲ್ಲಿಟ್ಟುಕೊಂಡು ಗಂಡಸರಂತೆ ಸಿಳ್ಳೆ ಹಾಕಲು ಬರುತ್ತಿತ್ತು) ಮತ್ತೊಂದು ಕತೆ. ಅವರು ಹತ್ತಿರದ

ಆಗುಂಬೆಯವರು. ಆ ಊರಿನಲ್ಲಿಯೇ ಹುಟ್ಟಿ, ಬೆಳೆದು ಅವರ ಮದುವೆಯೂ ಅಲ್ಲಿಯೇ ಆಗಿತ್ತಾದ್ದರಿಂದ ಅಲ್ಲಿಯೇ ಸಾಯುವುದು ತನ್ನ ಹಣೆಯಲ್ಲಿ ಬರೆದಿದೆ ಎಂದು ಯಾರೋ ನುಡಿದ ದುಃಶಕುನದ ಭವಿಷ್ಯವನ್ನು ಅದೇಕೋ ಸಂಪೂರ್ಣವಾಗಿ ನಂಬಿದ್ದರು.

ಇನ್ನೊಬ್ಬರು ಸರಸ್ವತಮ್ಮ ಅರ್ಥಾತ್ ಸರಸತ್ತೆ. ಅವರ ಸಮಸ್ಯೆ ಬೇರೆ ಬಗೆಯದು. ಪ್ರತಿ ರಾತ್ರಿ ಒಬ್ಬ ಕಳ್ಳ ಒಳಗೆ ನುಗ್ಗಿಬರುತ್ತಾನೆ. ಅವನು ಒಂದು ಕೊಳವೆಯನ್ನು ಕೋಣೆಯ ಬಾಗಿಲಿನ ಕೆಳಗೆ ತೂರಿಸಿ ಕ್ಲೋರೋಫಾರ್ಮ್ ಅನ್ನು ಊದುತ್ತಾನೆ. ಹಾಗೆ ಮಾಡಿದಾಗ ತಾನು ಮೂರ್ಛೆ ಹೋಗುತ್ತೇನೆ ಎಂಬ ಭಯವಿಲ್ಲದೆ ಅವರು ರಾತ್ರಿ ಮಲಗುತ್ತಿರಲಿಲ್ಲ. ನಿಜಕ್ಕೂ ಅವರಿಗೆ ತಮ್ಮ ಮನೆಯ ಸಾಮಾನುಗಳನ್ನು ಕಳೆದು–ಕೊಳ್ಳುತ್ತೇನೆ ಎನ್ನುವ ಭಯವಿತ್ತಾದರೂ ಅರಿವಳಿಕೆಗಳ ಕುರಿತಾದ ಅವರ ಹೆದರಿಕೆ ಅದರ ಎಷ್ಟೋ ಪಟ್ಟು ಇತ್ತೆನ್ನುವುದು



ಅವರ ಮನೆಯವರಿಗೆಲ್ಲ ತಿಳಿದಿತ್ತು. ಇದು ನಿಮಗೆ ವಿಚಿತ್ರವೆನಿಸಬಹುದು. ಆದರೆ ಇದೇ ಸತ್ಯಸಂಗತಿ. ಈ ಮಹಾವಿಪತ್ತಿನಿಂದ ಪಾರಾಗಲು ಅವರು ಕಂಡುಕೊಂಡ ಅದ್ಭುತ ಉಪಾಯವೊಂದಿತ್ತು. ಅವರು ತಮ್ಮ ಹಣ, ಬೆಳ್ಳಿ ಪಾತ್ರೆಗಳು ಮತ್ತು ಇತರ ಎಲ್ಲ ಬೆಲೆಬಾಳುವ ವಸ್ತುಗಳನ್ನು ಮಲಗುವ ಕೋಣೆಯ ಹೊರಗೆ ಅಚ್ಚುಕಟ್ಟಾಗಿ ರಾಶಿ ಮಾಡಿಟ್ಟು, ಅದರ ಪಕ್ಕದಲ್ಲಿ " ನೋಡೀಪ್ಪಾ, ನನ್ನ ಬಳಿ ಇರುವುದು ಇಷ್ಟೇ. ದಯವಿಟ್ಟು ಇದನ್ನು ತೆಗೆದುಕೊಂಡು ಹೋಗಿ ಮತ್ತು ನಿಮ್ಮ ಕ್ಲೋರೋಫಾರ್ಮ್ ಅನ್ನು ನನ್ನ ಮೇಲೆ ಬಳಸಬೇಡಿ, ದೇವರಾಣೆ ನನ್ನ ಬಳಿ ಇಷ್ಟೇ ಇರುವುದು" ಎಂದು ಬರೆದ ಟಿಪ್ಪಣಿಯನ್ನು ಇಟ್ಟು ಪ್ರತಿದಿನ ಮಲಗಲು ಹೋಗುತ್ತಿದ್ದರು.

ಇನ್ನು ಗಿರಿಜಾಂಬಾ ಅರ್ಥಾತ್ ಗಿರಿಜತ್ತೆ. ಎಲ್ಲರಂತೆ ಅವರಿಗೂ ಕಳ್ಳರ ಭಯ ಇತ್ತು. ಆದರೆ ಅವರು ಅದನ್ನು ಅಪಾರ ಧೈರ್ಯದಿಂದ ಎದುರಿಸುತ್ತಿದ್ದರು. ನಲವತ್ತು ವರ್ಷಗಳಿಂದ ಪ್ರತಿ ರಾತ್ರಿಯೂ ಕಳ್ಳರು ತಮ್ಮ ಮನೆಗೆ ನುಗ್ಗುತ್ತಿದ್ದಾರೆ ಎಂದೇ ನಂಬಿದ್ದ ಜೀವ ಅದು. ಆದರೆ ಅವರ ಮನೆಯಲ್ಲಿ ಇಲ್ಲಿಯವರೆಗೂ ಯಾವುದೇ ವಸ್ತು ಕಾಣೆಯಾದ ಇತಿಹಾಸವೇ ಇರಲಿಲ್ಲ. ಅದು ತಮ್ಮ ಪೂರ್ವಗ್ರಹದ ವಿರುದ್ಧ ಸಿಗುವ ಖಚಿತ ಪುರಾವೆ ಎಂದು ನಂಬಲು ಅವರು ಸಿದ್ಧರಿರಲಿಲ್ಲ ಅಷ್ಟೆ ! ಮನೆಗೆ ನುಗ್ಗಿದ ಕಳ್ಳರು ಏನನ್ನಾದರೂ ಕದಿಯುವ ಮೊದಲು ತಾನು ಒಳಗಿನಿಂದ ಚಪ್ಪಲಿಯನ್ನು ಕಾರಿಡಾರ್‌ನಲ್ಲಿ ಎಸೆದು ಅವರನ್ನು ಹೆದರಿಸಿ ಓಡಿಸುತ್ತೇನೆಂದು ಬಲವಾಗಿ ನಂಬಿದ್ದ ಗಟ್ಟಿಗಿತ್ತಿ ಗಿರಿಜತ್ತೆ. ಹಾಗಾಗಿ, ರಾತ್ರಿ ಮಲಗುವಾಗ ಅವರು ತಮ್ಮ ಮನೆಯಲ್ಲಿದ್ದ ಎಲ್ಲಾ ಚಪ್ಪಲಿಗಳೂ ಸುಲಭವಾಗಿ ಕೈಗೆ ಸಿಗುವಂತೆ ರಾಶಿ ಮಾಡಿಡುತ್ತಿದ್ದರು.

ದೀಪ ಆರಿಸಿದ ಐದು ನಿಮಿಷಗಳ ನಂತರ, ಅವರು ಮಂಚದಲ್ಲಿ ಎದ್ದು ಕುಳಿತು

"ಹೇಯ್! ಹೇಯ್!" ಎಂದು ಗಟ್ಟಿಯಾಗಿ ಕೂಗುತ್ತಿದ್ದರು. ಅವರ ಪತಿ ಅದೆಷ್ಟೋ ದಶಕಗಳ ಹಿಂದೆಯೇ ಈ ಇಡೀ ಪ್ರಹಸನವನ್ನು ನಿರ್ಲಕ್ಷಿಸಲು ಕಲಿತಿದ್ದರು. ಅವರು ಗಾಢ ನಿದ್ರೆಯಲ್ಲಿ ಇರುತ್ತಿದ್ದರು(ಅಥವಾ ಹಾಗೆ ನಟಿಸುತ್ತಿದ್ದರೋ? ದೇವನೇ ಬಲ್ಲ!) ಎಂಥ ಸಂದರ್ಭದಲ್ಲಿಯೂ ಅವರು ಮಡದಿಯ ಈ ಹುಚ್ಚಾಟಕ್ಕೆ ಪ್ರತಿಕ್ರಿಯಿಸುತ್ತಿರಲಿಲ್ಲ. ಹಾಗಾಗಿ ತುಸು ಸಮಯದ ನಂತರ ಎದ್ದು ಒಂದಿಷ್ಟೂ ಸದ್ದು ಮಾಡದೆ ಬಾಗಿಲಿನ ಬಳಿ ನಡೆದುಹೋಗಿ, ಅದನ್ನು ಮೆಲ್ಲನೆ ತೆರೆದು ಒಂದು ಚಪ್ಪಲಿಯನ್ನು ಕಾರಿಡಾರ್ನ ಒಂದು ದಿಕ್ಕಿನಲ್ಲಿಯೂ ಮತ್ತು ಅದರ ಜೊತೆ ಚಪ್ಪಲಿಯನ್ನು ಇನ್ನೊಂದು ದಿಕ್ಕಿನಲ್ಲಿಯೂ ಎಸೆದು ಮಗುಮ್ಮಾಗಿ ಬಂದುಬಿಡುತ್ತಿದ್ದರು. ಕೆಲವು ರಾತ್ರಿ ಅವರು ಎಲ್ಲ ಚಪ್ಪಲಿಗಳನ್ನೂ ಎಸೆದರೆ ಇತರ ರಾತ್ರಿಗಳಲ್ಲಿ ಒಂದೆರಡು ಜೋಡಿಗಳನ್ನು ಮಾತ್ರ ಎಸೆಯುವುದಿತ್ತು.

ಆದರೆ, ತಂದೆಯವರ ಮೇಲೆ ಆ ಮಂಚ ಬಿದ್ದ ಆ ರಾತ್ರಿ ನಡೆದ ಪ್ರಮುಖ ಘಟನೆ ನಮ್ಮ ಕಥೆಯ ಕೇಂದ್ರಬಿಂದು. ಹಾಗಾಗಿ ವಿಷಯಾಂತರ ಮಾಡುವುದು ಬೇಡ. ಅಂದು ಮಧ್ಯರಾತ್ರಿಯ ಹೊತ್ತಿಗೆ ನಾವೆಲ್ಲರೂ ಮಲಗಿದ್ದೆವು. ಮುಂದೆ ನಡೆದದ್ದನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಿಮಗೆ ಅಲ್ಲಿಯ ಕೋಣೆಗಳ ವಿನ್ಯಾಸ ಮತ್ತು ಅವುಗಳಲ್ಲಿ ಮಲಗಿದ್ದವರ ವ್ಯವಸ್ಥೆ ಗೊತ್ತಾಗಬೇಕು. ಮೇಲಿನ ಮಹಡಿಯ ಮುಂಭಾಗದ ಕೋಣೆಯಲ್ಲಿ (ಅಟ್ಟದಲ್ಲಿದ್ದ ತಂದೆಯವರ ಮಲಗುವ ಕೋಣೆಯ ಕೆಳಗೆ) ನನ್ನ ತಾಯಿ ಮಲಗಿದ್ದರು ಮತ್ತು ನನ್ನ ತಮ್ಮ ಮಂಜುವೂ ಅಲ್ಲಿದ್ದ. ಅವನು ಕೆಲವೊಮ್ಮೆ ನಿದ್ರೆಯಲ್ಲಿ "ವಂದೇ ಮಾತರಂ" ಅಂತಲೋ "ಲೆಫ್ಟ್.. ರೈಟ್.. ಲೆಫ್ಟ್" ಇತ್ಯಾದಿ ಬಡಬಡಿಸುತ್ತಿದ್ದ. ರಾಮಣ್ಣ ಮತ್ತು ನಾನು ಮಲಗಿದ್ದು ಈ ಕೋಣೆಗೆ ಹೊಂದಿಕೊಂಡಿದ್ದ ಮತ್ತೊಂದು ಕೋಣೆಯಲ್ಲಿ.

ನನ್ನ ಸೋದರ ರವಿ ನಮ್ಮ ಕೋಣೆಯ ಎದುರಿನ ಹಜಾರದ ಕಡೆಯ ಕೋಣೆಯಲ್ಲಿದ್ದ. ನಮ್ಮ ವಿಧೇಯ ನಾಯಿ ಟೈಗರ್ ಅಲ್ಲಿಯೇ ನೆಲದ ಮೇಲೆ ಮಲಗಿತ್ತು. ನನ್ನ ಮಂಚ ಸೈನ್ಯದಲ್ಲಿ ಬಳಸುವ ಬಗೆಯದು. ತುಂಬ ಭಾರವೇನೂ ಇರಲಿಲ್ಲ. ಸಾಮಾನ್ಯವಾಗಿ ಕೆಳಗೆ ನೇತಾಡುವ ಮಡಚುವ ಮೇಜಿನ ಬದಿಯ ಹಲಗೆಗಳಂತೆ ಇರುವ ಎರಡು ಬದಿಗಳನ್ನು ಮಧ್ಯದ ಭಾಗದೊಂದಿಗೆ ಅಡ್ಡವಾಗಿ ಮೇಲೆತ್ತಿದಾಗ ಮಾತ್ರ ಆರಾಮವಾಗಿ ಮಲಗಲು ಸಾಕಷ್ಟು ಜಾಗ ಸಿಗುತ್ತಿತ್ತು. ಈ ಬದಿಗಳನ್ನು ಮೇಲೆತ್ತಿದಾಗ, ಅಂಚಿನ ಕಡೆಗೆ ಅತಿಯಾಗಿ ಹೊರಳುವುದು ತುಂಬ ಅಪಾಯಕಾರಿ, ಏಕೆಂದರೆ ಹಾಗಾದಾಗ ಮಂಚ ನಿಮ್ಮ ಭಾರಕ್ಕೆ ಸಂಪೂರ್ಣವಾಗಿ ಪಲ್ಟಿ ಹೊಡೆಯಬಹುದು ಮತ್ತು ಹಾಗೇನಾದರೂ ಆದರೆ ಭಯಂಕರ ಶಬ್ದ ಮಾಡುತ್ತಾ ಇಡೀ ಮಂಚ ಮಲಗಿದವರ ಮೇಲೆ ಬಿದ್ದುಬಿಡುತ್ತದೆ.

ನನ್ನದು ಕುಂಭಕರ್ಣನ ನಿದ್ದೆ. ಒಮ್ಮೆ ಮಲಗಿದರೆ ನನ್ನನ್ನು ಎಬ್ಬಿಸಲು ನಾಲ್ಕು ಜನ ಬೇಕು. ಅಂಥ ಗಾಢ ನಿದ್ದೆ ನನ್ನದು. (ರಾಮಣ್ಣನಿಗೆ ನನ್ನ ನಿದ್ದೆಯ ಬಗ್ಗೆ ಹೇಳಿದ್ದು ಹಸಿಸುಳ್ಳು). ಮಧ್ಯರಾತ್ರಿ ಎರಡು ಗಂಟೆಯ ಸುಮಾರಿಗೆ ಈ ಮಂಚ ನನ್ನನ್ನು ನೆಲದ ಮೇಲೆ ಉರುಳಿಸಿ, ನನ್ನ ಮೇಲೆ ಬಿದ್ದಿದೆ. ಹಾಗಾದಾಗ, ಏನೋ ಆಯಿತು ಎಂದು ಅನಿಸಿತಾದರೂ ಏನಾಯಿತು ಎಂದು ಮೊದಲಿಗೆ ಗೊತ್ತಾಗಲಿಲ್ಲ. (ಈ ದೃಶ್ಯವನ್ನು ನಂತರ ನೆನಪಿಸಿಕೊಂಡಾಗ, ನನ್ನ ತಾಯಿ "ನಿಮ್ಮ ತಂದೆಯವರ ಮೇಲೆ ಮಂಚ ಬಿದ್ದಿದ್ದ ರಾತ್ರಿ" ಎಂದೇ ಹೇಳುತ್ತಿದ್ದರು.) ಮಂಚ ನನ್ನ ಮೇಲೆ ಬಿದ್ದು ನನ್ನ ದೇಹದ ಮೇಲೆ ನಿಂತಿತ್ತು. ನಾನು ಇನ್ನೂ ಬೆಚ್ಚಗೆ ಹೊದ್ದುಕೊಂಡಿದ್ದೆನಾದ್ದರಿಂದ ನನಗೆ ಪೆಟ್ಟೇನೂ ಆಗಿರಲಿಲ್ಲ. ಹಾಗಾಗಿ ನಾನು ಸಂಪೂರ್ಣವಾಗಿ ಎಚ್ಚರಗೊಳ್ಳಲಿಲ್ಲ, ಕೇವಲ ಪ್ರಜ್ಞೆಯ ಅಂಚನ್ನು ತಲುಪಿ ಮತ್ತೆ ನಿದ್ದೆಗೆ ಮರಳಿದೆ.

ಆದರೆ, ಈ ಗೌಜು–ಗದ್ದಲದ ಕಾರಣದಿಂದ ಪಕ್ಕದ ಕೋಣೆಯಲ್ಲಿ ಮಲಗಿದ್ದ ನನ್ನ ತಾಯಿಗೆ ತಕ್ಷಣವೇ ಎಚ್ಚರವಾಯಿತು. ತನ್ನ ದುಃಸ್ವಪ್ನ ನಿಜವಾಗಿದೆ: ಮೇಲಿನ ಮಹಡಿಯ ದೊಡ್ಡ ಮರದ ಮಂಚ ತಂದೆಯವರ ಮೇಲೆ ಬಿದ್ದಿದೆ ಎಂದೇ ನಂಬಿ ಕೂಡಲೇ , " ಬಾ! ನಿಮ್ಮ ತಂದೆಯವರ ಕೋಣೆಗೆ ಹೋಗೋಣ!" ಎಂದು ಕೂಗಿದರು. ಕೂಗು ಎನ್ನುವುದಕ್ಕಿಂತ ಹೆಚ್ಚು ಕಡಿಮೆ ಕಿರುಚಿದರು. ಅವರೊಂದಿಗೆ ಅದೇ ಕೋಣೆಯಲ್ಲಿದ್ದ ಮಂಜುವನ್ನು ಎಬ್ಬಿಸಿದ್ದು ನನ್ನ ಮಂಚದ ಸದ್ದಲ್ಲ. ತಾಯಿಯವರ ಈ ಚೀತ್ಕಾರ. ಯಾವುದೋ ಅನೂಹ್ಯ ಕಾರಣದಿಂದ ಅವರಿಗೆ ಉನ್ಮಾದ ರೋಗ ಬಂದಿದೆ ಎಂದು ಅವನಿಗೆ ಅನಿಸಿಬಿಟ್ಟಿದೆ. ಮರುಗಳಿಗೆ ಆತ ಆಕೆಯನ್ನು ಸಮಾಧಾನಪಡಿಸುವ ಪ್ರಯತ್ನದಲ್ಲಿ "ನೀನು ಸರಿಯಾಗಿದ್ದೀಯ, ಅಮ್ಮಾ!" ಎಂದು ಕೂಗಿದ. ಹತ್ತು ಸೆಕೆಂಡುಗಳ ಕಾಲ ಅವರಿಬ್ಬರ ಕೂಗಾಟದ ವಿನಿಮಯ ಇದ್ದೇ ಇತ್ತು: "ಬೇಗ ಬಾ! ನಿಮ್ಮ ತಂದೆಯವರ ಬಳಿಗೆ ಹೋಗೋಣ!" ಮತ್ತು "ನೀನು ಸರಿಯಾಗಿದ್ದೀಯ ಅಮ್ಮಾ!". ಈ ಕೂಗಾಟ – ರಂಪಾಟದಿಂದಾಗಿ ರಾಮಣ್ಣನಿಗೆ ಎಚ್ಚರವಾಗಿದೆ.

ಈ ವೇಳೆಗೆ ನನಗೆ ಸ್ವಲ್ಪ ಸ್ವಲ್ಪವೇ ಅರಿವು ಮೂಡತೊಡಗಿತ್ತು. ಏನೋ ಆಗುತ್ತಿದೆಯೆಂದು ಗೊತ್ತಾಗುತ್ತಿತ್ತು. ಆದರೆ ನಾನಿರುವುದು ಮಂಚದ ಮೇಲಲ್ಲ, ಅದರ ಕೆಳಗೆ ಎಂದು ನನಗೆ ಇನ್ನೂ ಅರಿವಿಗೆ ಬಂದಿರಲಿಲ್ಲ. ಭಯ ಮತ್ತು ಆತಂಕದ ಜೋರಾದ ಕೂಗುಗಳ ನಡುವೆ ಎಚ್ಚರಗೊಂಡ ರಾಮಣ್ಣ ತನಗೆ ಒಮ್ಮೆಲೇ ಉಸಿರುಕಟ್ಟುತ್ತಿದೆ ಮತ್ತು ನಾವೆಲ್ಲರೂ ಅವನಿಗೆ "ಪ್ರಜ್ಞೆ ಬರಿಸಲು" ಪ್ರಯತ್ನಿಸುತ್ತಿದ್ದೇವೆ ಎಂಬ ತೀರ್ಮಾನಕ್ಕೆ ಬಂದ. ಅವನು ಸಣ್ಣದಾಗಿ ನರಳುತ್ತಾ ತನ್ನ ಮಂಚದ ಮೇಲ್ಭಾಗದಲ್ಲಿ ನಿಂತ. ನಿಂತುಕೊಂಡೇ ಕರ್ಪೂರದ ದ್ರಾವಣದ ಲೋಟವನ್ನು ಕೈಗೆ ತೆಗೆದುಕೊಂಡ. ಆದರೆ ಅದೇನೆನಿಸಿತೋ, ಅದನ್ನು ಮೂಸುವ ಬದಲು ತನ್ನ ಮೈಮೇಲೆ ಸುರಿದುಕೊಂಡುಬಿಟ್ಟ. ಕೋಣೆಯೆಲ್ಲಾ ಕರ್ಪೂರದ ವಾಸನೆಯಿಂದ ತುಂಬಿಹೋಯಿತು. "ಉಫ್, ಅಹ್..." ಎಂದು ನೀರಲ್ಲಿ ಮುಳುಗುವವನಂತೆ ರಾಮಣ್ಣ ಏದುಸಿರು ಪಡುತ್ತಿದ್ದ. ಏಕೆಂದರೆ ಆ ಕಟುವಾಸನೆಯ ದ್ರಾವಣದ ಪ್ರಭಾವದಲ್ಲಿ ಅವನು ತನ್ನ ಉಸಿರನ್ನು ನಿಲ್ಲಿಸುವಲ್ಲಿ ಬಹುತೇಕ ಯಶಸ್ವಿಯಾಗಿದ್ದ. ಅವನು ಮಂಚದಿಂದ ಹಾರಿ, ತೆರೆದ ಕಿಟಕಿಯ ಕಡೆಗೆ ತಡಕಾಡುತ್ತಾ ಸಾಗಿದ. ಆದರೆ ಮುಚ್ಚಿದ ಕಿಟಕಿಯ ಎದುರು ಬಂದು ನಿಂತ. ತನ್ನ ಕೈಯಿಂದ ಗಾಜನ್ನು ಒಡೆದ. ಒಡನೆಯೇ ಅದು ಚೂರಾಗಿ ಕೆಳಗಿನ ಕಿರಿದಾದ ರಸ್ತೆಯ ಮೇಲೆ ಬಿದ್ದು ಅಪ್ಪಳಿಸಿದಾಗ ಬಂದ "ಫಳ್!" ಎಂಬ ಸದ್ದು ನಮಗೆಲ್ಲಾ ಕೇಳಿಸಿತು.

ಇದೇ ಸಂದರ್ಭದಲ್ಲಿ, ನಾನು ಏಳಲು ಪ್ರಯತ್ನಿಸಿದಾಗ, ನನ್ನ ಮಂಚ ನನ್ನ ಮೇಲೆ ಬಿದ್ದಿದೆಯೆಂದು ತಿಳಿದು ಗಾಬರಿ ಮತ್ತು ಗೊಂದಲ ಒಟ್ಟೊಟ್ಟಿಗೇ ಆದವು! ಆಗ ತಾನೇ ನಿದ್ದೆಯಿಂದೆದ್ದು ಮೊದಲೇ ಮಂಕಾಗಿದ್ದ ನಾನು, ಹಿಂದೆಂದೂ ಕಾಣದ ಕೇಳದ ಒಂದು ಅಪಾಯಕಾರಿ ಸನ್ನಿವೇಶದಿಂದ ನನ್ನನ್ನು ಪಾರುಮಾಡಲು ಈ ಇಡೀ ಗಲಾಟೆ ನಡೆಯುತ್ತಿರಬೇಕು ಎಂದು ಭಾವಿಸಿದೆ. "ನನ್ನನ್ನು ಇದರಿಂದ ಹೊರತೆಗೆಯಿರಿ!" ಎಂದು ಗಟ್ಟಿಯಾಗಿ ಕೂಗಿದೆ. "ನನ್ನನ್ನು ಹೊರತೆಗೆಯಿರಿ!". ನಾನು ಒಂದು ಗಣಿಯಲ್ಲಿ ಹೂತುಹೋದಂತೆ ಒಂದು ಕೆಟ್ಟ ಕನಸು ಬಿದ್ದಿದೆ ಎನ್ನುವುದು ನನ್ನ ಅನಿಸಿಕೆಯಾಗಿತ್ತು. ತನ್ನ ಕರ್ಪೂರದ ದ್ರಾವಣದಲ್ಲಿ ಒದ್ದಾಡುತ್ತಿದ್ದ ರಾಮಣ್ಣ "ಉಸ್, ಉಸ್" ಎಂದು ಉಸಿರೆಳೆದುಕೊಳ್ಳುತ್ತಿದ್ದನು. ಈ ಹೊತ್ತಿಗೆ ನನ್ನ ತಾಯಿ, ಇನ್ನೂ ಗಟ್ಟಿಯಾಗಿ ಕೂಗುತ್ತಾ ಅಟ್ಟದ ಬಾಗಿಲನ್ನು ತೆರೆಯಲು ಪ್ರಯತ್ನಿಸುತ್ತಿದ್ದರು. ಅವರ ಹಿಂದೆ ನಿಂತಿದ್ದ ಮಂಜು ಅಟ್ಟದ ಮೇಲೆ ಹತ್ತಿ ನನ್ನ ತಂದೆಯವರ ದೇಹವನ್ನು ಅವಶೇಷಗಳಿಂದ

ಹೊರತರಬಹುದೆನ್ನುವ ಉಮೇದಿನಲ್ಲಿದ್ದನು.

ಆದರೆ ಆ ಬಾಗಿಲು ಗಟ್ಟಿಯಾಗಿ ಕಚ್ಚಿಕೊಂಡುಬಿಟ್ಟಿತ್ತು. ತೆರೆಯಲು ಅಸಾಧ್ಯವೆಂಬಂತೆ ತೋರುತ್ತಿತ್ತು. ತಾಯಿಯವರು ಅದನ್ನು ಹುಚ್ಚಳಂತೆ ಎಳೆದಾಗ, ಇಡೀ ಕೋಣೆಯಲ್ಲಿ ಸದ್ದು-ಗದ್ದಲ ಇನ್ನಷ್ಟು ಹೆಚ್ಚಾಯಿತು. ಈ ವೇಳೆಗೆ ರವಿ ಮತ್ತು ಟೈಗರ್ಗೂ ಎಚ್ಚರವಾಗಿತ್ತು, ಒಬ್ಬನು ಸಿಕ್ಕಾಪಟ್ಟೆ ಪ್ರಶ್ನೆಗಳನ್ನು ಕೇಳುತ್ತಾ ಕೂಗುತ್ತಿದ್ದರೆ ಇನ್ನೊಬ್ಬ ಎಡಬಿಡದೆ ಬೊಗಳುತ್ತಿದ್ದ. ಈ ಎಲ್ಲರಿಗಿಂತ ದೂರವಿದ್ದ ಮತ್ತು ಆಳವಾದ ನಿದ್ದೆಯಲ್ಲಿದ್ದ ತಂದೆಯವರಿಗೆ, ಅಟ್ಟದ ಬಾಗಿಲಿಗೆ ಹೊಡೆಯುತ್ತಿದ್ದ ಸದ್ದಿನಿಂದ ಈ ವೇಳೆಗೆ ಎಚ್ಚರವಾಗಿತ್ತು. ಅವರು ಮನೆಗೆ ಬೆಂಕಿ ಬಿದ್ದಿದೆ ಎಂದುಕೊಂಡರು. "ನಾನು ಬಂದೆ! ಈಗಲೇ ಬಂದೆ!" ಎಂದು ಅಳುತ್ತಾ ನಿದ್ದೆಯ ಮಂಪರಿನಲ್ಲೇ ಕೂಗತೊಡಗಿದರು-ಅವರಿಗೆ ಪೂರ್ಣ ಪ್ರಜ್ಞೆ ಮರಳಿ ಬರಲು ಕೆಲವು ನಿಮಿಷಗಳೇ ಬೇಕಾದವು.

ಇದು ಮತ್ತಷ್ಟು ಗೊಂದಲಕ್ಕೆಡೆ ಮಾಡಿತು. ತಂದೆಯವರು ಇನ್ನೂ ಮಂಚದ ಕೆಳಗೆ ಸಿಲುಕಿಕೊಂಡಿದ್ದಾರೆ ಎಂದು ಭಾವಿಸಿದ ತಾಯಿಯವರಿಗೆ ಅವರ "ನಾನು ಬರುತ್ತಿದ್ದೇನೆ!" ಎಂಬ ಮಾತು ಭಗವಂತನನ್ನು ಭೇಟಿಯಾಗಲು ಹೊರಟವರ ದನಿಯ ಅಂತಿಮ ವಿಷಾದ ಮತ್ತು ಶರಣಾಗತಿಯ ಸೂಚನೆಯಂತೆ ಕೇಳಿಸಿತು. "ಅವರು ಸಾಯುತ್ತಿದ್ದಾರೆ!" ಎಂದು ಕಿರುಚಲು ಪ್ರಾರಂಭ ಮಾಡಿದರು. ಅವರಿಗೆ ಧೈರ್ಯ ತುಂಬಲು ರಾಮಣ್ಣ, "ನಾನು ಸರಿಯಾಗಿದ್ದೇನೆ!" ಎಂದು ಕೂಗಿದ. ತಾನು ಸಾವಿಗೆ ಹತ್ತಿರವಾಗಿದ್ದೇನೆ ಎಂದೂ ತಾಯಿಯವರ ಚಿಂತೆಗೆ ಅದೇ ಕಾರಣವೆಂದೂ ಅವನಿಗೆ ತೋಚಿತ್ತು. ಕೊನೆಗೆ ನಾನು ನನ್ನ ಕೋಣೆಯಲ್ಲಿದ್ದ ಸ್ವಿಚ್ ಹುಡುಕಿದೆ. ಸ್ವಿಚ್ ಸಿಕ್ಕಿತು. ಕೂಡಲೇ ದೀಪ ಹಾಕಿ ಬಾಗಿಲನ್ನು ತೆರೆದೆ. ಅಲ್ಲಿ ಅಟ್ಟದ ಬಾಗಿಲ ಬಳಿ ಇದ್ದ ಇತರರ ಜೊತೆ ನಾನು ಮತ್ತು ರಾಮಣ್ಣ ಸೇರಿಕೊಂಡೆವು.ರಾಮಣ್ಣನನ್ನು ಎಂದಿಗೂ ಇಷ್ಟಪಡದ ನಾಯಿ, ಇದೆಲ್ಲಾ ಗೊಂದಲಕ್ಕೆ ಅವನೇ ಅಪರಾಧಿ ಎಂದು ಭಾವಿಸಿ ಅವನ ಮೇಲೆ ಜಿಗಿಯಿತು-ಮತ್ತು ರವಿ ಆ ನಾಯಿಯನ್ನು ಎಸೆದು ರಾಮಣ್ಣನನ್ನು ಹಿಡಿದಿಟ್ಟುಕೊಳ್ಳಬೇಕಾಯಿತು. ಮೇಲಿನ ಮಹಡಿಯಲ್ಲಿ ತಂದೆಯವರು ಮಂಚದಿಂದ ಹೊರಬರುತ್ತಿರುವುದು ನಮಗೆ ಕೇಳಿಸಿತು.

ಧಡ್! ಎಂಬ ದೊಡ್ಡ ಸದ್ದಿನೊಂದಿಗೆ ರವಿ ಅಟ್ಟದ ಬಾಗಿಲನ್ನು ತೆರೆದ. ನಿದ್ರೆಯ ಮಂಪರಿನಲ್ಲಿದ್ದ ತಂದೆಯವರು ಸಿಡುಕುತ್ತಿದ್ದರು. ಆದರೆ ಸುರಕ್ಷಿತವಾಗಿದ್ದು ಅವರ ಆರೋಗ್ಯವೂ ಸರಿಯಿತ್ತು. ಸಾವಕಾಶವಾಗಿ ಮೆಟ್ಟಿಲು ಇಳಿಯುತ್ತಾ ಕೆಳಗೆ ಬಂದರು. ಅವರನ್ನು ನೋಡಿದ ತಾಯಿ ಕಣ್ಣೀರು ಹಾಕಲು ಪ್ರಾರಂಭಿಸಿದರು. ಟೈಗರ್ ಊಳಿಡಲು ಪ್ರಾರಂಭಿಸಿತು. " ಅಯ್ಯೋ, ದೇವರೇ, ಇಲ್ಲಿ ಏನು ನಡೀತಿದೆ?" ಎಂದು ತಂದೆಯವರು ಕೇಳಿದರು. ಕೊನೆಗೆ ನಾವೆಲ್ಲರೂ ಕೂಡಿ ಈ ವಿಚಿತ್ರ ಪರಿಸ್ಥಿತಿಯನ್ನು ಒಂದು ದೊಡ್ಡ ಜಿಗ್ ಸಾ ಪಜಲ್ನಂತೆ ಜೋಡಿಸಿದೆವು. ಆ ರಾತ್ರಿ ಬರಿಗಾಲಿನಲ್ಲಿ ಅಡ್ಡಾಡಿದ ಕಾರಣ ತಂದೆಯವರಿಗೆ ಥಂಡಿಯಾಯಿತು. ಅಷ್ಟೆ. ಅದು ಬಿಟ್ಟರೆ ಅಂಥ ಹೆಚ್ಚಿನ ದುಷ್ಪರಿಣಾಮಗಳೇನೂ ಆಗಲಿಲ್ಲ.

ಆದರೆ ಯಾವಾಗಲೂ ಎಲ್ಲದರಲ್ಲೂ ಒಳ್ಳೆಯದನ್ನೇ ಕಾಣುವ ತಾಯಿಯವರು ಮಾತ್ರ "ಸದ್ಯ! ಇವತ್ತು ನಿಮ್ಮ ಅಜ್ಜ ಇಲ್ಲಿ ಇರಲಿಲ್ಲ. ಅದೇ ಒಂದು ಸಮಾಧಾನ...." ಎಂದು ಷರಾ ಬರೆದರು.

■

# ರಂಗ ರುಕ್ಮಿಣಿ.. ಕಪ್ಪೆ ಪ್ರಸಂಗ

ವಿಲಾಸ ನಾ. ಹುದ್ದಾರ

ಮಕ್ಕಳಿನ್ನೂ ರಜಾ ಮುಗಿಸಿ ಅಜ್ಜ-ಅಜ್ಜಿಯ ಮನೆಯಿಂದ ತಿರಗಿ ಬಂದಿರಲಿಲ್ಲಾ. ಅಜ್ಜ-ಅಜ್ಜಿ ಅಂದ್ರ ಬೆಂಗಳೂರಿನೊಳಗ ಇರೋ ರಕ್ಮಿಣಿಯ ಅಪ್ಪ-ಅಮ್ಮ. ರಂಗನ ತಂದೆ-ತಾಯಿ ಇರೋದು ಹುಬ್ಬಳ್ಳಿಯೊಳಗ. ಇನ್ನೇನೂ ಅವರು ಇಲ್ಲಿಯೇ ಮಗನ ಹತ್ರ ಬರೋ ವಿಚಾರ ಮಾಡ್ಲಿಕತ್ಯಾರ. ರಂಗ-ರುಕ್ಮಿಣಿ ಮತ್ತು ಮಕ್ಕಳು ಅವರಿಗಾಗಿ ಜಾತಕ ಪಕ್ಷಿಯಂತೆ ಕಾಯಲಿಕ್ಕೆ ಹತ್ಯಾರ. ಹುಬ್ಬಳ್ಳಿ ಅಜ್ಜಿ ಹೇಳುವ ಮಜೆದಾರ ಕಹಾನಿಗಳನ್ನು ಕೇಳಲು ಮೊಮ್ಮಕ್ಕಳು ಉತ್ಸುಕರಾಗ್ಯರ. ಹುಬ್ಬಳ್ಳಿ ಅಜ್ಜನಿಗಂತೂ ಕಾಮಿಡಿ ಅಜ್ಜ ಅಂತ ಕರೀತಾರ. ಅವರೂ ಮೊಮ್ಮಕ್ಕಳನ್ನು ಸಾಕಷ್ಟು ನಗಿಸಕೋತ ಇರ್ತಾರ ಮತ್ತ ಅಷ್ಟ ಗೋಳ್ಯಾಡಸ್ತಾರ. ಮುಂದಿನ ವಾರದೊಳಗ ಮಕ್ಕಳು ಬರೋವರು ಇದ್ರು, ಅಲ್ಲಿ ತನಕಾ ರಂಗನಿಗೆ ಅವಳು ಮಗುವಾದರೆ ಅವಳಿಗೆ ಅವನು. ಆದ್ರ ಚಹಾ ಬೇಕಂದ್ರ ಅವನಿಗೇ ಮಾಡ್ಲಿಕ್ಕೆ ಹೇಳತಿದ್ಲು.

ಮುಂಜಾನೆಯ ಚಹಾ ಸವಿದು ಎಂದಿನಂತೆ ಅವಳು ಪ್ರಕೃತಿಯ ಕೂಗಿಗೆ ಓ ಗೊಟ್ಟು ಬಾಥ್ ರೂಮಿಗೆ ಹೋಗಿ ಕಿಟಾರನೆ ಕಿರಚಿದ್ಲು. ರಂಗ ಗಾಬರಿ ಆಗಿ ಓಡಿ ಹೋದಾ. ಅಲ್ಲಿ ನೋಡಿದ್ದೇನು.... ಅವಳು ಕೈಯೊಳಗ ನೀರಿನ ಮಗ್ ಹಿಡ್ಕೊಂಡು ಗಟ್ಟಿ ಕಣ್ಣು ಅದರ ಕಡೆ ಕೈ ತೋರಿಸ್ಕೋತ ನಿಂತ್ಲು. ನಡುಗುತ್ತ ಅಂತ ಬೇರೆ ಹೇಳಬೇಕಾಗಿಲ್ಲ. ಇವನಿಗೆ ನಗು ತಡೆಯಲಾಗದೆ ನಗಬೇಕೆಂದರೂ ಅವಳ ಪರಿಸ್ಥಿತಿ ನೋಡಿ ತಡ್ಕೊಂಡಾ. ಕಳೆದೆರಡು ದಿನಗಳಿಂದ ವರುಣನ ಕೃಪೆಯಾಗಿ ಸತತವಾಗಿ ಸುರಿದ ಮಳೆಯಿಂದ ಬಹುಶಃ ಕಿಡಕಿಯಿಂದ ಒಂದು ದೊಡ್ಡ ಕಪ್ಪೆ ಒಳಗೆ ಬಂದು ಬೆಚ್ಚಗೆ ಆ ಮಗ್‌ನೊಳಗೆ ವಿರಾಜಮಾನವಾಗಿತ್ತು. ಇವಳ ಕೂಗಿಗೆ ಅದು ಗಾಬರಿ ಆಗಿ ಇನ್ನಷ್ಟು ಮುದುಡಿ ಕೂತಿತ್ತು. ಅವನು ಅವಳ ಕೈಯಿಂದ ಆ ಮಗ್‌ನ್ನು ತೆಗೆದುಕೊಂಡು ಬಾಲ್ಕನಿಗೆ ಬಂದ. ಅಲ್ಲಿ ಮಗ್‌ನ್ನು ಕೆಳಗೆ ಮುಖ ಮಾಡಿ ಕೆಳಗೆ ಬೀಳಿಸ್ಲಿಕ್ಕೆ ಪ್ರಯತ್ನಿಸಿದ. ಬಹಶಃ ಕಪ್ಪೆ ಸಾಕಷ್ಟು ದೊಡ್ಡದು ಇದ್ದಿದ್ದರಿಂದ ಮಗ್‌ನೊಳಗ ಸಿಕ್ಕೊಂಡ್ಹಂಗ ಕಾಣಿಸತಿತ್ತು. ಅಲ್ಲದ ಅಂಜಿ ಮಗ್‌ನ್ನು ಗಟ್ಟಿಯಾಗಿ ಹಿಡ್ಕೊಂಡಿರಬಹುದೇನೋ?. ಹೀಗಾಗಿ ಕೆಳಮುಖವಾಗಿ ಮಾಡಿ ಝಾಡಿಸಿದರೂ ಸುಲಭವಾಗಿ ಬೀಳಲಿಲ್ಲ. ಅಷ್ಟರಲ್ಲಿ ಅವನ ರುಕ್ಕು ಸಾವರಿಸಿಕೊಂಡು ಬಂದು, "ನಿನಗ ಬುದ್ಧಿ- ಗಿದ್ದಿ ಅದ ಇಲ್ಲೋ... ಬಾಲ್ಕನಿ ಇಂದ ಕೆಳಮುಖ ಮಾಡಿ ಹಾಕೀದ್ರ ಕೆಳಗಿನವರ ಬಾಲ್ಕನಿ ಒಳಗ ಬಿದ್ರ.... ಮತ್ತ ಅದೊಂದ ರಾಮಾಯಣ .... ಅಪಾರ್ಟಮೆಂಟನ ಕಂಪೌಂಡ ಹೊರಗ ಗಟಾರ ಅದ ಅಲ್ಲಾ ಅಲ್ಲಿ ಬಿಟ್ಟ ಬಾ.... ಆದ್ರ ಗಟಾರದಾಗ ಹಾಕೋಮುಂದ ಸ್ವಲ್ಪ ಜ್ವಾಕಿ.... ಮಗ್ ಗಟ್ಟಿ ಹಿಡ್ಕೊಂಡ ಅದನ್ನ ಗಟಾರದಾಗ ಬಿಡ.... ಏನ?"

"ಏ.... ಅಷ್ಟ ನನಗ ತಿಳಿಯುದಿಲ್ಲ ಏನ..... ಐ.ಐ.ಎಮ್. ದಿಂದ ಎಮ.ಬಿ.ಎ. ಇದ್ದೇನಿ ."

"ಅದಕ್ಕ....ನನಗ ಹೆದ್ರಿಕಿ...." ಅವಳ ವ್ಯಂಗ್ಯ.... ಬಾಥ ರೂಮಿನಲ್ಲಿಯ ಅವನ ಮುಖದ ಮಂದಹಾಸ ಅವಳಿಗೆ ತಿಳಿದಿತ್ತು..... ಅದರ ಪ್ರತಿಕ್ರಿಯೆ ಇದು.

ಕಂಪೌಂಡನ ಹೊರಗಿನ ಗಟಾರದೊಳಗ ಅವನು ಅದನ್ನು ಬಿಡ್ಲಿಕ್ಕೆ ಪ್ರಯತ್ನಿಸಿದ. ಅದು ಜಪ್ಪೆಂದರೂ ಹೊರ ಬರ್ಲಿಕ್ಕೆ ತಯ್ಯಾರಿಲ್ಲ. ಗಾತ್ರವು ದೊಡ್ಡದು ಇದ್ದದ್ದಕ್ಕಾಗಿ

ಮಗ್‌ನ್ನ ಕೆಳ ಮುಖಮಾಡಿ ಸಾವಕಾಶವಾಗಿ ಝಾಡಿಸಿದ... ಉಹೂಂ.... ಕೆಳಗೆ ಬೀಳುವ ಲಕ್ಷಣ ಕಾಣಿಸಲಿಲ್ಲ... ಈಗ ನಿರ್ವಾಹ ಇಲ್ಲದ ಜೋರಾಗಿ ಝಾಡಿಸಿದ, ಕಪ್ಪೆ ಏನೋ ಬಿತ್ತು ಅದರ ಜೊತೆ ಮಗ್ಗೂ. ಹಣೆ ಹಣೆ ಚಚ್ಚಿ ಕೊಂಡ. ಎದುರಿಗೆ ಇರುವ ಅಂಗಡಿಯ ಹುಡುಗಿ ಇವನ ಸರ್ಕಸ ನೋಡ್ಲಿಕತ್ತಿದ್ಲು. ಗುರ್ತಿನವಳೇ. ಅವಳು ಒಂದು ಕೋಲನ್ನು ಇವನಿಗೆ ಸಹಾಯ ಮಾಡ್ಲಿಕ್ಕಂತ ತೊಗೊಂಡ ಬರೋವಷ್ಟರೊಳಗ ಇದು ನಡೆದು ಹೋತು. ಮಗ್ ಗಟಾರದಲ್ಲಿ ಬಿದ್ದದ್ದ ನೋಡಿ ಅಂಗಡಿಗೆ ತಿರುಗಿ ಹೋಗಿ ಹೊಸ ಮಗ್ ತಂದು ಕೊಟ್ಲು. ರೊಕ್ಕ ಆಮ್ಯಾಲೆ ಕೊಡ್ತೇನಿ ಅಂತ ಹೇಳಿ ಮನೆಗೆ ಬಂದ.



ಏನೋ ಸಾಧಿಸಿದವರ ಹಾಗೆ ಮುಖವನ್ನು ಮಾಡಿಕೊಂಡು ಒಳಗೆ ಬರೋತ್ಲೇ "ಏನ, ಎಮ.ಬಿ.ಎ, ಸಾಹೇಬ್ರ... ಕಪ್ಪೆ ಕಳಿಸಿ ಬಂದ್ರಾ......"

"ಒಹೋ.." ಜಂಬದಿಂದ ಹೇಳಿದಾ. ಅವಳು ಇವನ ಕೈಕಡೆ ನೋಡಿ,

"ಕಪ್ಪೆ ಒಂದನೋ... ಇಲ್ಲಾ ಅದರ ಜೋಡಿ ಮಗ್ಗೂ ಹೋತೋ..."

"ಕಪ್ಪೆ ಒಂದ.... ಮಗ್ ಇಲ್ಲೇ ಅದ ನೋಡು.." ಅವನು ಹೆಮ್ಮೆಯಿಂದ ಮಗ್ ತೋರಿಸಿದಾಗ....

"ಹೌದಲ್ಲೋ... ಶಹಭಾಶ್.... ಕಪ್ಪೆ ಹೋಗುವ ಮುಂದ ಮಗ್ ಬಣ್ಣಾನೂ ಬದಲಿಸಿ ಹೋತೇನ.... ನೀ ಒಯ್ಯೋ ಮುಂದ ನೀಲಿ ಬಣ್ಣದ ಮಗ್ ಇತ್ತು ಈಗ ಕೆಂಪು ಬಣ್ಣದ್ದ ಆಗೇದ..... ಮಸ್ತ ಜಾದೂ ಆತ ನೋಡ್..."

ರಂಗನ ಮುಖ ಹರಳೆಣ್ಣೆ ಕುಡಿದಂತೆ.........

...................... ಶ್ರೀ ಕೃಷ್ಣಾರ್ಪಣಮಸ್ತು ................... ■

## ಮೋಹ

ಗೆಳೆಯ ಗುರು ಜೊತೆ ಮಾತಾಡ್ತಾ ಹೋಗ್ತಿದ್ದ ಶಿವರಾಯರು ಯಾವುದರ ಮೇಲೂ ಮೋಹ ಇಟ್ಕೊಳ್ದೇ ಇದ್ರೆ ಸುಖವಾಗಿರಬಹುದು ಅಂದರು. ಮುಂದಿನ ಕ್ಷಣದಲ್ಲೇ ಬೆಣ್ಣೆ ದೋಸೆ ಹೋಟೆಲ್ ಕಂಡು ಬನ್ನಿ ಒಂದು ದೋಸೆ ಹೊಡ್ಕೊಂಡೇ ಹೋಗೋಣ ಅಂದಾಗ ಗುರು ಇದೇನು ಈಗ ತಾನೇ ಮೋಹ ಇಟ್ಕೋಬಾರದು ಅಂದ್ರಿ ಅಂದಿದ್ದಕ್ಕೆ ಒಂದೊಂದು ಸಾರಿ ಬೆಣ್ಣೆ ದೋಸೆ ಕಂಡು ಮೋಹ ಪಡಬಹುದು. ಎಲ್ಲಾ ಕಾನೂನುಗಳಿಗೂ ಒಂದು ಎಕ್ಸೆಪ್ಷನ್ ಇರುತ್ತಲ್ವೆ ಅಂದು ಹೋಟೆಲ್ ಒಳಗೆ ಹೆಜ್ಜೆ ಇಟ್ಟರು.

# ಅಪಥ್ಯ ಷಟ್ಪದಿ

ಅಣಕು ರಾಮನಾಥ್

ನಿತ್ಯ ಸತಿಯದು ಒಂದೆ ರಾಗವು
ಪಥ್ಯ ಮಾಡಿರಿ ಇಲ್ಲವಾದರೆ
ಸತ್ಯಕೂ ಲಂಬೋದರನ ಪಾರ್ಟ್ ಗಟ್ಟಿ ನಿಮಗೆಂದು
ಮಿಥ್ಯ ನುಡಿಯೆನು ಪೂರಿ ಹೊಟ್ಟೆಯು
ಲೇತು ಟಾಪಿನ ಫ್ಲ್ಯಾಟು ಸರ್ಫೇಸ್
ಇತ್ಯುಪಮೆಯನು ಪೊಂದಲೆನಗೋ ಸಗ್ಗ ಸದೃಶವದು

ಓಡು ನಿತ್ಯವು ಕಿಲೋ ಮೀಟರು
ಸ್ಪೀಡು ನಡಿಗೆಯೊಳಿರಲಿ ಎಂಬರು
ಧಡ್ಡು ಧಡ್ಡನೆ ಹೊಡೆದುಕೊಂಬುದು ಅಯ್ಯೊ ಎದೆಯೆನದು
ಫೀಡು ಮಾಡೆಲೊ ಇಲ್ಲವಾದರೆ
ಇಡೆನು ಒಂದೂ ಹೆಜ್ಜೆ ಮುಂದಕೆ
ಗ್ರೀಡಿ ಸ್ಟೊಮಕದು ಇಂತು ಪೇಳುತ ಸ್ಟ್ರೈಕು ಗೈಯುವುದು

ಸಂಡೆಯಿಂದಲೆ ವಾಕು ಮಾಡುವೆ
ಉಂಡೆ ಚಕ್ಕುಲಿ ದೂರ ಮಾಡುವೆ
ಬೆಂಡು ಮಾಡುವೆ ಬಾಡಿಯನು ಎಂದೆಂದ ದಿನದಂದೇ
ಫ್ರೆಂಡು ಬರ್ತಡೆಗೆಂದು ಕರೆಯೆ ಪ್ರ–
ಫೌಂಡು ಸ್ಲಿಮ್ಮಿಂಗ್ ಥಾಟ್ಸು ಎಲ್ಲವು
ಗ್ರೌಂಡು ಆದವು ಬಫೆಯ ಸಾಲಿನ ಟ್ರೀಟು ಬಿಡಲಹುದೇ

ಶೂನ್ಯ ಮಧ್ಯಃ ಪೂರ್ಣ ರೋಸ್ಟುಂ
ಅನ್ಯ ಹೋಟೆಲಿನಲ್ಲಲಭ್ಯಂ
ಕ್ಯಾನ್ ಯು ಫೋರ್ಗೋ ಬ್ರೌನು ವರ್ಣದ ಗರಿವಡೆಯ ಟೇಸ್ಟು
ಕೀನ್ಯ ಫೆಫ್ಫಿನ ಫ್ರೈಡು ನೂಡಲ್ಸ್
ಟಾನ್ಯ ಕುಕ್ಸುವ ಆಲು ಟ್ವಿಸ್ಟರ್
ಗ್ರ್ಯಾನ್ಯುಲರ್ ಚಿಲಿ ತಿನ್ನದಿರಲದು ಸಿನ್ನು ಫೋರ್ಮೋಸ್ಟು

ಪಾರ್ಕಿನಲಿ ಓಡಾಡುವಾಗಲು
ಬಾರ್ಕು ಟ್ರೀಯದು ಚಾಕೊಲೇಟನು
ಫೋರ್ಕು ಬ್ರ್ಯಾಂಚದು ಬೆಣ್ಣೆ ಮುರುಕನು ಜ್ಞಾಪಿಸುವುದಕಟಾ
ಚಿಕ್ಕ ಉರುವಲು ಫ್ರೆಂಚು ಫ್ರೈಸನು
ಬ್ಲ್ಯಾಕು ಸಾಯಿಲ್ ಡೀಸಿಬೀಯನು (ಡಿಸಿಬಿ: ಡೆತ್ ಬೈ ಚಾಕ್ಲೇಟ್)
ಛಕ್ಕನೈತರೆ ಮನಕೆ ಡಯಟನು ಪಾಲಿಸುವರುಂಟಾ?

ಡಂಬು ಬೆಲ್ಗಳ ತುದಿಗಳಂತೂ
ಉಂಡೆ ಲಾಡುಗಳಂತೆ ಕಂಡಿರೆ
ಕೊಂಡಿ–ಸಿದ ಬಾರ್ ವೇಯ್ಟು ಫೇಣಿ ಚಿರೋಟಿಯಂತಿರಲು
ಟ್ರೆಡ್ಡುಮಿಲ್ಲಲಿ ಕೊಂಚ ಓಡಿರೆ
ಡ್ರೆಡ್ಡುಫುಲ್ ಬಾಯಾರಿಕೆಯೆನಿಸೆ
ರೆಡ್ಡು ಬುಲ್ಲನು ಹೀರಿಬಿಡುವೆನು ಥರ್ಸ್ಟು ಕ್ವೆಂಚಿಸಲು

ಒಂದು ಮಾತನು ವೈದ್ಯ ಕೇಳ್ಕೆ
ಕೊಂದು ಅಪಿಟೈಟೆಂಥ ಬದುಕದು?
ತಿಂದು ತೇಗುತ ಸೊರ್ರ ಹೀರುತ ಇರಲು ಬಿಡು ಎನ್ನ
ಮುಂದು ಎಂದೋ ಬರುವ ಯಮನನು
ಇಂದಿನಿಂದಲೆ ದೂರವಿರಿಸಲು
ನೊಂದುಕೊಂಬುದು ಎನ್ನ ನಾಲಿಗೆ ಸಮ್ಮತಿಸದು ಮನ

■



## ಆಡಿಸಿದಳೆಶೋದೆ

**ನಳಿನಿ ಸೂರ್ಯಪ್ರಕಾಶ್**

ಸಂತ ತುಕಾರಾಂ ಸಿನಿಮಾ ನೋಡ್ತಿದ್ದೆ. ಸದಾಕಾಲ ಪಾಂಡುರಂಗ, ಪಾಂಡುರಂಗ ಅಂತ ಭಗವನ್ನಾಮ ಸ್ಮರಣೆ ಮಾಡ್ಕೋತ ನಿಶ್ಚಿಂತೆಯಿಂದಿರ್ತಿದ್ದ ಶಾಂತಮೂರ್ತಿ ತುಕಾರಾಮ. ಆತನ ಹೆಂಡತಿ ಜೀಜಾಬಾಯಿಗೆ ಬಾಯಿ ಜಾಸ್ತಿ. ಪಾಪ, ಅವಳು ತಾನೇ ಏನು ಮಾಡಿಯಾಳು, ಗಂಡ, ಮಕ್ಕಳು, ಸಂಸಾರವಷ್ಟೇ ತನ್ನ ಪ್ರಪಂಚವಾಗಿದ್ದ ಸಾಮಾನ್ಯ ಗೃಹಿಣಿ ಆಕೆ. ಉಂಡು, ಉಟ್ಟು, ತೊಟ್ಟು ಮಾಡಬೇಕೆಂಬ ಎಲ್ಲಾ ಲೌಕಿಕ ಆಸೆಗಳೂ ಆಕೆಗೆ ಸಹಜವಾಗಿದ್ದವು. ಪತಿರಾಯ ತುಕಾರಾಮನಾದರೋ ಪಾಂಡುರಂಗನಲ್ಲಿನ ತನ್ನ ಅನನ್ಯ ಭಕ್ತಿಯಿಂದಾಗಿ ನಾಳೆಯ ಚಿಂತೆಯಿಲ್ಲದೆ ನಿಶ್ಚಿಂತನಾಗಿದ್ದವ. ಗಂಡ ಪಾಂಡುರಂಗನಲ್ಲಿ ಭಕ್ತಿ ಮಾಡ್ತಾ, ಹೆಂಡತಿ ಇವರಿಗೇನು ಬೇರೆ ಕೆಲಸವಿಲ್ಲವೆ ಅಂತ ಪಾಂಡುರಂಗನನ್ನ ಬೈಕೋತ ಹೇಗೋ ಸಂಸಾರದ ರಥವನ್ನು ಎಳೀತಿದ್ರು. ತನ್ನ ಕೇವಲ ನಲವತ್ತೆರಡು ವರ್ಷಗಳ ಜೀವಿತಾವಧಿಯಲ್ಲಿ ಸುಮಾರು ಐದು ಸಾವಿರದಷ್ಟು ಅಭಂಗಗಳನ್ನು ರಚಿಸಿದ ಮಹಾನ್ ಸಂತ ತುಕಾರಾಮ. ಇಂಥ ಭಕ್ತ ಶಿರೋಮಣಿಯನ್ನು ಬಿಟ್ಟಿರಲಾಗದ ಭಗವಂತ ತನ್ನ ಪರಂಧಾಮಕ್ಕೆ ಬರಲು ಆತನಿಗೆ ಕರೆ ಕೊಟ್ಟೇಬಿಟ್ಟ. ಒಂದು ದಿನ ತುಕಾರಾಮ ತಾನು ಸದ್ಯದಲ್ಲೇ ವೈಕುಂಠಕ್ಕೆ ತೆರಳುವುದಾಗಿ ತನ್ನ ಹೆಂಡತಿಯ ಬಳಿ ಹೇಳಿ, "ಜೀಜಾ, ಇಷ್ಟು ವರ್ಷಗಳ ಕಾಲ ನನ್ನ ಸಹಧರ್ಮಿಣಿಯಾಗಿ ಈ ಸಂಸಾರದ ನೊಗವನ್ನು ನನಗಿಂತ ನೀನೇ ಹೆಚ್ಚು ಹೊತ್ತವಳು. ನೀನೂ ನನ್ನ ಜೊತೆ ವೈಕುಂಠಕ್ಕೆ ಬಂದುಬಿಡು" ಅಂತ ಇನ್ನಿಲ್ಲದಂತೆ ಕೇಳಿದರೂ ಜೀಜಾಬಾಯಿ ಒಲ್ಲೆ ಎನ್ನುತ್ತಾ, "ನಾನೂ ಬಂದ್ರೆ ಸಂಸಾರ ಸಾಗೋದು ಬೇಡ್ವೇ? ನೀವು ಬೇಕಿದ್ರೆ ಹೋಗಿ. ಆದ್ರೆ, ಬೇಗ ಹಿಂತಿರುಗಿ ಬಂದುಬಿಡಿ" ಅಂದಳು ! ಅಂತೂ ಆ ಸುದಿನ ಬಂದೇಬಿಡ್ತು. ಇಂದ್ರಾಣಿ ನದಿಯ ತೀರದಲ್ಲಿ ಪಾಂಡುರಂಗನ ಧ್ಯಾನದಲ್ಲಿ ಮಗ್ನನಾಗಿದ್ದ ತುಕಾರಾಮನನ್ನು ವೈಕುಂಠಕ್ಕೆ ಕರೆದುಕೊಂಡುಹೋಗಲು ಆಕಾಶಮಾರ್ಗದಲ್ಲಿ ಪುಷ್ಪಕವಿಮಾನವೊಂದು ಬಂದೇಬಿಡ್ತು. ತನ್ನ ಪತಿರಾಯ ಪಾಂಡುರಂಗನ ಮೇಲಿಟ್ಟಿದ್ದ ಅನನ್ಯ ಭಕ್ತಿಯ ಆಳವನ್ನು ಗ್ರಹಿಸದ ಜೀಜಾ ಇತ್ತ ಮನೆಯಲ್ಲಿ ಬೆರಣಿ ತಟ್ಕೋತ ಕೂತಿದ್ದಳು. ಊರವರಿಂದ ವಿಷಯ ತಿಳಿದು ಹೋ ಅಂತ ಬೊಬ್ಬೆಯಿಡ್ತಾ ಇಂದ್ರಾಣಿ ನದಿಯ ತೀರಕ್ಕೆ ಜೀಜಾಬಾಯಿ ಓಡಿಬರುವಷ್ಟರಲ್ಲಿ ಭಕ್ತ ತುಕಾರಾಮನನ್ನು ಹೊತ್ತ ಪುಷ್ಪಕವಿಮಾನವು ವೈಕುಂಠದ ಮಾರ್ಗವಾಗಿ ಮೇಲೇರಿ ಹೊರಟೇಬಿಟ್ಟಿತ್ತು. ಕೊನೆಯ ಈ ದೃಶ್ಯವನ್ನು ಕಂಡು ನನಗೆ ನಿರಾಶೆಯ ಜೊತೆ ಜೀಜಾಬಾಯಿಯ ಮೇಲೆ ಸಣ್ಣ ಸಿಟ್ಟೂ ಬಂತು. ಪಾಂಡುರಂಗನ ಬೈಕೋತಿದ್ರೂ ತನ್ನ ಪತಿರಾಯನ ಅಪರಿಮಿತ ಭಕ್ತಿಯಿಂದಾಗಿ ಪರಂಧಾಮಕ್ಕೆ ಹೋಗೋ ಛಾನ್ಸು ಕಳಕೊಂಡಳಲ್ಲ ಮೂಢ ಹೆಂಗಸು ! ಲೌಕಿಕದಲ್ಲಿ ಮುಳುಗಿದ್ದವಳಿಗೆ ಭಕ್ತಿ, ಮುಕ್ತಿಗಳ ಅರಿವು ಎಲ್ಲಿಂದ ಬರಬೇಕು ?" ಅಂತ ನನ್ನಷ್ಟಕ್ಕೆ ನಾನೇ ಬಡಬಡಿಸಿಕೊಳ್ತಾ ರಿಮೋಟಿನಿಂದ ಯೂಟ್ಯೂಬು ಜಾಲಾಡ್ತಾ ಕೂತವಳಿಗೆ ಥಟ್ಟಂತ ಕೆಲವು ವರ್ಷಗಳ ಹಿಂದಿನದೊಂದು ಪ್ರಸಂಗ ನೆನಪಾಯ್ತು.

ಒಮ್ಮೆ ಚನ್ನಪಟ್ಟಣದ ಹತ್ತಿರವಿರುವ ಅಂಬೆಗಾಲು ಬೆಣ್ಣೆ ಕೃಷ್ಣನ ದೇವಸ್ಥಾನಕ್ಕೆ ಹೋಗಿದ್ವಿ. ಈ ದೇವಸ್ಥಾನದ ಮುಖ್ಯ ಅಧಿದೇವತೆ ಶ್ರೀ ಅಪ್ರಮೇಯಸ್ವಾಮಿಯಾದರೂ ಇದು ಅಂಬೆಗಾಲು ಕೃಷ್ಣನ ದೇವಸ್ಥಾನವೆಂದೇ ಪ್ರಸಿದ್ಧ. ದೇವಾಲಯದ ಪ್ರಾಕಾರದ ವಾಯುವ್ಯ ಮೂಲೆಯಲ್ಲಿ ಒಂದು ಕೈಯಲ್ಲಿ ಬೆಣ್ಣೆ ಹಿಡಿದಿರುವ ಅಂಬೆಗಾಲು ಕೃಷ್ಣನ

ವಿಗ್ರಹವಿದೆ. ಈ ವಿಗ್ರಹವನ್ನು ಶ್ರೀ ವ್ಯಾಸರಾಯರು ಪ್ರತಿಷ್ಠಾಪಿಸಿದರಂತೆ. ಪುರಂದರದಾಸರು ಈ ದೇವಸ್ಥಾನಕ್ಕೆ ಬಂದಾಗ ಅಂಬೆಗಾಲು ಕೃಷ್ಣನ ಮೂರ್ತಿಯನ್ನು ಕಂಡು ಮೂಕವಿಸ್ಮಿತರಾಗಿ, ತಮ್ಮ ಅತ್ಯದ್ಭುತವಾದ ""ಆಡಿಸಿದಳೆಶೋದೆ ಜಗದೋದ್ಧಾರನ"" ಎಂಬ ಗೀತೆಯನ್ನು ಅಲ್ಲೇ ರಚಿಸಿ ಹಾಡಿದರಂತೆ. ಕಾಪಿರಾಗದಲ್ಲಿನ ಈ ಹಾಡನ್ನು ಎಷ್ಟು ಕೇಳಿದರೂ ಸಾಕೆನಿಸುವುದಿಲ್ಲ. ಜಗದೋದ್ಧಾರನಾದ ಭಗವಂತನ ಗುಣಗಾನದ ಜೊತೆಗೆ ಯಶೋದೆಯ ಮಾತೃವಾತ್ಸಲ್ಯದಲ್ಲಿನ ಮುಗ್ಧತೆಯನ್ನು ವರ್ಣಿಸುವ ಅತ್ಯಂತ ಸುಂದರವಾದ ರಚನೆಯಿದು. ತನ್ನ ಮಡಿಲಲ್ಲಿ ಆಡುತ್ತಿರುವವ ಸುಗುಣಾಂತರಂಗನಾದ, ಅಗಣಿತ ಮಹಿಮನಾದ ಸಾಕ್ಷಾತ್ ಜಗದೋದ್ಧಾರನೇ ಎಂದು ತಿಳಿಯದ ಯಶೋದೆ, ಪರವಾಸುದೇವನಾದ ತನ್ನನ್ನೇ ಆಡಿಸುವಂತೆ ತಾನೇ ಅವಳನ್ನಾಡಿಸುವ ಭಗವಂತನ ಲೀಲೆ ಕಂಡು ದಾಸರು ಮೂಕವಿಸ್ಮಿತರಾದಂತಿದೆ. ಸಾಕ್ಷಾತ್ ಪ್ರಹ್ಲಾದನ ಅವತಾರವೆನಿಸಿದ ಶ್ರೀ ವ್ಯಾಸರಾಯರು ಪ್ರತಿಷ್ಠಾಪಿಸಿದ ಆ ಮುದ್ದು ಕೃಷ್ಣನ ಮೂರ್ತಿಯನ್ನು ಕಂಡು ತಮ್ಮ ಶಿಷ್ಯರಾದ, ನಾರದಮುನಿಗಳ ಅವತಾರವೇ ಆದ ಪುರಂದರದಾಸರ ಹೃದಯದಲ್ಲಿ ಭಕ್ತಿರಸವುಕ್ಕಿ ಹರಿಯುವುದರಲ್ಲಿ ಆಶ್ಚರ್ಯ –ವೇನಿದೆ ! ಹಿಂದೆ ಇದೇ ಜೋಡಿ ಗುರು ಶಿಷ್ಯನಾಗಿ, ಶಿಷ್ಯ ಗುರುವಾಗಿದ್ದರಲ್ಲ, ಅಂದರೆ ಪ್ರಹ್ಲಾದರಾಗಿದ್ದ ಶ್ರೀ ವ್ಯಾಸರಾಯರಿಗೆ ಮೊದಲ ಗುರುವಾಗಿದ್ದವರೇ ನಾರದ ಮಹರ್ಷಿಗಳು ಅಂದರೆ, ಪುರಂದರದಾಸರು ! ಪ್ರಹ್ಲಾದನಿಗೆ ಗರ್ಭಾವಸ್ಥೆಯಲ್ಲೇ ಹರಿನಾಮ ದೀಕ್ಷೆಯನ್ನು ಕೊಟ್ಟವರು. ಪ್ರಹ್ಲಾದನ ಅಚಲ ಹರಿಭಕ್ತಿಗೆ ಸಾಟಿಯೆಲ್ಲಿದೆ ? ಅದಕ್ಕೆ ಅಲ್ಲವೆ ಯಾವುದೇ ಚಾಳಿ ಕುರಿತು "ಏನಂದ್ರೂ ಮಗ ಹರಿ ಅನ್ನೋದು ಬಿಡ" ಎಂಬ ಗಾದೆಮಾತು ಹುಟ್ಟಿರೋದು.




ಇಂಥ ಮನೋಹರವಾದ ಗೀತೆಯನ್ನು ರಚಿಸಲು ದಾಸರಿಗೆ ಸ್ಫೂರ್ತಿ ನೀಡಿದ ಆ ಮುದ್ದು ಬೆಣ್ಣೆ ಕೃಷ್ಣನ ಮೂರ್ತಿಯನ್ನು ಕಂಡಾಗ ನನಗೆ ನಮ್ಮ ಅಡುಗೆಕಟ್ಟೆಯ ಮೇಲಿಟ್ಟ ಪುಟ್ಟ ಮಿಕ್ಸಿ ಇದ್ದ್ಹಂಗಿದೆ ಅಂತ ಅನ್ನಿಸಿಬಿಡೋದೇ ! ಅಯ್ಯೋ ಮರುಳೇ ! ಸದಾ ಅಡುಗೆ, ಮನೆಗೆಲಸ ಅಂತ ಈ ಸಂಸಾರದಲ್ಲಿ ಮುಳುಗಿರುವ ಈ ಜೀವಕ್ಕೆ ಇಂತಹ ಯೋಚನೆಗಳಲ್ಲದೆ ಮತ್ತೇನು ತಾನೆ ಬಂದೀತು ? ಈ ಪ್ರಸಂಗ ನೆನಪಾಗಿ, ಆಗಷ್ಟೇ ತುಕಾರಾಮನ ಹೆಂಡತಿ ಜೀಜಾಬಾಯಿಯಿಯನ್ನು ಟೀಕಿಸಿದ್ದು ನೆನೆದು ನಾಚಿಕೆಯಾಯ್ತು. "ತಾಯಿ ಜೀಜಾ, ವೈಕುಂಠ ತಪ್ಪಿದರೇನು, ಅಂಥ ಭಕ್ತಶಿರೋಮಣಿಯಾದ ತುಕಾರಾಮನ ಹೆಂಡಿತಿಯಾಗಿದ್ದ ನೀನೇ ಧನ್ಯಳು" ಅಂದ್ಕೋತ ಮಧ್ಯಾಹ್ನದ ಅಡುಗೆ ತಯಾರಿಗಾಗಿ ಅಡುಗೆ ಮನೆ ಹೊಕ್ಕೆ.

■

# “ನಮ್ಮ ಕಾಲದಲ್ಲಿ ಅಂಗಡಿ ಇತ್ತು... ಈಗ ಆಪ್ ಇದೆ!”

(ಹಿರಿಯ ನಾಗರಿಕನ ಆನ್‌ಲೈನ್ ಶಾಪಿಂಗ್ ಅನುಭವಗಳು)

**ಸಹನಾ ಪ್ರಸಾದ್**

ನಮ್ಮ ಕಾಲದಲ್ಲಿ ಶಾಪಿಂಗ್ ಅಂದ್ರೆ ಒಂದು ಕಾರ್ಯಕ್ರಮ. ಬೆಳಗ್ಗೆ ಬೇಗ ಎದ್ದು, ಬಟ್ಟೆ ಇಸ್ತ್ರಿ ಮಾಡಿ, ಪರ್ಸ್‌ನಲ್ಲಿ ಹಣ ಹಾಕಿಕೊಂಡು, **“ಹೊರಡೋಣ ಬನ್ನಿ”** ಅಂತ ಮನೆಯವರನ್ನು ಕರೆದುಕೊಂಡು ಹೊರಡುವುದು. ಬಸ್ ಹಿಡಿದು, ಮಾರುಕಟ್ಟೆ ತಲುಪಿ, ಅಂಗಡಿ ಅಲೆದು, ಅವನ ಹತ್ತಿರ ಚೌಕಾಸಿ ಮಾಡಿ, ಮನೆಯವರನ್ನು ಸಾಕು ನಡಿ ಎಂದು ಗದರಿ, ಯಾವುದಾದರೂ ಹೋಟೆಲಿನಲ್ಲಿ ಮಸಾಲೆ ದೋಸೆ ತಿಂದು, ಕಾಫಿ ಕುಡಿದು, ಸುಸ್ತಾಗಿ ಮನೆಗೆ ಬರುವುದೇ ಮಜಾ. ಈಗ? ಶಾಪಿಂಗ್ ಅಂದ್ರೆ ಸೋಫಾದ ಮೇಲೆ ಕುಳಿತು, ಕನ್ನಡಕ ಹಾಕಿಕೊಂಡು, ಮೊಬೈಲ್‌ನಲ್ಲಿರುವ ಆಪ್ ಜೊತೆ ಮಾತಾಡುವುದು. ಅಂಗಡಿಯವನ ಬದಲು, ಈಗ ನಮಗೆ ನೋಟಿಫಿಕೇಶನ್ಗಳು, ಆಫರ್‌ಗಳು ಇತ್ಯಾದಿ.

"ಅಯ್ಯೋ, ಆ ಪಾಟಿ ರಶ್ ಎಲ್ಲೆಡೆ. ಜನಜಂಗುಳಿ ಮಧ್ಯೆ ಕಷ್ಟಪಡುವ ಬದಲು ಹಾಯಾಗಿ ಮನೆಯಲ್ಲಿಯೇ ಕುಳಿತು ತರಿಸಿಕೊಳ್ಳಬಹುದು ಅಲ್ಲವೆ?" ಎನ್ನುತ್ತಾರೆ ಜನ. ಅದೂ ನಿಜವೇ. ಹಾಯಾಗಿ ಹೊರಗೆ ಹೋಗುವ ಸಮಯ ಮುಗಿಯಿತು. "ಎಲ್ಲ, ವಯಸ್ಸಾದ ಮೇಲೆ ಮನೆಯಲ್ಲಿರಿ, ಹೊರಗೆ ಬರುವುದು ಏಕೆ" ಎಂದು ಬೈಸಿಕೊಳ್ಳಬೇಕು, ಎಲ್ಲರಿಂದ!

ಇತ್ತೀಚಿಗೆ ಒಂದು ಶರ್ಟ್ ಆರ್ಡರ್ ಮಾಡಿದೆ. ಫೋಟೋದಲ್ಲಿ ಅದು ತುಂಬಾ ಚೆನ್ನಾಗಿ ಕಾಣುತ್ತಿತ್ತು, ಮಾಡೆಲ್ ತಾರಾ ಕಾಣಬಹುದು ಅಂತಲ್ಲದಿದ್ದರೂ, ಸ್ಮಾರ್ಟ್ ಆಗಿ ಕಾಣುವೆ ಎಂದು ಭರವಸೆ ಹೊತ್ತು, ದುಡ್ಡು ಕಟ್ಟಿದೆ. **“ಪರ್ಫೆಕ್ಟ್ ಫಿಟ್”** ಅಂತ ಬರೆದಿದ್ದ ಆ ಶರ್ಟ್ ಯಾರಿಗೆ ಪರ್ಫೆಕ್ಟ್ ಅನ್ನೋದು ಮಾತ್ರ ಗೊತ್ತಾಗಲಿಲ್ಲ. "ಯದ್ವಾ ತದ್ವಾ ಹೊಟ್ಟೆ ಬೆಳೆಸಿದರೆ ಯಾವ ಶರ್ಟ್ ಫಿಟ್ ಆಗುತ್ತೆ?" ಎಂದು ಮನೆಯವರಿಂದ ಮಂಗಳಾರತಿ ಬೇರೆ!

ನಮ್ಮ ಕಾಲದಲ್ಲಿ ಶೂ ಅಂದ್ರೆ ಕಾಲಿಗೆ ಹಾಕುವ ಪಾದರಕ್ಷೆ. ಚಪ್ಪಲಿಗಿಂತ ತುಸು ಮೇಲು. ಈಗ ಶೂ ಅಂದ್ರೆ, “Running”, “Walking”, “Casual”, “Formal”, “Orthopedic” ಅಂತ ನೂರಾರು ವರ್ಗ. ನಾನು ಒಂದು “Comfortable” ಶೂ ಆರ್ಡರ್ ಮಾಡಿದೆ. ಗಟ್ಟಿಯಾಗಿತ್ತು. ನಡೆಯಬೇಕು , ನಡೆದು ಮೆತ್ತಗೆ ಮಾಡಬೇಕು ಎಂಬ ಬಿಟ್ಟಿ ಸಲಹೆ. ಆದರೆ ಮೆತ್ತಗಾಗುವ ಮುನ್ನ ಏನು ಮಾಡುವುದು? ಗೊತ್ತಾಗಲಿಲ್ಲ. ಎತ್ತಿಟ್ಟೆ !

ಆಫರ್ ಅನ್ನೋದು ಈಗಿನ ಕಾಲದ ದೊಡ್ಡ ಮೋಸ.

**“**80% OFF !**”**

“Senior Citizen Special!”

ಆಹಾ, ನಮ್ಮನ್ನು ನೆನೆಸಿಕೊಳ್ಳುವವರೂ ಇದಾರೆ ಎಂದು ಖುಷಿಯಾದೆ, ತಕ್ಷಣ ಆರ್ಡರ್ ಮಾಡಿದೆ. ನಂತರ ಬಿಲ್ ನೋಡಿದಾಗ, **“ಡಿಸ್ಕೌಂಟ್ ಕೊಟ್ಟ ಮೇಲೆ ಈ ಬೆಲೆ ಇದ್ದರೆ, ಮೊದಲಿಗೆ ಎಷ್ಟು ಇತ್ತು?”** ಅಂತ ನನ್ನ ಪಿಂಚಣಿ ಕಣ್ಣೀರಿಟ್ಟಿತು.

ಆನ್‌ಲೈನ್ ಶಾಪಿಂಗ್‌ನ ಅತಿ ದೊಡ್ಡ ತಲೆನೋವು – ಪ್ಯಾಕೆಟ್ ತೆರೆಯುವುದು.

ನಮ್ಮ ಕೈಗಳು ಈಗ ಹಿಂದಿನಂತಿಲ್ಲ. ಟೇಪ್, ಪ್ಲಾಸ್ಟಿಕ್, ಮತ್ತೊಂದು ಬಾಕ್ಸ್, ಮತ್ತೆ ಟೇಪ್.. ಕೊನೆಗೆ ವಸ್ತುವನ್ನು ತೆಗೆಯುವಷ್ಟರಲ್ಲಿ, ಸಾಕಷ್ಟು ಬ್ರೇಕುಗಳು ಆಗಿ, ಒಂದೆರಡು ಕಪ್ ಟೀ ಹೊಟ್ಟೆಗೆ ಹೋಗಿರುತ್ತದೆ!




ಒಮ್ಮೆ ನಾನು ಮಿಕ್ಸಿ ಆರ್ಡರ್ ಮಾಡಿದೆ. ಪ್ಯಾಕೆಟ್ ಬಂದಾಗ ಇದೇನು , ಇಷ್ಟು ದೊಡ್ಡದು. "ನಾವು ಫ್ರಿಜ್ ಆರ್ಡರ್ ಮಾಡಿಲ್ಲಪ್ಪ" ಎಂದು ಟೆಂಪೋದವನಿಗೆ ಹೇಳಿದೆ. ಪ್ಯಾಕೆಟ್ ತೆರೆದರೆ, ಅದರ ಜೊತೆ ಐದು ಪುಸ್ತಕಗಳಷ್ಟು "ಯೂಸರ್ ಮ್ಯಾನುಯಲ್". ಮಿಕ್ಸಿ ಬಳಸೋಕೆ ಮೊದಲು ಒಂದು ಡಿಗ್ರಿ ಬೇಕು ಎನಿಸಿತು!

"ಇಷ್ಟ ಆಗದೆ ಇದ್ದಾರೆ ವಾಪಸ್ ಮಾಡಿ!" ಎಂದಿರುತ್ತೆ ಜಾಹೀರಾತು. ಆದರೆ ರಿಟರ್ನ್ ಮಾಡೋದು ಅಂದ್ರೆ ಮತ್ತೊಂದು ಸಾಹಸ. ಮೊದಲು ಆಪ್ ತೆಗೆಯಬೇಕು.

ನಂತರ ಪಾಸ್ವರ್ಡ್ ನೆನಪಿಸಿಕೊಳ್ಳಬೇಕು.ನಂತರ OTP ಬರುತ್ತದೆ.

ಅಷ್ಟರಲ್ಲಿ , ನಾವು ಯಾಕೆ ಇದನ್ನೆಲ್ಲಾ ಮಾಡ್ತಿದ್ದೀವಿ ಅನ್ನೋದೇ ಮರೆತುಹೋಗುತ್ತದೆ.

ಹಾ, ಇನ್ನೊಂದು ಮರೆತೆ. ಡೆಲಿವರಿ ಕೊಡಲು ಬಂದಾತನಿಗೆ ಸಮಯವಿದ್ದರೆ ಒಂದು ಲೋಟ ಕಾಫಿ ಕೊಟ್ಟು, ಕಷ್ಟ ಸುಖ ವಿಚಾರಿಸುತ್ತಾ ಕೂರಬಹುದು. ಒಬ್ಬೊಬ್ಬರೇ ಇದ್ದರೆ ಇದು ಒಳ್ಳೆಯದು ಕೂಡ. ಅಕಸ್ಮಾತ್ ನಾವು ಕೆಳಗೆ ಬಿದ್ದಿದ್ದರೆ, ಏಳಲಾಗದೆ ಒದ್ದಾಡುತ್ತಿದ್ದರೆ, ಯಾರಾದರೂ ಬಂದು ಎತ್ತುತ್ತಾರೆ. ಆದರೆ ನಮ್ಮ ಏಕಾಂಗಿತನವನ್ನು ದುರುಪಯೋಗ ಪಡಿಸಿಕೊಳ್ಳದಿದ್ದರೆ ಸಾಕು!

ಆದರೂ ಒಪ್ಪಿಕೊಳ್ಳಬೇಕು–ಆನ್‌ಲೈನ್ ಶಾಪಿಂಗ್ ನಮಗೆ ಒಂದು ಖುಷಿ ಕೊಡುತ್ತದೆ. ಹೊರಗೆ ಹೋಗದೇ, ಟ್ರಾಫಿಕ್ ಗಲಾಟೆ ಇಲ್ಲದೇ, ಕಾಲು ನೋವಿಲ್ಲದೇ, ಮನೆಯಲ್ಲೇ ಕುಳಿತು ಜಗತ್ತನ್ನೇ ಕಾರ್ಟ್‌ಗೆ ಹಾಕಿಕೊಳ್ಳಬಹುದು.

ನಮ್ಮ ಕಾಲದಲ್ಲಿ ನಾವು ಅಂಗಡಿಗೆ ಹೋಗುತ್ತಿದ್ದೆವು. ಈಗ ಅಂಗಡಿಗಳೇ ನಮ್ಮ ಮನೆಗೆ ಬರುತ್ತಿವೆ. ವ್ಯತ್ಯಾಸ ಏನು ಗೊತ್ತಾ? ಆಗ ನಾವು ಬೇಕಾದ್ದನ್ನೇ ಕೊಂಡುಕೊಳ್ಳುತ್ತಿದ್ದೆವು. ಈಗ "ಆಫರ್" ನೋಡಿಕೊಂಡು ಬೇಡವಾದದ್ದನ್ನೂ ಕೊಂಡುಕೊಳ್ಳುತ್ತಿದ್ದೇವೆ.

ಆದರೂ, ಈ ವಯಸ್ಸಿನಲ್ಲಿ ಒಂದು ಪಾರ್ಸಲ್ ಬಂದಾಗ, ಅದನ್ನು ತೆಗೆಯುವ ಖುಷಿ... ಅದು ಚಿಕ್ಕ ಮಕ್ಕಳಿಗೆ ಚಾಕೊಲೇಟ್ ಸಿಕ್ಕಂತೆ. ವಸ್ತು ಉಪಯೋಗವಾಗಲಿ, ಬೇಡವಾಗಲಿ – ಖುಷಿ ಮಾತ್ರ ಗ್ಯಾರಂಟಿ. ನಮ್ಮ ವಯಸ್ಸಿಗೆ ಅದೇ ಮುಖ್ಯ ಅಲ್ಲವೆ? ■